ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 15 ಶುಕ್ರವಾರ 2022

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 355 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com ₹4

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 15 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 355 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣ: ಸಚಿವ ಸ್ಥಾನಕ್ಕೆ

ಇಂದು ಈಶ್ವರಪ್ಪ ರಾಜೀನಾಮೆ

- ಸ್ವತಃ ಸಚಿವ ಈಶ್ವರಪ್ಪನವರೇ ಶಿವಮೊಗ್ಗದಲ್ಲಿ ಘೋಷಣೆ
- ಪಕ್ಷಕ್ಕೆ ಮುಜುಗರ ಆಗುವುದನ್ನು ತಪ್ಪಿಸಲು ಈ ನಿರ್ಧಾರ
- ಇಂದು ಮುಖ್ಯಮಂತ್ರಿಗೆ ರಾಜೀನಾಮೆ ಸಲ್ಲಿಕೆಗೆ ತೀರ್ಮಾನ

ಶಿವಮೊಗ್ಗ, ಏ.14–ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪ ಎದುರಿಸುತ್ತಿರುವ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಸಚಿವ ಸ್ಥಾನಕ್ಕೆ ನಾಳೆ (ಏ.15) ಸಂಜೆ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

ನಿನ್ನೆ ಮಧ್ಯಾಹ್ನ ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಯಾವುದೇ ಕಾರಣಕ್ಕೂ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಘೋಷಿಸಿದ ನಂತರ ಇನ್ನು ಮೂರು ದಿನ ಮಾಧ್ಯಮದವರೊಂದಿಗೆ ಮಾತನಾಡುವುದಿಲ್ಲ ಎಂದು ತಿಳಿಸಿದ್ದ ಸಚಿವ ಕೆ.ಎಸ್.ಈಶ್ವರಪ್ಪ, ಗುರುವಾರ ಸಂಜೆ ಶಿವಮೊಗ್ಗದ ಬಿಜೆಪಿ ಕಚೇರಿಯಲ್ಲಿ ತುರ್ತು ಪತ್ರಿಕಾಗೋಷ್ಠಿ ನಡೆಸಿ, ರಾಜೀನಾಮೆ ಬಗ್ಗೆ ಪ್ರಕಟಿಸಿದರು.

ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ನನ್ನದೇನೂ ತಪ್ಪಿಲ್ಲ. ಆದರೆ, ಪಕ್ಷಕ್ಕೆ ಮುಜುಗರವಾಗಬಾರದು ಎಂಬ ಕಾರಣಕ್ಕಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದೇನೆ. ನಾಳೆ ಸಂಜೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಲಿದ್ದೇನೆ ಎಂದು ಹೇಳಿದರು.

ಪ್ರಧಾನಿಯಿಂದ ಸಂದೇಶ: ಈಶ್ವರಪ್ಪ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಪ್ರಧಾನಿ ನರೇಂದ್ರ ಮೋದಿ ಸಂದೇಶ ರವಾನಿಸಿದ್ದರು ಎಂದು ಮೂಲಗಳು ತಿಳಿಸಿವೆ. ಈಶ್ವರಪ್ಪನವರು ಶೇ.40ರಷ್ಟು ಕಮೀಷನ್ ಕೇಳುತ್ತಿರುವುದರಿಂದಲೇ ತಾವು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಗುತ್ತಿಗೆದಾರ ಸಂತೋಷ್ ಪಾಟೀಲ್ ವಾಟ್ಸಪ್ ಸಂದೇಶವನ್ನು ರವಾನಿಸಿದ್ದ ಹಿನ್ನೆಲೆಯಲ್ಲಿ ಈಶ್ವರಪ್ಪ ಮತ್ತು ಅವರ ಇಬ್ಬರು ಆಪ್ತರ ವಿರುದ್ಧ ಉಡುಪಿ ಟೌನ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಈಶ್ವರಪ್ಪ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಬೇಕು ಹಾಗೂ ಅವರನ್ನು ಬಂಧಿಸಬೇಕು ಎಂದು ಕಾಂಗ್ರೆಸ್ ರಾಜ್ಯಾದ್ಯಂತ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದೆ. ಮತ್ತೊಂದೆಡೆ ಗುತ್ತಿಗೆದಾರರ ಸಂಘವೂ ಕೂಡ ಸಂತೋಷ್ ಪಾಟೀಲ್ ಆತ್ಮಹತ್ಯೆಗೆ ಈಶ್ವರಪ್ಪನವರೇ ಕಾರಣ ಎಂದು ಆರೋಪಿಸಿತ್ತು. ಇನ್ನು ಸಂತೋಷ್ ಪಾಟೀಲ್ ಕುಟುಂಬದವರು ಈಶ್ವರಪ್ಪನವರನ್ನು ● 6ನೇ ಪುಟಕ್ಕೆ



ನಾನು ಯಾವುದೇ ತಪ್ಪು ಮಾಡಿಲ್ಲ. ನಾನು ತಪ್ಪು ಮಾಡಿದ್ದರೆ ನಮ್ಮ ಮನೆ ದೇವರಾದ ಚೌಡೇಶ್ವರಿ ನನಗೆ ಶಿಕ್ಷೆ ನೀಡಲಿ. ನಾನು ದೇವರನ್ನು ನಂಬಿದ್ದೇನೆ. ಎಲ್ಲಾ ಸವಾಲುಗಳನ್ನು ಎದುರಿಸಿ ಆರೋಪ ಮುಕ್ತನಾಗಿ ಹೊರ ಬರುತ್ತೇನೆ. ಈ ಪ್ರಕರಣದ ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇನೆ.
–ಕೆ.ಎಸ್.ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಸಚಿವ.

ಈಶ್ವರಪ್ಪ ನೈತಿಕ ಹೊಣೆ ಹೊತ್ತು ರಾಜೀನಾಮೆ


ಸಿಎಂ ಬಸವರಾಜ ಬೊಮ್ಮಾಯಿ ಪ್ರಕಟ



ಬೆಂಗಳೂರು: ಸಚಿವ ಕೆ.ಎಸ್.ಈಶ್ವರಪ್ಪ ಅವರು ನೈತಿಕ ಹೊಣೆ ಹೊತ್ತು, ಸ್ವಪ್ರೇರಣೆಯಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ಇಂದು ಮಾಧ್ಯಮದವರೊಂದಿಗೆ ಮಾತನಾಡುತ್ತಾ, ಕೆ.ಎಸ್.ಈಶ್ವರಪ್ಪ ಅವರು ನನ್ನ ಬಳಿ ಮಾತನಾಡಿದರು. ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ ಹಾಗೂ ತಪ್ಪಿಲ್ಲ ಎನ್ನುವ ಸಂಪೂರ್ಣ ವಿಶ್ವಾಸವಿದೆ. ಹೀಗಾಗಿ ನನಗೆ ನೈತಿಕತೆ ಇದೆ. ಈಗ ಅದನ್ನಿಟ್ಟುಕೊಂಡು ಮಾತನಾಡಿದರೆ ಬಹಳಷ್ಟು ಜನರಿಗೆ ಇರಿಸುಮುರುಸಾಗುತ್ತದೆ. ಅದಾಗುವುದು ಬೇಡ. ಇದರ ತನಿಖೆ ಮುಗಿಸಿ, ಸತ್ಯ ಹೊರ ಬಂದು, ನನ್ನ ಮೇಲೆ ಇರುವ ಆರೋಪಗಳಿಂದ ವಿಮುಕ್ತನಾಗಿ ಹೊರ ಬರುತ್ತೇನೆ. ಅಲ್ಲಿವರೆಗೂ ನಾನು ಈ ಸ್ಥಾನದಲ್ಲಿರಲು ಬಯಸುವುದಿಲ್ಲ ಎಂದು ಹೇಳಿದ್ದಾರೆ. ಆ ಪ್ರಕಾರ ಅವರು ಪತ್ರಿಕಾಗೋಷ್ಠಿಯಲ್ಲಿಯೂ ತಿಳಿಸಿದ್ದಾರೆ. ನಾಳೆ ಸಂಜೆ ಸಚಿವರನ್ನು ಭೇಟಿಯಾಗಲಿದ್ದೇನೆ ಎಂದರು.

ಸಮಗ್ರ ತನಿಖೆಗೆ ಹೆಚ್‌ಡಿಕೆ ಆಗ್ರಹ



ಬೆಂಗಳೂರು,ಏ.14(ಕೆಎಂಶಿ)– ಗುತ್ತಿಗೆದಾರ ಸಂತೋಷ್ ಸಾವಿನ ಹಿಂದೆ ಅನೇಕ ಅನುಮಾನಗಳು ಮನೆ ಮಾಡಿದ್ದು, ಸೂಕ್ತ ತನಿಖೆ ನಡೆಸುವ ಮೂಲಕ ಜನರ ಮುಂದೆ ಸತ್ಯಾಂಶವನ್ನು ಬಿಚ್ಚಿಡಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಒತ್ತಾಯ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸ್ಥಾನಕ್ಕೆ ಕೆ.ಎಸ್.ಈಶ್ವರಪ್ಪ ರಾಜೀನಾಮೆ ನೀಡುವುದು ಉತ್ತಮ. ಅವರು ಇವತ್ತು ಅಥವಾ ನಾಳೆ ರಾಜೀನಾಮೆ ಕೊಡಬಹುದು. ಅವರ ಹೈಕಮಾಂಡ್ ಈ ಬಗ್ಗೆ ಹೇಳುತ್ತಾರೆ ಅನ್ನಿಸುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಮೊದಲು ಅವರು ರಾಜೀನಾಮೆ ನೀಡುವುದು ಸೂಕ್ತ ಎಂದರು.

ಸಂತೋಷ್ ಸಾವಿನ ಹಿಂದೆ ಹಲವಾರು ಸಂಶಯಗಳಿವೆ. ಜನರಲ್ಲಿ ಅನೇಕ ಪ್ರಶ್ನೆಗಳೂ ಇವೆ. ಸತ್ಯಾಂಶವನ್ನು ಹೊರ ತರಲು ತನಿಖೆಯಾಗಬೇಕು. ಇದು ಸರಕಾರದ ಜವಾಬ್ದಾರಿ ಎಂದು ಹೇಳಿದರು.

'ಮಹಾನಾಯಕನ' ಕೈವಾಡ



ಬೆಳಗಾವಿ, ಏ.14– ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣದಲ್ಲೂ 'ಮಹಾನಾಯಕನ' ಕೈವಾಡವಿದೆ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಪರೋಕ್ಷವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಶಾಸಕಿ ಲಕ್ಷ್ಮಿ ಹೆಬ್ಬಾಳಕರ್ ವಿರುದ್ಧ ಆರೋಪಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಅವರ ವಿರುದ್ಧ ಆರೋಪ ಮಾಡಿ, ಆತ್ಮಹತ್ಯೆಗೆ ಶರಣಾದ ಗುತ್ತಿಗೆದಾರ ಸಂತೋಷ್ ಪಾಟೀಲ ಅವರ ಕುಟುಂಬದವರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ರಮೇಶ್ ಜಾರಕಿಹೊಳಿ, ಈ ಪ್ರಕರಣದಲ್ಲಿ ಏನಾಗಿದೆ ಎನ್ನುವುದು ನನಗೆ ಸಂಪೂರ್ಣವಾಗಿ ಗೊತ್ತಿದೆ. ಈ ಪ್ರಕರಣದಲ್ಲಿ ರಾಜಕಾರಣ ಮಾಡಲಾಗುತ್ತಿದೆ. ನಿಜವಾದ ಸಂಗತಿಯನ್ನು ಶೀಘ್ರವೇ ಬಹಿರಂಗಪಡಿಸುತ್ತೇನೆ ಎಂದರು.

ಸಿಡಿ ಪ್ರಕರಣದಲ್ಲಿ ನನ್ನ ವಿರುದ್ಧದ ಷಡ್ಯಂತ್ರದಲ್ಲಿ ಭಾಗಿಯಾದ ತಂಡವೇ ಈಗ ಈಶ್ವರಪ್ಪ ಅವರ ವಿರುದ್ಧವೂ ಕೆಲಸ ಮಾಡುತ್ತಿದೆ. ತನಿಖೆ ನಡೆಯಲಿ, ಈಶ್ವರಪ್ಪ ಅವರ ತಪ್ಪಿದ್ದರೆ ಬೇಕಾದ ಶಿಕ್ಷೆಯಾಗಲಿ. ಅಲ್ಲಿಯವರೆಗೆ ರಾಜೀನಾಮೆ ಕೊಡಬಾರದು. ಈ ಎರಡು ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಅವರು ಒತ್ತಾಯಿಸಿದರು.

ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ಕಾಂಗ್ರೆಸ್ ಅಹೋರಾತ್ರಿ ಧರಣಿ



ಬೆಂಗಳೂರು,ಏ.14(ಕೆಎಂಶಿ)–ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ವಜಾಗೊಳಿಸಿ ಬಂಧಿಸುವಂತೆ ಆಗ್ರಹಿಸಿ, ಕಾಂಗ್ರೆಸ್ ಅಹೋರಾತ್ರಿ ಧರಣಿ ಆರಂಭಿಸಿದೆ. ವಿಧಾನಸೌಧ ಹಾಗೂ ಹೈಕೋರ್ಟ್‌ನ ಮುಂಭಾಗದ ಕೇಂದ್ರದಲ್ಲಿ ಕಾಂಗ್ರೆಸ್ ನಾಯಕರು ಧರಣಿ ಆರಂಭಿಸಿ, ವಿನೂತನ ಪ್ರತಿಭಟನೆ ಆರಂಭಿಸಿದ್ದಾರೆ.

ಈಶ್ವರಪ್ಪ ಅವರನ್ನು ಸಂಪುಟದಿಂದ ತಕ್ಷಣ ವಜಾಗೊಳಿಸಿ, ತಕ್ಷಣವೇ ಬಂಧಿಸಬೇಕೆಂದು ಆಗ್ರಹಿಸಿ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪರಿಷತ್ತಿನ ಪ್ರತಿಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್ ಸೇರಿದಂತೆ ಜನಪ್ರತಿನಿಧಿಗಳು ಮತ್ತು ಮುಖಂಡರು ಧರಣಿಯಲ್ಲಿ ಪಾಲ್ಗೊಂಡಿದ್ದಾರೆ. ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ನಾವು ವಿಧಾನಸೌಧ ಮತ್ತು ಹೈಕೋರ್ಟ್ ಮುಂಭಾಗದಲ್ಲಿ 24 ತಾಸುಗಳ ಕಾಲ ಅಹೋರಾತ್ರಿ ಧರಣಿ ಆರಂಭಿಸಿದ್ದೇವೆ ಎಂದರು.

ಸಿಎಂ ನಿವಾಸಕ್ಕೆ ಘೇರಾವ್‌ಗೆ ಯತ್ನಿಸಿ, ಪೊಲೀಸರಿಂದ ಬಂಧನಕ್ಕೊಳಗಾಗಿ ಬಿಡುಗಡೆಯಾದ ನಂತರ ಇಂತಹ ಕ್ರಮಕ್ಕೆ ಮುಂದಾಗಿದ್ದೇವೆ. ಮುಖ್ಯಮಂತ್ರಿಗಳು ಭ್ರಷ್ಟರನ್ನು ರಕ್ಷಣೆ ಮಾಡಿ ಭ್ರಷ್ಟರ ನಾಯಕರಂತೆ ವಾದ ಮಂಡಿಸುತ್ತಿದ್ದಾರೆ. ಇದು ಅವರ ಸ್ಥಾನಕ್ಕೆ ಗೌರವ ತರುವುದಿಲ್ಲ. ನಾವು ನಮ್ಮ ● 6ನೇ ಪುಟಕ್ಕೆ

ಪರಿಶಿಷ್ಟರ ಭೂ ಪರಭಾರೆ ನಿಷೇಧ ತಿದ್ದುಪಡಿ ಕಾಯ್ದೆ ಜಾರಿಗೆ ಸರ್ಕಾರ ಬದ್ಧ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ
- ಪರಿಶಿಷ್ಟರ ಅಭಿವೃದ್ಧಿಗೆ ಅವಶ್ಯವಿರುವ ಎಲ್ಲಾ ಕ್ರಮ



ಅಂಬೇಡ್ಕರ್ ಪುತ್ಥಳಿಗೆ ಸಿಎಂ ಬೊಮ್ಮಾಯಿ ಪುಷ್ಪಾರ್ಚನೆ ಮಾಡಿದರು.

ಬೆಂಗಳೂರು, ಏ.14(ಕೆಎಂಶಿ)– ರಾಜ್ಯದ ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಭೂ ಪರಭಾರೆ ನಿಷೇಧ ಕಾಯ್ದೆ (ಪಿಟಿಸಿಎಲ್ ಕಾಯ್ದೆ)ಗೆ ತಿದ್ದುಪಡಿ ತರಲು ಸುಪ್ರೀಂಕೋರ್ಟ್ ಆದೇಶವಾಗಿದ್ದು, ರಾಜ್ಯದಲ್ಲಿ ಕಾಯ್ದೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಸದಾ ಸಿದ್ಧವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಇಂದು ಡಾ. ಬಿ.ಆರ್.ಅಂಬೇಡ್ಕರ್ ರವರ 131ನೇ ಜನ್ಮ ದಿನಾಚರಣೆ ಅಂಗವಾಗಿ ವಿಧಾನಸೌಧದ ● 6ನೇ ಪುಟಕ್ಕೆ



ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ ವತಿಯಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಚಿತ್ರದಲ್ಲಿ ಶಾಸಕರಾದ ಎಲ್.ನಾಗೇಂದ್ರ, ಸಿ.ಎನ್.ಮಂಜೇಗೌಡ, ಎಸ್.ಎ.ರಾಮದಾಸ್, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ಇದ್ದಾರೆ. {ವರದಿ ಪುಟ-9}

ಮೈಸೂರಿನ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನೆಲಸಮಕ್ಕೆ ಪಾರಂಪರಿಕ ಸಮಿತಿ ನಿರ್ಣಯ

- ಹೈಕೋರ್ಟ್‌ಗೆ ವರದಿ ಸಲ್ಲಿಸಿ ಅನುಮತಿಸಿದಲ್ಲಿ ಸರ್ಕಾರದಿಂದ ಅನುಮೋದನೆ ಪಡೆದು ಕ್ರಮ
- ಪಾರಂಪರಿಕ ವಿನ್ಯಾಸ, ಶೈಲಿ ಯಥಾಸ್ಥಿತಿ ಉಳಿಸಿಕೊಂಡು ಹೊಸ ಕಟ್ಟಡ ನಿರ್ಮಿಸಲು ತಜ್ಞರ ಸಲಹೆ





ಮೈಸೂರು,ಏ.14(ಆರ್‌ಕೆ)–ಮೈಸೂರಿನ ಹೃದಯ ಭಾಗದಲ್ಲಿರುವ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಪಾರಂಪರಿಕ ಕಟ್ಟಡಗಳನ್ನು ನೆಲಸಮಗೊಳಿಸಿ, ಮೂಲ ವಿನ್ಯಾಸ ಉಳಿಸಿಕೊಂಡು ಹೊಸದಾಗಿ ಹಾಲಿ ಮಾದರಿ ಕಟ್ಟಡ ನಿರ್ಮಿಸಲು ಜಿಲ್ಲಾ ಪಾರಂಪರಿಕ ಸಮಿತಿಯು ಮಹತ್ವದ ನಿರ್ಧಾರ ಕೈಗೊಂಡಿದೆ. ಮೈಸೂರಿನ ಡಿಸಿ ಕಚೇರಿ ಸಭಾಂಗಣದಲ್ಲಿ ಬುಧವಾರ ಸಮಿತಿ ಅಧ್ಯಕ್ಷ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಈ ಎರಡೂ ಹಳೇ ಕಟ್ಟಡಗಳನ್ನು ನೆಲಸಮಗೊಳಿಸಿ ಪಾರಂಪರಿಕ ವಿನ್ಯಾಸ ಮತ್ತು ಶೈಲಿ ಉಳಿಸಿಕೊಂಡು ಯಥಾವತ್ತಾಗಿ ಹೊಸ ಕಟ್ಟಡಗಳ ನಿರ್ಮಿಸಲು ನಿರ್ಣಯ ಕೈಗೊಳ್ಳಲಾಯಿತು.

ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಪಾರಂಪರಿಕ ಕಟ್ಟಡಗಳಾಗಿದ್ದು, ಶಿಥಿಲಾವಸ್ಥೆಯಲ್ಲಿವೆ. ಈಗಾಗಲೇ ಅವುಗಳ ಕೆಲ ಭಾಗ ಕುಸಿದಿದ್ದು, ಸಾವು–ನೋವುಗಳಾಗಿವೆ. ಅಲ್ಲಿ ಯಾವುದೇ ಚಟುವಟಿಕೆ ನಡೆಸಲು ಸಾಧ್ಯವಿಲ್ಲ ಎಂದು ತಜ್ಞರು ಈ ಹಿಂದೆಯೇ ಅಭಿಪ್ರಾಯಪಟ್ಟಿರುವುದನ್ನು ಕೆಲ ಸದಸ್ಯರು ಉಲ್ಲೇಖಿಸಿ, ಬಾಡಿಗೆದಾರರ ಪ್ರಾಣ ರಕ್ಷಣೆ ಹಿತದೃಷ್ಟಿಯಿಂದ ಈ ಎರಡೂ ಕಟ್ಟಡಗಳನ್ನು ಸಂಪೂರ್ಣವಾಗಿ ● 6ನೇ ಪುಟಕ್ಕೆ

ದೇವರಾಜ ಮಾರುಕಟ್ಟೆ ಮಳಿಗೆ ಬಾಡಿಗೆದಾರರಿಗೆ ಪರ್ಯಾಯ ವ್ಯವಸ್ಥೆ

ಶಾಸಕರ ನೇತೃತ್ವದಲ್ಲಿ ಮುಂದಿನ ವಾರ ಸಭೆ: ಲಕ್ಷ್ಮೀಕಾಂತ ರೆಡ್ಡಿ



ಮೈಸೂರು: ಹೊಸ ಕಟ್ಟಡ ನಿರ್ಮಿಸುವವರೆಗೆ ದೇವರಾಜ ಮಾರುಕಟ್ಟೆ ಮಳಿಗೆ ಬಾಡಿಗೆದಾರರು ವ್ಯಾಪಾರ ನಡೆಸಲು ಪರ್ಯಾಯ ವ್ಯವಸ್ಥೆ ಮಾಡಲಾಗುವುದು ಎಂದು ಮೈಸೂರು ಮಹಾ ನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ಗಳನ್ನು ಕೆಡವಿ ಹೊಸದಾಗಿ ನಿರ್ಮಿಸಲು ಜಿಲ್ಲಾ ಪಾರಂಪರಿಕ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಒಂದು ವೇಳೆ ಅದು ಸಾಕಾರಗೊಂಡಲ್ಲಿ ಪ್ರಸ್ತುತ ಇರುವ ದೇವರಾಜ ಮಾರುಕಟ್ಟೆ ಮಳಿಗೆ ಬಾಡಿಗೆದಾರರಿಗೆ ಪರ್ಯಾಯ ಸ್ಥಳ ಗುರ್ತಿಸಬೇಕಾಗುತ್ತದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ನನ್ನವರು ಬಂದಾಗ ನಿಮ್ಮ ಮುಖ ಹರಳೆಣ್ಣೆ ಕುಡಿದವರಂತಾಗುವುದಲ್ಲ ಯಾಕೆ? ಅವರು ನಮ್ಮ ಗಂಟು ಗದರಿಂಯನ್ನು ಕೇಳುತ್ತಾರೆಯೇ?"

ಗಂಡ : "ನನ್ನ ಕಡೆಯವರು ಬಂದಾಗ ನಿನ್ನ ಮುಖ ಮಲ್ಲಿಗೆ ಹೂವಿನಂತೆ ಅರಳಿ ಉಲ್ಲಾಸ ತೋರುವುದೇ?"

ಮೈಸೂರು ಮಿತ್ರ

ಶುಕ್ರವಾರ, 15 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಕೆಲಸ ಸಾಧಿಸಲಿಚ್ಛಿಸುವವರು ಮೊದಲು ಬಿಗುಮಾನ ಬಿಡಬೇಕು

–ರಾಮಾಯಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬೆಣ್ಣೆ ಮನ್ಯಾಗೆ ಇಟ್ಕೊಂಡು ತುಪ್ಪಕ್ಕೆ ಮನೆ ಮನೆ ಅಲೆದಂತೆ

ನಿಮ್ಮ ಪತ್ರಗಳು

ಒಳಚರಂಡಿ ಪೈಪ್ ಅಳವಡಿಸುವಲ್ಲಿ ಪಾಲಿಕೆಯಿಂದ ವಿಳಂಬ!



ಮಾನ್ಯರೆ,

ಮೈಸೂರಿನ ಒಂಟಿಕೊಪ್ಪಲು 2ನೇ ಮುಖ್ಯ ರಸ್ತೆಯ (ಬಾಟಾ ಶೋ ರೂಂ ಹಿಂಭಾಗದ ಕನ್ಸರ್ವೆನ್ಸಿ) ಒಳಚರಂಡಿ ಪೈಪ್‌ಗಳು ಬಹಳ ಚಿಕ್ಕದಾಗಿದ್ದು, ಮಳೆ ಬಂದರೆ ಇಲ್ಲಿನ ಮನೆಯೊಳಗೆ ನೀರು ನುಗ್ಗಿ ಅವಾಂತರವಾಗುತ್ತಿತ್ತು. ನಾವು ಸಾಕಷ್ಟು ಬಾರಿ ಇದರ ಬಗ್ಗೆ ದೂರು ಕೊಟ್ಟಿದ್ದರಿಂದ, ಪಾಲಿಕೆಯಿಂದ ಟೆಂಡರ್‌ಗೆ ಅನುಮತಿ ಸಿಕ್ಕಿದ್ದು, ಹೊಸ ಪೈಪ್‌ಲೈನ್ ಅಳವಡಿಸಲು ವಿಳಂಬವಾಗುತ್ತಿದೆ. ನಿರ್ಮಲಾ ಕಾನ್ವೆಂಟ್ ಸುತ್ತಮುತ್ತ ಅರ್ಧದಷ್ಟು ಭಾಗ ಹೊಸ ಒಳಚರಂಡಿ ಪೈಪ್ ಕಾರ್ಯ ಪೂರ್ಣಗೊಂಡಿದ್ದು, ಇನ್ನರ್ಧ ಕೆಲಸ ಬಾಕಿ ಉಳಿದಿದೆ. ಇನ್ನೇನು ಮಳೆಗಾಲ ಸಮೀಪಿಸುತ್ತಿದೆ. ಆದುದರಿಂದ ವೇಗವಾಗಿ ಮುಗಿಯುವುದರೊಳಗೆ ಈ ಕಾರ್ಯ ಪೂರ್ಣಗೊಳ್ಳಬೇಕು. ಇದರ ಕುರಿತು ಪಾಲಿಕೆ ಅಧಿಕಾರಿಗಳು ಹಾಗೂ ಯುಜಿಡಿ ವಿಭಾಗದ ಅಧಿಕಾರಿಗಳನ್ನು ಸಂಪರ್ಕಿಸಿದರೆ ಅದರು ಸರಿಯಾಗಿ ಸ್ಪಂದಿಸುತ್ತಿಲ್ಲ. ಇಲ್ಲಸಲ್ಲದ ಕಾರಣಗಳನ್ನು ಹೇಳುತ್ತಾರೆ. ಆದಷ್ಟು ಬೇಗ ಪಾಲಿಕೆ ಯುಜಿಡಿ ವಿಭಾಗದ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಿ, ಹಳೆ ಪೈಪ್‌ಲೈನ್‌ಗಳನ್ನು ತೆಗೆದು, ಹೊಸ ಪೈಪ್‌ಲೈನ್‌ಗಳನ್ನು ಅಳವಡಿಸಬೇಕಿದೆ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಅಪಾಯಕ್ಕೆ ಆಹ್ವಾನ ನೀಡುತ್ತಿವೆ ಒಣಗಿದ ಮರಗಳು

ಮಾನ್ಯರೆ,



ಎಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಸೇರಿದಂತೆ ಮೈಸೂರು–ಮಾನಂದವಾಡಿ ರಸ್ತೆಯಲ್ಲಿ ಬಾಗಿದ ಹಾಗೂ ಒಣಗಿ ನಿಂತ ಮರಗಳು ಅಪಾಯಕ್ಕೆ ಆಹ್ವಾನ ನೀಡುತ್ತಿವೆ.

ಹೊಮ್ಮರಗಳ್ಳಿ ಬಳಿ ಬೈಕ್ ಮೇಲೆ ಮರ ಬಿದ್ದು ಯುವಕ ಮೃತಪಟ್ಟು ಮತ್ತೊಬ್ಬ ಗಾಯಗೊಂಡ ಪ್ರಕರಣವೂ ಸೇರಿದಂತೆ ಈ ರಸ್ತೆಯಲ್ಲಿ ಮರಬಿದ್ದ ಸಾಕಷ್ಟು ಪ್ರಕರಣಗಳು ನಡೆದಿವೆ ಕೆಲ ತಿಂಗಳ ಹಿಂದೆ ಇದೇ ಜಾಗದಲ್ಲಿ ಮರದ ಕೊಂಬೆ ವಿದ್ಯುತ್ ತಂತಿ ಮೇಲೆ ಬಿದ್ದು, ಕಂಬ ಧರೆಗುರುಳಿತ್ತು. ಪಕ್ಕದಲ್ಲೇ ಗ್ರಾಮ ಪಂಚಾಯಿತಿ ಕಚೇರಿ ಇದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇತ್ತೀಚೆಗಷ್ಟೇ ಕರಿಗಳ ಗ್ರಾಮದ ಸಮೀಪ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಆಲದಮರದ ಕೊಂಬೆ ರಸ್ತೆಗೆ ಬಿದ್ದಿತ್ತು. ರಾತ್ರಿ ವೇಳೆ ಮರ ಬಿದ್ದ ಹಿನ್ನೆಲೆಯಲ್ಲಿ ಯಾವುದೇ ಅಪಾಯ ಸಂಭವಿಸಿರಲಿಲ್ಲ. ಇಂತಹ ಅದೆಷ್ಟೋ ಪ್ರಕರಣಗಳು ನಡೆದಿದ್ದು, ಅರಣ್ಯ ಇಲಾಖೆ ಮಾತ್ರ ಕಣ್ಮುಚ್ಚಿ ಕುಳಿತಿದೆ.

ರಸ್ತೆಯ ಇಕ್ಕೆಲಗಳಲ್ಲಿ ಬೃಹತ್ ಗಾತ್ರದ ಮರಗಳಿದ್ದು, ಸಾಕಷ್ಟು ಮರಗಳು ಒಣಗಿ ನಿಂತಿವೆ. ಇನ್ನೂ ಕೆಲವು ರಸ್ತೆಗೆ ಬಾಗಿಕೊಂಡಿವೆ. ಮುಂದಿನ ದಿನಗಳಲ್ಲಿ ಮಳೆಗಾಳಿ ಶುರುವಾದರೆ ಯಾವ ಸಮಯದಲ್ಲಿ ಬೀಳುತ್ತವೋ ಎಂಬ ಜೀವ ಭಯದಲ್ಲಿ ವಾಹನ ಸವಾರರು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ವಯಸ್ಸಾದ ಮರಗಳು ಹಾಗೂ ರಸ್ತೆಗೆ ಬಾಗಿದ ಮರಗಳನ್ನು ತೆರವುಗೊಳಿಸುವಂತೆ ಈ ಭಾಗದ ಜನ ಅರಣ್ಯ ಇಲಾಖೆಗೆ ಸಾಕಷ್ಟು ಬಾರಿ ಮನವಿ ಮಾಡುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಪರಿಸರ ಪ್ರೇಮಿಗಳು ಅಡ್ಡಿಪಡಿಸುತ್ತಾರೆ ಎಂಬ ಇಲ್ಲಸಲ್ಲದ ಸಬೂಬು ಹೇಳುತ್ತಾರೆಯೇ ಹೊರತು ಮರಗಳ ತೆರವಿಗೆ ಮುಂದಾಗುತ್ತಿಲ್ಲ.

ಹೊಮ್ಮರಗಳ್ಳಿ ಗ್ರಾಮಪಂಚಾಯಿತಿ ಎದುರೇ ಬೃಹದಾಕಾರದ ಬೇವಿನಮರ ಪೂರ್ಣ ಒಣಗಿ ನಿಂತಿದೆ. ಇದನ್ನು ಪಿಡಿಒ ಕಂಡೂ ಕಾಣದಂತೆ ಕುಳಿತಿದ್ದಾರೆ. ಅರಣ್ಯ ಇಲಾಖೆ ಡಿಎಫ್‌ಆರ್‌ಒ ಸುನಿತಾ ನಿತ್ಯ ಇದೇ ರಸ್ತೆಯಲ್ಲಿ ಓಡಾಡುತ್ತಿದ್ದರೂ ಕಂಡೂ ಕಾಣದಂತೆ ಸುಮ್ಮನಿದ್ದಾರೆ. ಸಾಕಷ್ಟು ಬಾರಿ ದೂರು ನೀಡಿದರೂ ಡಿಆರ್‌ಡಿಎಫ್ ಸುನಿತಾ ನಿರ್ಲಕ್ಷ್ಯ ವಹಿಸಿದ ಪರಿಣಾಮ ಈಗ ಯುವಕನೊಬ್ಬನು ಬಲಿಯಾಗಿದ್ದಾನೆ.

ಮೈಸೂರು–ಮಾನಂದವಾಡಿ ರಸ್ತೆಯಲ್ಲಿ ಇತ್ತೀಚೆಗೆ ವಾಹನಗಳ ಸಂಖ್ಯೆ ಅಧಿಕವಾಗಿವೆ. ಪಕ್ಕದ ಕೇರಳ ಹಾಗೂ ತಮಿಳುನಾಡಿಗೆ ಈ ರಸ್ತೆ ಮೂಲಕವೇ ಸಾಗಬೇಕಿರುವುದರಿಂದ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ. ಇನ್ನು ಸ್ಥಳೀಯವಾಗಿ ಸಾರಿಗೆ ಬಸ್‌ಗಳು, ದ್ವಿಚಕ್ರ ವಾಹನಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸು ತ್ತಿರುವುದರಿಂದ ಪ್ರತಿಯೊಬ್ಬರೂ ಜೀವ ಕೈಯಲ್ಲಿಡಿದು ಓಡಾಡುವ ಸ್ಥಿತಿ ನಿರ್ಮಾಣ ವಾಗಿದೆ. ಬುಧವಾರ ನಡೆದ ಯುವಕನ ಸಾವಿನ ನಂತರವೂ ಎಚ್ಚೆತ್ತುಕೊಳ್ಳದಿದ್ದರೆ ಇಲಾಖೆಗೆ ಇನ್ನೆಷ್ಟು ಜನರ ಬಲಿ ಬೇಕು.

–ಶೇಖರ್, ಕಂಚಮಹಳ್ಳಿ ಗ್ರಾಪಂ ಸದಸ್ಯ, ಕೃಷ್ಣಪ್ಪ ಗ್ರಾಮಸ್ಥ.

ಕೊರೊನಾ ಸಾಮಾನ್ಯ ಸೋಂಕು ಎಂಬ ಅರಿವು ಮೂಡಿಸಿ

ಮಾನ್ಯರೆ,


ಕೊರೊನಾ 1ನೇ ಹಾಗೂ 2ನೇ ಅಲೆಯಿಂದ ಆದ ನಿರ್ಬಂಧ, ಲಾಕ್‌ಡೌನ್‌ಗಳಿಂದ ಅಪಾರ ಸಾವು ನೋವುಗಳಾಗಿತ್ತು. ಸಾಮಾನ್ಯ ಜನರ ಬದುಕು ಬರ್ಬಾದ್ ಆಗಿ ಬೀದಿಗೆ ಬಂದಿತ್ತು. ವ್ಯಾಪಾರ ವಹಿವಾಟು ನೆಲಕಚ್ಚಿತ್ತು. ಶಾಲಾ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗಿತ್ತು. ಈಗ ಎಲ್ಲವೂ ತಕ್ಕ ಮಟ್ಟಿಗೆ ಸರಿಹೋಗುತ್ತಿದೆ ಎನ್ನುವಷ್ಟರಲ್ಲಿ ಕೊರೊನಾ 4ನೇ ಅಲೆ ಆರಂಭವಾಗುವ ಸೂಚನೆ ಇದೆ. ಈ ಅಲೆಗಳನ್ನು ನೋಡಿ ಅದನ್ನು ಅನುಭವಿಸಿದ ಮೇಲೆ ನಾವು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಬಂದಿದೆ. ಜೊತೆಗೆ ಕೋಟ್ಯಾಂತರ ಜನಕ್ಕೆ ಲಸಿಕೆ ಹಾಕಲಾಗಿದೆ, ಹಾಕಲಾಗುತ್ತಿದೆ. ಹೀಗಾಗಿ, ಸರ್ಕಾರ ಜನಸಾಮಾನ್ಯರಿಗೆ ಹೊರೆಯಾಗುವ ಕಠಿಣ ನಿರ್ಬಂಧಗಳನ್ನಾಗಲಿ ಲಾಕ್‌ಡೌನ್ ಆಗಲಿ ಮಾಡಬಾರದು. ಅದರ ಬದಲು ಪರ್ಯಾಯ ಸುರಕ್ಷಿತ ಮಾರ್ಗಗಳನ್ನು ಹುಡುಕಿ ಜನಸಾಮಾನ್ಯರು ದುಡಿದು ಬದುಕುವುದಕ್ಕೆ ಅನುವು ಮಾಡಿಕೊಡಬೇಕಿದೆ. ಇದರ ಜೊತೆಗೆ ದೃಶ್ಯಮಾಧ್ಯಮಗಳು ಗುಣಾತ್ಮಕವಾದ ವಸ್ತುನಿಷ್ಠ ಸುದ್ದಿಗಳನ್ನು ಮಾತ್ರ ಭಿತ್ತರಿಸಿ ಸಾಮಾಜಿಕ ಜವಾಬ್ದಾರಿಯನ್ನು ಮೆರೆಯಬೇಕು. ಜನಗಳೂ ಸಹ ಎಲ್ಲಾ ರೀತಿಯ ಸೋಂಕಿನಂತೆ ಕೊರೊನಾ ಸಹ ಸಾಮಾನ್ಯ ಸೋಂಕು ಎಂಬ ಅರಿವು ಮೂಡಿಸಬೇಕು. ವೈದ್ಯರು ನೀಡುವ ಸಲಹೆ ಸೂಚನೆಗಳನ್ನು ಅನುಸರಿಸಿ, ಮನೋಸ್ಥೈರ್ಯದಿಂದ ಕೊರೊನಾವನ್ನು ಎದುರಿಸಬೇಕೆ ಹೊರತು, ಹೆದರಬಾರದು.

–ಬಿ.ಗಣೇಶ್, ಕೆ.ಜಿ.ಕೊಪ್ಪಲು,ಮೈಸೂರು.

ಅಂಬೇಡ್ಕರ್ ಜಯಂತಿ ಪ್ರಯುಕ್ತ

ಶ್ರೀವಿನಯ್ ಗುರೂಜಿಯವರಿಂದ ಪ್ರಾಣಿಗಳ ದತ್ತು ಸ್ವೀಕಾರ

● 3.05 ಲಕ್ಷ ರೂ. ಚೆಕ್ ನೀಡಿ ಹುಲಿ, ಹಾವು, 2 ಚಿರತೆ ದತ್ತು ಸ್ವೀಕರಿಸಿದ ಗುರೂಜಿ ● ಮೃಗಾಲಯ ಸಿಬ್ಬಂದಿಗೆ ದಿನಸಿ ಕಿಟ್ ವಿತರಣೆ ● ಧರ್ಮ ಸಂಘರ್ಷಕ್ಕೆ ಕೊನೆಯಾಡಲು ಮುಖ್ಯಮಂತ್ರಿಗಳಿಗೆ ಶ್ರೀಗಳ ಮನವಿ





ಮೈಸೂರು ಮೃಗಾಲಯದಲ್ಲಿ ಗುರುವಾರ ಪ್ರಾಣಿಗಳನ್ನು ಶ್ರೀ ಅವಧೂತ ವಿನಯ್ ಗುರೂಜಿಯವರು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾದ ಎಲ್.ಆರ್.ಮಹದೇವಸ್ವಾಮಿ ಅವರ ಮೂಲಕ ದತ್ತು ಸ್ವೀಕರಿಸಿದರು. ಮತ್ತೊಂದು ಚಿತ್ರದಲ್ಲಿ ಮೃಗಾಲಯ ಸಿಬ್ಬಂದಿಗೆ ದಿನಸಿ ಕಿಟ್‌ಗಳನ್ನು ಗುರೂಜಿ ವಿತರಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಏ.14(ಪಿಎಂ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ಪ್ರಾಣಿಗಳನ್ನು ಚಿಕ್ಕಮಗಳೂರಿನ ಕೊಪ್ಪ ತಾಲೂಕಿನ ಗೌರಿಗದ್ದೆಯ ಶ್ರೀ ಅವಧೂತ ವಿನಯ್ ಗುರೂಜಿ ಆಶ್ರಮದ ಶ್ರೀವಿನಯ್ ಗುರೂಜಿಯವರು ಗುರುವಾರ ದತ್ತು ಸ್ವೀಕರಿಸಿದರು.

ಮೃಗಾಲಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಗುರೂಜಿಯವರು, ಬಳಿಕ ಮೃಗಾಲಯದ ಒಂದು ಹುಲಿ, ಎರಡು ಚಿರತೆ ಮತ್ತು ಒಂದು ಹಾವನ್ನು 3.05 ಲಕ್ಷ (ಮೂರು ಲಕ್ಷದ ಐದು ಸಾವಿರ ರೂ.) ಚೆಕ್ ನೀಡಿ ದತ್ತು ಸ್ವೀಕಾರ ಮಾಡಿದರು. ಇದೇ ಸಂದರ್ಭದಲ್ಲಿ ಮೃಗಾಲಯದ 350 ಸಿಬ್ಬಂದಿಗೆ ದಿನಸಿ ಕಿಟ್ ವಿತರಿಸಿ, ಆಶೀರ್ವದಿಸಿದರು.

ಬಳಿಕ ಮಾತನಾಡಿದ ಗುರೂಜಿಯವರು, ಗಾಂಧಿ ಇದ್ದ ದೇಶ ನಮ್ಮದು. ಎಲ್ಲಾ ಧರ್ಮಗಳ ಮೂಲ ಅಹಿಂಸೆ. ರಾಮ, ಶ್ರೀಕೃಷ್ಣರು ಕೂಡ ಯುದ್ಧಕ್ಕೆಮೊದಲು ಶಾಂತಿಗಾಗಿ ಸುಧಾನಕ್ಕೆ ಯತ್ನಿಸಿದ್ದರು. ನಾವೆಲ್ಲ ಮಾನವ ಧರ್ಮವನ್ನು ಅನುಸರಿಸಬೇಕು. 'ಅಹಿಂಸಾ ಪರಮೋ ಧರ್ಮ' ಎಂಬ ಸಂದೇಶ ಸಾರಿದ ದೇಶ ನಮ್ಮದು. ಮುಖ್ಯಮಂತ್ರಿಗಳು ಎಲ್ಲಾ ಧರ್ಮದ ಗುರುಗಳೊಂದಿಗೆ ಚಿಂತಕರ ಸಭೆ ಕರೆದು, ರಾಜ್ಯದಲ್ಲಿ ನಡೆಯುತ್ತಿರುವ ಧರ್ಮ ಸಂಘರ್ಷಕ್ಕೆ ಕೊನೆಯಾಡಬೇಕು ಎಂದು ಮನವಿ ಮಾಡಿದರು.

> ಶ್ರೀ ವಿನಯ್ ಗುರೂಜಿಯವರು ಮೈಸೂರು ಮೃಗಾಲಯದಲ್ಲಿ ಮೂರು ಪ್ರಾಣಿಗಳನ್ನು ದತ್ತು ಪಡೆದು, ಇಲ್ಲಿನ ಸಿಬ್ಬಂದಿಗೆ ದಿನಸಿ ಕಿಟ್ ಸಹ ನೀಡಿದ್ದಾರೆ. ಜೊತೆಗೆ ಅವರ ಭಕ್ತಾದಿಗಳು ಮೃಗಾಲಯದ ಪ್ರಾಣಿಗಳ ದತ್ತು ಸ್ವೀಕಾರಕ್ಕೆ ಮುಂದೆ ಬಂದಿರುವುದು ಒಳ್ಳೆಯ ಬೆಳವಣಿಗೆ. ಇದಕ್ಕಾಗಿ ಶ್ರೀಗಳಿಗೆ ಧನ್ಯವಾದ ಅರ್ಪಿಸುತ್ತೇನೆ.
>
> -ಎಲ್.ಆರ್.ಮಹದೇವಸ್ವಾಮಿ, ಅಧ್ಯಕ್ಷರು, ಕರ್ನಾಟಕ ಮೃಗಾಲಯ ಪ್ರಾಧಿಕಾರ.

ಡಾ.ಬಿ.ಆರ್.ಅಂಬೇಡ್ಕರ್ ಆಧುನಿಕ ಕೃಷ್ಣನಂತೆ. ಆತ್ಮ ಮತ್ತು ಧರ್ಮದ ಉದ್ಧಾರಕ್ಕಾಗಿ ಶೋಷಣೆಗೆ ಒಳಗಾದವರ ಪರವಾಗಿ ನಿಂತು ಶ್ರೀಕೃಷ್ಣ ಭಗವದ್ಗೀತೆ ನೀಡಿದ. ಅಂತೆಯೇ ಕಲಿಯುಗದಲ್ಲಿ ದೀನ ದಲಿತರು, ಶೋಷಿತರ ಉದ್ಧಾರಕ್ಕಾಗಿ ಅಂಬೇಡ್ಕರ್ ಅವರು ಸಂವಿಧಾನ ಎಂಬ ಆತ್ಮರಕ್ಷಣೆಯ ಗೀತೆಯನ್ನು ಕೊಟ್ಟಿದ್ದಾರೆ. ಅಂಬೇಡ್ಕರ್ ಜೀವನ ಚರಿತ್ರೆಯು ರಾಮಾಯಣ, ಮಹಾಭಾರತಕ್ಕೂ ಕಮ್ಮಿ ಇಲ್ಲ. ಅವರು ಶೋಷಿತರ ಧ್ವನಿ ಎಂದು ಸ್ಮರಿಸಿದರು.

ಮೃಗಾಲಯದಲ್ಲಿ ಇಂದು ಪ್ರಾಣಿ ದತ್ತು ಪಡೆಯುವ ಮೂಲಕ ಅಂಬೇಡ್ಕರ್ ಜಯಂತಿ ಆಚರಣೆ ಮಾಡಿದ್ದೇವೆ. ಈಗಿನ ಕಾಲಘಟ್ಟದಲ್ಲಿ ಪ್ರಾಣಿ–ಪಕ್ಷಿಗಳೂ ಶೋಷಣೆಗೆ ಒಳಗಾಗುತ್ತಿವೆ. ಕಾಡನ್ನು ಕಡಿದು ನಾಡು ಮಾಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ವನ್ಯಜೀವಿಗಳ ಸಂರಕ್ಷಣೆಗೆ ಮುಂದಾಗಬೇಕಿದೆ. ಈ ನಿಟ್ಟಿನಲ್ಲಿ ಪ್ರಾಣಿ ದತ್ತು ಸ್ವೀಕರಿಸುವ ಮೂಲಕ ಅರ್ಥಪೂರ್ಣವಾಗಿ ಅಂಬೇಡ್ಕರ್ ಜಯಂತಿ ಆಚರಿಸಿದ್ದೇವೆ ಎಂದು ಹೇಳಿದರು.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಸದಸ್ಯರಾದ ಜ್ಯೋತಿ ರೇಷಣ್ಣ, ಗೋಕುಲ್ ಗೋವರ್ಧನ್, ಮುಡಾ ಸದಸ್ಯೆ ಲಕ್ಷ್ಮೀದೇವಿ, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ, ಉದ್ಯಮಿ ಪೋತರಾಜ್ ಮತ್ತಿತರರು ಹಾಜರಿದ್ದರು.

ಪ್ರಕೃತಿ ಸಂರಕ್ಷಣಾ ಕಾರ್ಯದ ಮೂಲಕ ಡಾ.ಅಂಬೇಡ್ಕರ್ ಜಯಂತಿ ಆಚರಣೆ ಅರ್ಥಪೂರ್ಣ

● ಗೌರಿಗದ್ದೆ ಆಶ್ರಮದ ಅವಧೂತ ಶ್ರೀ ವಿನಯ್ ಗುರೂಜಿ ಅಭಿಮತ ● ಸಂವಿಧಾನ ಎಲ್ಲರ ಹಿತ ಕಾಯುತ್ತಿದೆ ● ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿರುವ ಪ್ರಕೃತಿಯನ್ನೂ ರಕ್ಷಿಸಬೇಕಿದೆ



ಮೈಸೂರು, ಏ.14 (ಎಸ್‌ಬಿಡಿ)– ಸಮಾಜ ಸುಧಾರಕ, ಕ್ರಾಂತಿಕಾರಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನವನ್ನು ಪ್ರಕೃತಿ ಸಂರಕ್ಷಣಾ ಕಾರ್ಯಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಬೇಕಿದೆ ಎಂದು ಚಿಕ್ಕಮಗಳೂರು ಗೌರಿಗದ್ದೆ ಆಶ್ರಮದ ಅವಧೂತ ಶ್ರೀ ವಿನಯ್ ಗುರೂಜಿ ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಆಶ್ರಮದ ವತಿಯಿಂದ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಭವನದಲ್ಲಿ ಗುರುವಾರ ಆಯೋಜಿಸಿದ್ದ ವಿಶೇಷ ಪ್ರವಚನದಲ್ಲಿ 'ಮಾನವ ಧರ್ಮ– ಶ್ರೇಷ್ಠ ಧರ್ಮ' ಕುರಿತು ಮಾತನಾಡಿ, ಕಲಿಯುಗಕ್ಕೆ ಅಂಬೇಡ್ಕರ್ ಅವರು ನೀಡಿರುವ ಗೀತೆ 'ಸಂವಿಧಾನ'. ಇದರಲ್ಲಿರುವ ಕ್ರಮಬದ್ಧ ಕಾನೂನುಗಳು ಶೋಷಿತ ವರ್ಗವನ್ನು ಕಾಯುತ್ತಿವೆ. ಹಾಗೆಯೇ ಎಲ್ಲರಿಂದ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿರುವ ಪ್ರಕೃತಿಯನ್ನು ಸಂರಕ್ಷಿಸಬೇಕು. ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ಜಯಂತಿ ದಿನ ಪ್ರಾಣಿ–ಪಕ್ಷಿಗಳ ದತ್ತು ಪಡೆಯುವುದು, ಗಿಡ ನೆಟ್ಟು ಪೋಷಿಸುವುದು ಇನ್ನಿತರ ಪರಿಸರ ಸಂರಕ್ಷಣಾ ಕಾರ್ಯ ನಡೆಸಬೇಕೆಂದು ಮನವಿ ಮಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಶೋಷಿತ ವರ್ಗದವರು ಒದ್ದಾಡುವುದನ್ನು ಕಂಡು ಚಿಂತೆ ಮಾಡಿದರು. ಅಷ್ಟಕ್ಕೇ ಸುಮ್ಮನಾಗದೆ ನೊಂದವರ ನೆರವಿಗೆ ಚಿಂತನೆ ನಡೆಸಿದರು. ಶಿಕ್ಷಣದಿಂದ ವಂಚಿತರಾಗಿರುವುದು, ಕಾನೂನುಗಳಿಲ್ಲದಿರುವುದನ್ನು ಅಧ್ಯಯನದಿಂದ ತಿಳಿದರು. ತುಳಿತಕ್ಕೆ ಒಳಗಾದ ವರ್ಗದವರನ್ನೆಲ್ಲಾ ಯಾವ ಮಾಧ್ಯಮ ಇಲ್ಲದೆಯೂ ಒಗ್ಗೂಡಿಸಿ, ಜಾಗೃತಿ ಮೂಡಿಸಿದರು. ಯಾವ ಶಸ್ತ್ರವನ್ನೂ ಹಿಡಿಯದೆ ಜ್ಞಾನವೆಂಬ ಅಸ್ತ್ರದಿಂದ ಹೋರಾಟ ನಡೆಸಿದರು. ಅನುಭವದಿಂದ ಸರ್ವ ಶಾಸ್ತ್ರಗಳನ್ನು ಅರ್ಥೈಸಿಕೊಂಡು ಪ್ರತಿಯೊಬ್ಬ ಪ್ರಜೆಗೂ ಅನ್ವಯವಾಗುವ ಕಲಿಯುಗದ ಗೀತೆ 'ಸಂವಿಧಾನ' ನೀಡಿದರು. ಅವರಲ್ಲಿ ಪಿತೃಭಕ್ತಿ, ಸತ್ಯನಿಷ್ಠೆಯಂತಹ ಮೌಲ್ಯಗಳಿದ್ದವು. ಹಾಗಾಗಿಯೇ ಅಂಬೇಡ್ಕರ್ ಅವರನ್ನು ಸುಧಾರಕ, ಕ್ರಾಂತಿಕಾರಿ ಹಾಗೂ ಸೃಷ್ಟಿಕರ್ತ ಎಂದು ಕರೆಯುತ್ತೇನೆ. ಸೃಷ್ಟಿಯನ್ನು ಒಪ್ಪುವವರು ಬ್ರಹ್ಮನನ್ನು ಒಪ್ಪುವಂತೆ, ಸಂವಿಧಾನ ಒಪ್ಪಿದವರು ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಒಪ್ಪಲೇಬೇಕು ಎಂದು ಅಭಿಪ್ರಾಯಿಸಿದರು.

ಅನೇಕ ಮಹನೀಯರ ಜಯಂತಿ ಆಚರಿಸುತ್ತೇವೆ. ಅವರ ಫೋಟೋಗೆ ಪುಷ್ಪಾರ್ಚನೆ ಮಾಡಿ, ಚರ್ಚೆ–ಸಭೆ ನಡೆಸುತ್ತೇವೆ. ಆದರೆ ಮಹನೀಯರನ್ನು ಫೋಟೋ ಚೌಕಟ್ಟಿಗೆ ಸೀಮಿತಗೊಳಿಸಬಾರದು. ಅವರ ಸಿದ್ಧಾಂತವನ್ನು ಪರಿಪಾಲಿಸಬೇಕು. ತಾವಾಗಿಯೇ ಎಲ್ಲರೂ ಸರಿಹೋಗಬೇಕು. ನಮ್ಮ ಹಿರಿಯರು ಶೋಷಣೆ ಮಾಡಿರಬಹುದು. ಇಲ್ಲವೇ ಪೂರ್ವ ಜನ್ಮದಲ್ಲಿ ನಮ್ಮಿಂದಲೇ ಶೋಷಣೆ ಆಗಿರಬಹುದು. ಅದಕ್ಕೆ ಪ್ರಾಯಶ್ಚಿತ್ತವಾಗುವಂತಹ ಕೆಲಸ ಮಾಡಬೇಕು. ಎಲ್ಲಾ ಧರ್ಮದ ಮೂಲ ಭೂಮಿ. ಅದು ಯಾವ ಧರ್ಮ, ಜಾತಿಗೆ ಸೇರಿದ್ದಲ್ಲ. ಬೆಳಕು, ನೀರು, ತೆಂಗಿನಕಾಯಿ ಯಾವ ಜಾತಿ ಎಂದರೆ ಯಾರಲ್ಲೂ ಉತ್ತರವಿಲ್ಲ. ಪ್ರಕೃತಿಯೇ ಸಮಾನತೆ ಪಾಠ ಹೇಳುತ್ತಿದೆ. ಆದರೆ ನಾವು ಅರ್ಥಮಾಡಿಕೊಂಡಿಲ್ಲ. ನಾನು ಹಿಂದು, ಮುಸ್ಲಿಂ ಎನ್ನುವುದನ್ನು ಬದಿಗೊತ್ತಿ, ನಾವು ಭಾರತೀಯರು ಎನ್ನಬೇಕು. ವಂದೇ ಮಾತರಂ ಘೋಷಣೆಯಾಗಿ ಉಳಿಯದೆ ಅನುಷ್ಠಾನಕ್ಕೆ ಬರಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಮನುಷ್ಯನಲ್ಲಿ ಮಂಗ, ಹುಲಿ, ಸಿಂಹ, ಕಾಡುಕೋಣ, ಕೋಗಿಲೆ, ಕಾಗೆ ಹೀಗೆ ಹಲವು ಪ್ರಾಣಿಗಳ ಗುಣವಿರುತ್ತದೆ. ನಮ್ಮ ದೇಹವೇ ಒಂದು ಮೃಗಾಲಯವಿದ್ದಂತೆ. ಆದರೆ ಇದನ್ನು ನಿಯಂತ್ರಿಸುವುದೇ ಧರ್ಮ. ಜೀವನಕ್ಕೊಂದು ಕ್ರಮ ಇರಬೇಕು. ಪ್ರಕೃತಿ ಬಗ್ಗೆ ಕಾಳಜಿ ಇರಬೇಕು. ನಾನು ಪಿಯುಸಿ ಓದುವಾಗ ಬಸ್‌ನಲ್ಲಿ ಲೇಸ್ ತಿಂದು ಪ್ಲಾಸ್ಟಿಕ್ ಕವರ್ ಅನ್ನು ಹೊರಗಡೆ ಬಿಸಾಡುತ್ತಿದ್ದೆ. ಇದೊಂದು ಪ್ಲಾಸ್ಟಿಕ್‌ನಿಂದ ಏನಾಗುತ್ತದೆ? ಎನ್ನುವ ಧೋರಣೆಯಿತ್ತು. ಆದರೆ ನಮ್ಮ ಆಶ್ರಮದಲ್ಲಿ ಇದ್ದಕ್ಕಿದ್ದಂತೆ ಎರಡು ಹಸುಗಳು ಸಾವನ್ನಪ್ಪಿದವು. ಕಾರಣ ತಿಳಿಯಲು ವೈದ್ಯಕೀಯ ಪರೀಕ್ಷೆ ಮಾಡಿಸಿದಾಗ ಪ್ಲಾಸ್ಟಿಕ್ ಹಸುಗಳ ಪ್ರಾಣಕ್ಕೆ ಕಂಟಕವಾಗಿದ್ದು ತಿಳಿಯಿತು. ನಾನು ವಿದ್ಯಾರ್ಥಿಯಾಗಿದ್ದಾಗ ಎಸೆದ ಲೇಸ್ ಕವರ್‌ನಿಂದಲೂ ಹೀಗೇ ಆಗಿರಬಹುದು. ನಾನೂ ಗೋಹತ್ಯೆಗೆ ಕಾರಣನಾದೆ ಎನ್ನುವ ಚಿಂತೆ ಕಾಡಿತ್ತು. ಪ್ಲಾಸ್ಟಿಕ್ ಮಾರಕತೆ ಬಗ್ಗೆ ಎಲ್ಲರೂ ಜಾಗೃತರಾಗಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮೊದಲು ಕಲಾವಿದರು ಸುಗಮ ಸಂಗೀತ ಹಾಗೂ ಡೊಳ್ಳು ಕುಣಿತ ಪ್ರಸ್ತುತಪಡಿಸಿದರು. ನಟ ಮಾಸ್ಟರ್ ಆನಂದ್ ಕಾರ್ಯಕ್ರಮ ನಿರೂಪಿಸಿದರು. ಪ್ರಕಾಶ್, ರಾಣಿಪ್ರಭಾ ಸೇರಿದಂತೆ ಕಾರ್ಯ ಕ್ರಮದ ಆಯೋಜಕರು, ಸಾರ್ವಜನಿಕರು ಉಪಸ್ಥಿತರಿದ್ದರು.

ಡಾ.ಅಂಬೇಡ್ಕರ್ ಚಿಂತನೆಗಳಿಂದ ದೇಶದ ಏಳಿಗೆ ಸಾಧ್ಯ

ಶಾಸಕ ಜಿ.ಟಿ.ದೇವೇಗೌಡ ಸಂದೇಶ



ಮೈಸೂರು,ಏ.14(ಪಿಎಂ)– ವೈದ್ಯಕೀಯ ಚಿಕಿತ್ಸೆಗೆ ಒಳಗಾಗಿರುವ ಹಿನ್ನೆಲೆಯಲ್ಲಿ ಮೈಸೂರು ಮತ್ತು ತಮ್ಮ ಕ್ಷೇತ್ರದಲ್ಲಿ ಗುರುವಾರ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲಾಗದ ಕಾರಣ ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಪ್ರಕಟಣೆ ಮೂಲಕ ಶುಭ ಸಂದೇಶ ನೀಡಿದ್ದು, ನಾವು ಡಾ.ಅಂಬೇಡ್ಕರ್ ಅವರ ಚಿಂತನೆಗಳೊಂದಿಗೆ ಸಾಗಿದರೆ, ದೇಶದ ಏಳಿಗೆ ಸಾಧ್ಯ ಎಂದು ತಿಳಿಸಿದ್ದಾರೆ.

ಡಾ.ಅಂಬೇಡ್ಕರ್ ಅವರ ಜನ್ಮ ದಿನದ ಶುಭಾಶಯ ತಿಳಿಸಿರುವ ಅವರು, ಅಂಬೇಡ್ಕರ್ ಅವರ ಜನ್ಮದಿನಾಚರಣೆಯಲ್ಲಿ ಭಾಗವಹಿಸಬೇಕಾದುದ್ದು ನನ್ನ ಆದ್ಯ ಕರ್ತವ್ಯ. ಆದರೆ ವೈದ್ಯರ ಸಲಹೆ ಮೇರೆಗೆ ಏ.9ರಿಂದ 20ರವರೆಗೆ ಬೆಂಗಳೂರಿನ ಜಿಂದಾಲ್ ನೇಚರ್ ಕ್ಯೂರ್ ಇನ್‌ಸ್ಟಿಟ್ಯೂಟ್‌ನಲ್ಲಿ ಚಿಕಿತ್ಸೆಗೆ ಒಳಗಾಗಿರುವ ಕಾರಣ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದ್ದಾರೆ.

ಸಂವಿಧಾನ ಶಿಲ್ಪಿ, ಸಮಾನತೆಯ ಹರಿಕಾರ, ದೇಶ ಕಂಡ ಮಹಾನ್ ಚೇತನ್ ಅಂಬೇಡ್ಕರ್ ಅವರು ಭಾರತದ ಸರ್ವಶ್ರೇಷ್ಠ ನಾಯಕರಲ್ಲಿ ಒಬ್ಬರು. ದೀನ–ದಲಿತರ ಉದ್ಧಾರಕ್ಕಾಗಿ ಜೀವಮಾನವಿಡೀ ಹೋರಾಡಿದ ಧೀಮಂತ ನಾಯಕರು. ಅವರೊಬ್ಬ ವ್ಯಕ್ತಿಯಾಗಿರದೆ ಶಕ್ತಿಯಾಗಿದ್ದರು. ಶೋಷಿತ ಮಹಿಳೆಯರ ಹಾಗೂ ದುಡಿಯುವ ವರ್ಗದ ದನಿಯಾಗಿ ಬಂದ ಕ್ರಾಂತಿ ಸೂರ್ಯ ಅಂಬೇಡ್ಕರ್.


ಜಾತಿ ಪದ್ಧತಿ ವಿರುದ್ಧ ವೈಜ್ಞಾನಿಕ, ವೈಚಾರಿಕ ನೆಲೆಯಲ್ಲಿ ಹೋರಾಡಿ ಕೋಟ್ಯಾನುಕೋಟಿ ದಮನಿತರ ಬಾಳಲ್ಲಿ ಬೆಳಕನ್ನು ಮೂಡಿಸಿ, ಶತ–ಶತಮಾನಗಳಿಂದ ಅಕ್ಷರ ವಂಚಿತ ಸಮುದಾಯಕ್ಕೆ ಅಕ್ಷರ ದೊರಕಿಸಿಕೊಟ್ಟು ಅವರಲ್ಲಿ ಅರಿವು, ಸ್ವಾಭಿಮಾನ ಮೂಡಿಸಿದರು. ಸಮಾಜದಲ್ಲಿ ತುಳಿತಕ್ಕೆ ಒಳಗಾದವರನ್ನು ಅಸಮಾನತೆಯಿಂದ ಸಮಾನತೆಯತ್ತ ಕೊಂಡೊಯ್ಯಲು ಹಾಗೂ ಹಿಂದುಳಿದವರನ್ನು ಮುಖ್ಯವಾಹಿನಿಗೆ ತರಲು ಅಂಬೇಡ್ಕರ್ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ತಮ್ಮ ಪ್ರಾಮಾಣಿಕ ಹೋರಾಟದಿಂದ ಅವರು ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿದ್ದಾರೆ.


ಅವರು ದೇಶದ ಭವಿಷ್ಯಕ್ಕಾಗಿ ರಚಿಸಿದ ಸಂವಿಧಾನದಿಂದ ನಾವಿಂದು ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದೇವೆ. ದೇಶದ ಪ್ರತಿ ಪ್ರಜೆಗೆ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಕಲ್ಪಿಸಿ, ದೇಶದ ಏಳಿಗೆಗೆ ಪೂರಕವಾದ ಅಂಶಗಳನ್ನು ಸಂವಿಧಾನದಲ್ಲಿ ಅಡಕಗೊಳಿಸಿ, ದೇಶದ ವ್ಯವಸ್ಥೆಗೊಂದು ನಿರ್ದಿಷ್ಟ ಗುರಿ ತೋರಿಸಿದರು.

ಡಾ.ಅಂಬೇಡ್ಕರ್ ಅವರನ್ನು ಕೇವಲ ದಲಿತ ನಾಯಕ, ಮೂಕನಾಯಕ ಎಂದು ಬಿಂಬಿಸಿದರೆ ಅವರ ವ್ಯಕ್ತಿತ್ವಕ್ಕೆ ಬಗೆಯುವ ಅಪಚಾರವಾಗುತ್ತದೆ. ಅವರು ಎಲ್ಲಾ ವರ್ಗದ ಮಹಾನಾಯಕರು. ಸಮಾಜದಲ್ಲಿನ ಅಸಮಾನತೆ, ಅಸ್ಪೃಶ್ಯತೆ ವಿರುದ್ಧ ಧ್ವನಿ ಎತ್ತಿ ಸಮಾಜವನ್ನು ತಿದ್ದುವ ಮೂಲಕ ಭವ್ಯ ಭಾರತ ನಿರ್ಮಿಸಿದ ಮಹಾನ್ ಚೇತನ ಅಂಬೇಡ್ಕರ್.

ಅವರೊಬ್ಬ ಅಪ್ಪಟ ದೇಶಪ್ರೇಮಿ. ದೇಶದಲ್ಲಿ ಅಕ್ಷರ ಲೋಕವನ್ನೇ ಸೃಷ್ಟಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ದೇಶದಲ್ಲಿ ಇಂದು ಪ್ರತಿಯೊಬ್ಬರು ಉತ್ತಮ ಹಾಗೂ ಉನ್ನತ ಶಿಕ್ಷಣ ಪಡೆದು ವೈದ್ಯ, ಇಂಜಿನಿಯರ್ ಸೇರಿದಂತೆ ಯಾವುದೇ ಉನ್ನತ ಸ್ಥಾನ ಅಲಂಕರಿಸಬೇಕಾದರೂ ಅದರ ಹಿಂದೆ ಅವರ ಸಾರ್ಥಕ ಶ್ರಮ ಅಡಗಿದೆ. ಅವರು ವಿಶ್ವ ಕಂಡ ಮಹಾನಾಯಕ ಎಂದು ಪ್ರಕಟಣೆ ಮೂಲಕ ಶಾಸಕರು ನುಡಿ ನಮನ ಸಲ್ಲಿಸಿದ್ದಾರೆ.

ನಾಯಿಗಳ ದಾಳಿ: ಬಾಲಕನಿಗೆ ಗಾಯ





ಮೈಸೂರು, ಏ.14(ಎಂಕೆ)– ನಮಾಜ್‌ಗೆ ಹೋಗುತ್ತಿದ್ದ ಬಾಲಕನ ಮೇಲೆ 10ಕ್ಕೂ ಹೆಚ್ಚು ನಾಯಿಗಳು ಏಕಾಏಕಿ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿರುವ ಘಟನೆ ನಗರದ ಬನ್ನಿಮಂಟಪದ ಟೀಪು ಮಸೀದಿ ಹಿಂಭಾಗ ನಡೆದಿದೆ.

ಇಲ್ಲಿನ ನಿವಾಸಿ ಕಮ್ರಾನ್ ರಷೀದ್ ಎಂಬುವರ 9 ವರ್ಷದ ಪುತ್ರ ಮಹಮ್ಮದ್ ಉಮೈಜ್ ಬುಧವಾರ ಸಂಜೆ 5.30ರ ವೇಳೆ ನಮಾಜ್‌ಗೆ ಹೋಗುತ್ತಿದ್ದಾಗ ದಾಳಿ ಮಾಡಿದ 10–15 ನಾಯಿಗಳು ಕುತ್ತಿಗೆ, ಬೆನ್ನು, ತೋಡೆಗೆ ಕಚ್ಚಿ ಗಾಯಗೊಳಿಸಿವೆ. ಕೂಡಲೇ ಕಿರುಚಾಡುತ್ತಿದ್ದ ಬಾಲಕನನ್ನು ಅಕಪಕ್ಕದವರು ರಕ್ಷಣೆ ಮಾಡಿ, ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಟೀಪು ಮಸೀದಿ ಹಿಂಭಾಗದ ಮನೆಯೊಂದರಲ್ಲಿ ವಾಸವಿರುವ ಮಹಿಳೆಯೊಬ್ಬರು ಪ್ರತಿನಿತ್ಯ ಕುರಿ, ಕೋಳಿಯ ಹಸಿ ಮಾಂಸ ಹಾಕಿ 10ಕ್ಕೂ ಹೆಚ್ಚು ನಾಯಿಗಳನ್ನು ಸಾಕಿದ್ದಾರೆ. ಈ ಹಿಂದೆಯೇ ಕೆಲವರಿಗೆ ನಾಯಿಗಳು ಕಚ್ಚಿದ್ದವು. ಈಗ ನನ್ನ ಮಗನ ಮೇಲೆಯೇ ದಾಳಿ ಮಾಡಿವೆ. ನಾಯಿಗಳನ್ನು ಸಾಕುತ್ತಿರುವ ಆಕೆ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡುವುದಾಗಿ ಗಾಯಗೊಂಡ ಬಾಲಕನ ತಂದೆ ತಿಳಿಸಿದ್ದಾರೆ.

ಮೈಸೂರಿನಲ್ಲಿ ಮಹಾವೀರ ಜಯಂತಿ ಆಚರಣೆ

ಯಾರಿಗೂ ತೊಂದರೆ ನೀಡದ ಸಮಾಜ ಎಂದರೆ ಅದು ಜೈನ ಸಮಾಜ



ಮೈಸೂರು, ಏ.14(ಜಿಎ)– ಯಾರಿಗೂ ತೊಂದರೆ ನೀಡದ ಸಮಾಜ ಎಂದರೆ ಅದು ಜೈನ ಸಮಾಜ ಎಂದು ಶಾಸಕ ಎಲ್. ನಾಗೇಂದ್ರ ಅವರು ಅಭಿಪ್ರಾಯಪಟ್ಟಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಭಗವಾನ್ ಮಹಾವೀರ ಜಯಂತ್ಯುತ್ಸವ ಸಮಿತಿ ವತಿಯಿಂದ ನಗರದ ಚಂದ್ರಗುಪ್ತ ರಸ್ತೆಯಲ್ಲಿರುವ ಎಂ.ಎಲ್.ಜೈನ್ ಬೋರ್ಡಿಂಗ್ ಹೋಂ ನ ಎಂ.ಎಲ್. ವರ್ಧಮಾನಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಶ್ರೀ ಭಗವಾನ್ ಮಹಾವೀರ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಭಗವಾನ್ ಮಹಾವೀರ, ಅಂಬೇಡ್ಕರ್ ಅವರ ಜಯಂತಿಯನ್ನು ಒಂದೇ ದಿನ ಆಚರಿಸುತ್ತಿರುವುದು ಸಂತಸದ ವಿಚಾರವಾಗಿದೆ ಎಂದ ಅವರು, ಜಗತ್ತು ಎತ್ತ ಸಾಗುತ್ತಿದೆ ಎಂಬುದು ತಿಳಿದಿದೆ. ರಷ್ಯಾ ಮತ್ತು ಉಕ್ರೇನ್ ದೇಶಗಳು ಯುದ್ಧದಲ್ಲಿ ಮುಳುಗಿ ಹೋಗಿವೆ. ಇದರಿಂದ ಸಾಕಷ್ಟು ಪ್ರಾಣ ಹಾನಿಯಾಗುತ್ತಿದೆ. ಆದರೆ ಭಗವಾನ್ ಮಹಾವೀರರು ವಿಶ್ವದ ಶಾಂತಿಗೋಸ್ಕರ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ಜಯಂತಿ ಇಂದು ಜೈನ ಧರ್ಮದ ಮಹತ್ವದ ಹಬ್ಬವಾಗಿದೆ ಎಂದರು.

ಭಗವಾನ್ ಮಹಾವೀರರಿಗೆ ಚಕ್ರವರ್ತಿಯಾಗಿ ಮೆರೆಯುವ ಅವಕಾಶವಿದ್ದರೂ ಅವರು ತಮ್ಮ 30ನೇ ವಯಸ್ಸಿನಲ್ಲೇ ಸತ್ಯ, ಧರ್ಮದ ಹುಡುಕಾಟಕ್ಕಾಗಿ ಜೀವದ ಎಲ್ಲವನ್ನು ತ್ಯಜಿಸಿದವರು. ಜೀವದಲ್ಲಿ ಕೆಲ ನಿಯಮಗಳನ್ನು ಅಳವಡಿಸಿಕೊಂಡಿದ್ದ ಅವರು ಅಹಿಂಸೆ, ಕಳ್ಳತನ, ಸತ್ಯ, ಇತರರ ವಸ್ತುಗಳಿಗೆ ಆಸೆ ಪಡಬಾರದು ಹಾಗೂ ಎಲ್ಲ ಜೀವಿಗಳನ್ನು ಗೌರವಿಸಬೇಕು ಎಂಬ ಅಂಶಗಳನ್ನು ಇಟ್ಟುಕೊಂಡು ಜೀವನವನ್ನು ನಡೆಸಿದರು. ಇಂದಿಗೂ ಅನೇಕರು ಈ ನಿಯಮಗಳನ್ನು ಪಾಲಿಸುತ್ತಿದ್ದಾರೆ ಎಂದರು.

ಅವರು ಒಂದು ಇರುವೆಗೂ ಹಿಂಸೆ ನೀಡದಂತೆ ಜೀವನ ನಡೆಸಿದರು. ಸಮಾಜದ ಒಳಿತಿಗಾಗಿ ಅನೇಕ ಕೆಲಸಗಳನ್ನು ಮಾಡಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ಶ್ರೀ ಮಹಾವೀರ ಸೇವಾ ಸಂಸ್ಥಾನ್ ವತಿಯಿಂದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮಲೆಯೂರು ಗುರುಸ್ವಾಮಿ ಅವರಿಗೆ 'ಶ್ರೀ ಮಹಾವೀರ ಅಹಿಂಸಾ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ 108 ಅಮೋಘ ಕೀರ್ತಿ ಮುನಿ ಮಹಾರಾಜರು, 108 ಅಮರ ಕೀರ್ತಿ ಮುನಿ ಮಹಾರಾಜರು, ಮೇಯರ್ ಸುನಂದಾ ಪಾಲನೇತ್ರ, ಶ್ರೀ ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್. ಸುನೀಲ್ ಕುಮಾರ್, ಎಂ.ಎಲ್. ಜೈನ್ ಬೋರ್ಡ್ ಹೋಂ ಕಾರ್ಯದರ್ಶಿ ಶ್ಯಾಮಲ ಮದನ್ ಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದಿಂದ ಡಾ. ಬಿ ಆರ್ ಅಂಬೇಡ್ಕರ್ ಅವರ 131ನೇ ಜಯಂತಿ ಆಚರಿಸಲಾಯಿತು. ಸಂಸ್ಥಾಪಕ ಸಿ.ಎಂ. ನಾಗರಾಜು, ನಗರಪಾಲಿಕೆ ಸದಸ್ಯ ಎಂ.ಸಿ. ರಮೇಶ್, ಸಂಘದ ಅಧ್ಯಕ್ಷ ಜಯನಗರ ಮಹೇಶ್, ಉಪಾಧ್ಯಕ್ಷ ಸುರೇಶ್ ಕುಮಾರ್, ಕಾರ್ಯದರ್ಶಿ ಕಾಳೇಗೌಡ, ಜಂಟಿ ಕಾರ್ಯದರ್ಶಿ ಎಸ್.ಪಳನಿ, ಖಜಾಂಚಿ ರವಿಕುಮಾರ್, ನಿರ್ದೇಶಕರಾದ ಏಜಾಜ್ ಪಾಶ, ಚಂದ್ರೇಗೌಡ, ಕುಮಾರ್, ಪ್ರಕಾಶ್ ಇದ್ದರು.



ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಮೈಸೂರಿನ ಪುರಭವನದ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಗ್ರಾಪಂ ಮಾಜಿ ಸದಸ್ಯರೂ ಆದ ಡಿಸಿಸಿ ಕಾರ್ಯದರ್ಶಿ ಹುಯಿಲಾಳು ರಾಮಸ್ವಾಮಿ ಮಾಲಾರ್ಪಣೆ ಮಾಡಿದರು. ಈ ವೇಳೆ ಹುಯಿಲಾಳು ಜಯರಾಮು, ಮಂಜುನಾಥ ಪ್ರಸಾದ್, ಸತೀಶ್ ಇನ್ನಿತರರಿದ್ದರು.



ಮೈಸೂರಿನ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎಂ.ಎಸ್.ಸುನಿಲ್ ಕುಮಾರ್, ಆಡಳಿತಾಧಿಕಾರಿ ಶ್ರೀಮತಿ ಕಾಂತಿ ನಾಯಕ್, ವಿಜಯಲಕ್ಷ್ಮಿ ಹಾಗೂ ವಿದ್ಯಾರ್ಥಿ ವೃಂದದವರು ಉಪಸ್ಥಿತರಿದ್ದರು.



ಮೈಸೂರಿನ ಪುರಭವನದ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಎನ್. ಬಸವರಾಜು, ಜಟ್ಟಿಹುಂಡಿ ಗ್ರಾಮದ ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ಅಧ್ಯಕ್ಷ ಹೆಚ್. ಮಣಿಕಂಠ, ಕಾರ್ಯದರ್ಶಿ ಸಿ. ಶಿವಕುಮಾರ್, ಗಾಂಧಿನಗರದ ಮುಖಂಡ ರಾಘವೇಂದ್ರ ಇನ್ನಿತರರು ಮಾಲಾರ್ಪಣೆ ಮಾಡಿದರು.



ಮೈಸೂರಿನ ಪುರಭವನದ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಟಿಎನ್ಎನ್ ಆದರ್ಶ ವಿದ್ಯಾರ್ಥಿನಿಲಯದ ಕಾರ್ಯದರ್ಶಿ ಎಂ. ಪಾಟೀಲ್, ಶಿಕ್ಷಣ ನೌಕರರ ಸಂಘದ ಅಧ್ಯಕ್ಷ ಡಾ.ಎ.ಪಿ. ಮಹದೇವಸ್ವಾಮಿ, ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷ ಸುಭಾಷ್, ಮುಖ್ಯೋಪಾಧ್ಯಾಯರಾದ ಲೋಕೇಶ್, ರಾಜೇಶ್, ಕೈಲಾಸಪುರಂ ರಾಜು ಇನ್ನಿತರರು ಮಾಲಾರ್ಪಣೆ ಮಾಡಿದರು.



ಮೈಸೂರಿನ ಕರುನಾಡ ರಕ್ಷಣಾ ವೇದಿಕೆ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಮೈಸೂರಿನ ಪುರಭವನದ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆ ಮುಂಭಾಗ ಲಸ್ಸಿ ಮತ್ತು ಮಜ್ಜಿಗೆ ಹಂಚಲಾಯಿತು. ಈ ವೇಳೆ ವೇದಿಕೆಯ ಜಿಲ್ಲಾಧ್ಯಕ್ಷ ಬಸವರಾಜು, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಶ್ರೀಮತಿ ಯಶೋಧಮ್ಮ, ಮಹೇಶ್, ರಾಚಪ್ಪ, ಸತೀಶ, ಸಂಜಯ್, ಮಹಾಲಕ್ಷ್ಮಿ, ಜಯಲಕ್ಷ್ಮಿ, ಗಗನ, ಸಿದ್ದರಾಜು, ಪ್ರೀತಿ, ಆಕಾಶ್, ಮನೋಜ್, ಕಲ್ಯಾಣ್, ನವೀನ ಮತ್ತಿತರರಿದ್ದರು.

ಮೂರನೇ ಪುಟದಿಂದ

ಇಂದು ಈಶ್ವರಪ್ಪ ರಾಜೀನಾಮೆ

ಬಂಧಿಸಬೇಕು ಎಂದು ಆಗ್ರಹಿಸುತ್ತಿದ್ದಾರೆ. ಹೀಗಾಗಿ ಈ ವಿಚಾರದಲ್ಲಿ ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗೊಂದಲ ಕ್ಕೊಳಗಾಗಿದ್ದರು. ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಲ್ಲಾ ವಿವರಗಳನ್ನು ಪಕ್ಷದ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ರವಾನಿಸಿ ಹೈಕಮಾಂಡ್‌ನ ಸಂದೇಶಕ್ಕಾಗಿ ಕಾಯುತ್ತಿದ್ದರು.

ಈ ನಡುವೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಕ್ಷದ ರಾಷ್ಟ್ರೀಯ ಸಂಘ ಟನಾ ಕಾರ್ಯದರ್ಶಿ ಸಂತೋಷ್‌ಜೀ ಅವರ ಜೊತೆ ಚರ್ಚಿಸಿ, ಪ್ರಕರಣಕ್ಕೆ ಸಂಬಂಧಿಸಿ ದಂತೆ ವಿವರಗಳನ್ನು ಕಲೆ ಹಾಕಲು ತಿಳಿಸಿದ್ದರು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ನಿನ್ನೆ ರಾತ್ರಿ ಸಂತೋಷ್ ಅವರು ದೂರವಾಣಿ ಮೂಲಕ ಈಶ್ವರಪ್ಪ ಅವರ ಜೊತೆ ಮಾತುಕತೆ ನಡೆಸಿ ಕೆಲ ವಿವರಗಳನ್ನು ಪಡೆದಿದ್ದರು. ಅಂತಿಮವಾಗಿ ಈ ಪ್ರಕರಣದ ಬಗ್ಗೆ ನಿರ್ಧಾರ ಕೈಗೊಳ್ಳುವ ತೀರ್ಮಾನವನ್ನು ಪ್ರಧಾನಿ ಮೋದಿ ಅವರ ಅಂಗಳಕ್ಕೆ ರವಾನಿಸಲಾಗಿತ್ತು. ಎಲ್ಲಾ ಮೂಲಗಳಿಂದಲೂ ಮಾಹಿತಿ ತರಿಸಿಕೊಂಡ ಪ್ರಧಾನಿ ಮೋದಿಯವರು ನೀಡಿದ ಸೂಚನೆಯಂತೆ ಇಂದು ಸಂಜೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ರವಾನಿಸಿದ ಸಂದೇಶದನುಸಾರ ಈಶ್ವರಪ್ಪ ಅವರು ತುರ್ತು ಸುದ್ದಿಗೋಷ್ಠಿ ನಡೆಸಿ, ರಾಜೀನಾಮೆ ಘೋಷಿಸಿದರು ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಅಹೋರಾತ್ರಿ ಧರಣಿ

ಹೋರಾಟ ಮುಂದುವರಿಸುತ್ತೇವೆ. ನಾಳೆಯಿಂದ ಜಿಲ್ಲಾಮಟ್ಟದಲ್ಲಿ ಹಮ್ಮಿಕೊಳ್ಳಲಾಗಿದ್ದ ಐದು ದಿನಗಳ ಪ್ರತಿಭಟನೆಯನ್ನು ಒಂದು ದಿನ ಮುಂದೂಡಿದ್ದು, ನಾಡಿದ್ದು ಅಂದರೆ 16ರಿಂದ ಪ್ರತಿಭಟನೆ ಮಾಡಲಾಗುವುದು. ಇಂದು ನಾವು 24 ಗಂಟೆಗಳ ಹಗಲು-ರಾತ್ರಿ ಧರಣಿ ಹಮ್ಮಿಕೊಂಡಿದ್ದು, ಶಾಸಕಾಂಗ ಹಾಗೂ ನ್ಯಾಯಾಂಗದ ಬಾಗಿಲಲ್ಲಿ ನಿಂತು ನ್ಯಾಯ ಕೇಳುತ್ತಿದ್ದೇವೆ. ನ್ಯಾಯ ಸಿಗಬೇಕು. ಈ ಸರ್ಕಾರ ಭ್ರಷ್ಟ ಸರ್ಕಾರ. ಸಂತೋಷ್ ಬಿಜೆಪಿ ಕಾರ್ಯಕರ್ತ. ಅವನಿಂದಲೇ 40% ಕಮಿಷನ್ ಸುಲಿಗೆ ಮಾಡುತ್ತಿರುವಾಗ ಬೇರೆಯವರಿಂದ ಹೇಗೆ ಸುಲಿಗೆ ಮಾಡುತ್ತಿರಬಹುದು. ಸಂತೋಷ್ ಪಾಟೀಲ್ ಅವರ ಪತ್ನಿ ಹಾಗೂ ತಾಯಿ ನಮಗೆ ಎಲ್ಲ ವಿಚಾರ ತಿಳಿಸಿದ್ದಾರೆ. ಮಾಧ್ಯಮಗಳ ಮುಂದೆ ಸತ್ಯಾಂಶ ಬಿಚ್ಚಿಟ್ಟಿದ್ದಾರೆ. ಅವರ ಮೇಲೆ ಸರ್ಕಾರ ಒತ್ತಡ ಹೇರುತ್ತಿದೆ. ಅವರಿಗೆ ಕಪ್ಪು ಮಸಿ ಬಳಿಯಲು ಪ್ರಯತ್ನಿಸುತ್ತಿದೆ. ಈಶ್ವರಪ್ಪ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ಬಂಧಿಸಬೇಕು. ಬಿಜೆಪಿ ಬೇಕಾದರೆ ಅವರಂತಹ ಮುತ್ತುರತ್ನಗಳನ್ನು ತಮ್ಮ ಕಚೇರಿಯಲ್ಲಿ ಇಟ್ಟುಕೊಳ್ಳಲಿ. ಇಂತಹ ಮುತ್ತುರತ್ನಗಳು ನಿಮ್ಮಲ್ಲಿದ್ದರೇನೇ ಒಳ್ಳೆಯದು. ಮಹಿಳೆಯರು ಮೂಗುತಿ ಹಾಗೂ ಓಲೆಯಲ್ಲಿ ಮುತ್ತುರತ್ನಗಳನ್ನು ಇಟ್ಟುಕೊಂಡಂತೆ ಬಿಜೆಪಿ ಲಂಚ ಹಾಗೂ ಮಂಚದವರನ್ನು ಪಕ್ಕದಲ್ಲಿ ಇಟ್ಟುಕೊಳ್ಳಲಿ.

ಕಾಯ್ದೆ ಜಾರಿಗೆ ಸರ್ಕಾರ ಬದ್ಧ

ಬ್ಯಾಂಕ್ವೆಟ್ ಹಾಲ್‌ನಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಡಾ॥ ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ಎಸ್‌ಸಿಎಸ್‌ಟಿ ವರ್ಗಗಳಿಗೆ 75 ಯೂನಿಟ್‌ಗಳ ವಿದ್ಯುಚ್ಛಕ್ತಿಯನ್ನು ಉಚಿತವಾಗಿ ನೀಡಲಾಗುವುದು. ಭೂಮಿ ಒಡೆತನ ಯೋಜನೆಯಡಿ 20 ಲಕ್ಷ ಧನಸಹಾಯ. 75 ಸಾವಿರ ಯುವಕರಿಗೆ ಕೌಶಲ್ಯಾಭಿವೃದ್ಧಿ ತರಬೇತಿ. 50 ಸಾವಿರ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ. ಗ್ರಾಮೀಣ ಪ್ರದೇಶದ ಎಸ್‌ಸಿ, ಎಸ್‌ಟಿ, ಓಬಿಸಿ, ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗುವಂತೆ ವಸತಿ ನಿಲಯಗಳ ಕ್ಲಸ್ಟರ್‌ಗಳನ್ನು ನಿರ್ಮಿಸಲಾಗುವುದು. ಈ ಯೋಜನೆಯಡಿ 1000 ಕೊಠಡಿಗಳ ಬಹುಮಹಡಿ ವಿದ್ಯಾರ್ಥಿ ನಿಲಯ ಸಮುಚ್ಚಯಗಳನ್ನು 280 ಕೋಟಿ ರೂ.ಗಳಲ್ಲಿ ನಿರ್ಮಿಸಲಾಗುವುದು ಎಂದರು. ದುರ್ಬಲ ವರ್ಗಗಳ ಅಭ್ಯುದಯಕ್ಕೆ ಶಿಕ್ಷಣ, ಉದ್ಯೋಗ, ಸಬಲೀಕರಣ ಬದಲಾವಣೆಯ ಮೆಟ್ಟಿಲುಗಳಾಗಿವೆ. 100 ಅಂಬೇಡ್ಕರ್ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುವುದು. 10 ಸಾವಿರ ಜನರಿಗೆ ಸ್ವಯಂ ಉದ್ಯೋಗಕ್ಕಾಗಿ ನೀಡಲಾಗುತ್ತಿದ್ದ 50 ಸಾವಿರ ಮಿತಿಯ ಸಹಾಯಧನವನ್ನು 1 ಲಕ್ಷ ರೂ. ಏರಿಸಲಾಗಿದೆ ಹಾಗೂ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡಲು ತೀರ್ಮಾನಿಸಲಾಗಿದೆ ಎಂದರು. ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ 500 ಕೋಟಿ ರೂ. ವಿಶೇಷ ಕಾರ್ಯಕ್ರಮ, 50 ಕೋಟಿ ರೂ. ಎಸ್‌ಸಿ, ಎಸ್‌ಟಿ ಮಹಿಳಾ ಸಂಘಗಳಿಗೆ ಅನುದಾನ ನೀಡಿ, ಅಭಯಂಕರ್ ಬ್ಯಾಂಕ್ ಜೋಡಿಸಲಾಗುತ್ತದೆ. ಪೌರಕಾರ್ಮಿಕರಿಗೆ ರಿಸ್ಕ್ ಅಲೊಯೆನ್ಸ್ 2000 ರೂ.ಗಳನ್ನು ಪ್ರಥಮ ಬಾರಿಗೆ ನೀಡಲಾಗುವುದು. ಅಂಗನವಾಡಿ ಕಾರ್ಯಕರ್ತರು, ಅಡುಗೆ ಕೆಲಸ ಮಾಡುವವರ ಮಾಸಾಶನ ಹೆಚ್ಚಿಸಲಾಗಿದೆ. ಪೌರಕಾರ್ಮಿಕರು, ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ಬಡಜನರಿಗೆ ಆರೋಗ್ಯ ಕಾರ್ಡ್ ನೀಡಲು ತೀರ್ಮಾನಿಸಲಾಗಿದೆ. ಅಲೆಮಾರಿ ಜನಾಂಗಕ್ಕೆ ವಸತಿ ನಿಲಯ ಸೌಲಭ್ಯ ನೀಡಲಾಗುವುದು ಎಂದರು.

ಪಾರಂಪರಿಕ ಸಮಿತಿ ನಿರ್ಣಯ

ನೆಲಸಮಗೊಳಿಸಿ ಹೊಸದಾಗಿ ನಿರ್ಮಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಈ ಹಿಂದೆ ಸರ್ಕಾರದಿಂದ ರಚಿಸಿದ್ದ ಟಾಸ್ಕ್‌ಫೋರ್ಸ್ ಸಮಿತಿಯು ಸದರಿ ಕಟ್ಟಡಗಳನ್ನು ಬಳಸಲು ಸಾಧ್ಯವಿಲ್ಲ. ಕೆಡವಿ ಹೊಸದಾಗಿ ನಿರ್ಮಿಸುವುದು ಸೂಕ್ತ ಎಂದು ಅಭಿಪ್ರಾಯಿಸಿತ್ತು. ಆದರೆ ಪಾರಂಪರಿಕ ತಜ್ಞರು ಈ ಎರಡೂ ಕಟ್ಟಡಗಳೂ ಸದೃಢವಾ ಗಿದ್ದು, ದುರಸ್ತಿ ಮಾಡಿ ನವೀಕರಿಸುವ ಮೂಲಕ ಸಂರಕ್ಷಿಸಬಹುದು ಎಂದು ವರದಿ ನೀಡಿದ್ದನ್ನು ಸಭೆಯಲ್ಲಿ ಚರ್ಚಿಸಲಾಯಿತು. ಈ ವಿಭಿನ್ನ ಅಭಿಪ್ರಾಯಗಳಿದ್ದ ಕಾರಣ ಬಾಡಿಗೆದಾರರೂ ಸಹ ಹಳೇ ಕಟ್ಟಡವನ್ನೇ ಉಳಿಸಿಕೊಳ್ಳಬೇಕೆಂದು ಒತ್ತಾಯಿಸಿದ್ದರಲ್ಲದೆ, ಪಾರಂಪರಿಕ ಕಟ್ಟಡಗಳನ್ನು ನೆಲಸಮಗೊಳಿಸುವುದರ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ರಾಜ್ಯ ಉಚ್ಛ ನ್ಯಾಯಾಲಯವು, ಪ್ರತ್ಯೇಕ ಪಾರಂಪರಿಕ ತಜ್ಞರ ಸಮಿತಿಯಿಂದ ವರದಿ ಪಡೆಯಬೇಕೆಂದು ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಬುಧವಾರ ಸಮಿತಿಯು ಸಮಾಲೋಚನೆ ನಡೆಸಿ ಅಂತಿಮವಾಗಿ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ನೆಲಸಮಗೊಳಿಸಿ ಪಾರಂಪರಿಕ ವಿನ್ಯಾಸದೊಂದಿಗೆ ಹೊಸದಾಗಿ ನಿರ್ಮಿಸಲು ನಿರ್ಧರಿಸಲಾಯಿತು.

ಪಾರಂಪರಿಕ ಸಮಿತಿ ಕೈಗೊಂಡ ನಿರ್ಧಾರ ಹಾಗೂ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಿ, ಅನುಮತಿ ಬಂದ ನಂತರ ಸರ್ಕಾರದ ಅನುಮೋದನೆ ಪಡೆದು ಮುಂದಿನ ಕ್ರಮ ವಹಿಸುವ ಬಗ್ಗೆಯೂ ಸಭೆಯು ಅಭಿಪ್ರಾಯಪಟ್ಟಿತು.

ಈ ಕಟ್ಟಡಗಳನ್ನು ಕೆಡವದೇ ಯಥಾಸ್ಥಿತಿ ಉಳಿಸಿಕೊಂಡು, ದುರಸ್ತಿಗೊಳಿಸಿ ಸಂರಕ್ಷಿಸಿಕೊಳ್ಳಬಹುದು ಎಂದು ಕೆಲ ಸದಸ್ಯರು ಅಭಿಪ್ರಾಯಪಟ್ಟಿದ್ದು, 2021ರ ಡಿಸೆಂಬರ್ ಮಾಹೆಯಲ್ಲಿ ವಾರಣಾಸಿಯಲ್ಲಿ ನಡೆದ ಅಖಿಲ ಭಾರತ ಮೇಯರ್ ಸಮ್ಮೇಳನ ಹಾಗೂ ಕಾಶಿವಿಶ್ವನಾಥ ಧಾಮ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಭಾಷಣದಲ್ಲಿ ಯಾವುದೇ ಹೆರಿಟೇಜ್ ಕಟ್ಟಡಗಳನ್ನು ನೆಲಸಮಗೊಳಿಸಬೇಡಿ, ನವೀಕರಣ ಮಾಡಿ ಸಂರಕ್ಷಿಸಬೇಕೆಂದು ಮೇಯರ್‌ಗಳಿಗೆ ಸಲಹೆ ನೀಡಿದ್ದಾರೆ ಎಂಬುದನ್ನು ಉಲ್ಲೇಖಿಸಿದರು.

ಆದರೆ ಬಹುತೇಕ ಸದಸ್ಯರು, ಸದೃಢತೆ ಕಳೆದುಕೊಂಡು ಶಿಥಿಲಾವಸ್ಥೆಯಲ್ಲಿರುವುದರಿಂದ ಜನರ ಪ್ರಾಣಕ್ಕೆ ಅಪಾಯ ತರುವ ಸಾಧ್ಯತೆ ಇರುವ ಕಾರಣ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ಗಳನ್ನು ನೆಲಸಮಗೊಳಿಸುವುದೇ ಸೂಕ್ತ ಎಂದು ಅಭಿಪ್ರಾಯಪಟ್ಟರು. ಆದರೆ, ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ಇತ್ತೀಚೆಗಷ್ಟೇ ಪಾರಂಪರಿಕ ನಗರ ಮೈಸೂರಿನಲ್ಲಿರುವ ಅತೀ ಹಳೆಯದಾದ ಈ ಕಟ್ಟಡಗಳನ್ನು ನೆಲಸಮಗೊಳಿಸಬೇಕಾಗಿಲ್ಲ. ಬದಲಾಗಿ ರಿಪೇರಿ ಮಾಡಿ ಉಳಿಸಿಕೊಳ್ಳಬಹುದು. ಸರ್ಕಾರ ತಮಗೆ ಜವಾಬ್ದಾರಿ ವಹಿಸಿದರೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನದಿಂದಲೇ ಕಾಮಗಾರಿ ಕೈಗೊಂಡು ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ದುರಸ್ಥಿಗೊಳಿಸಿ ಸಂರಕ್ಷಿಸುತ್ತೇವೆ ಎಂದು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಬಾಡಿಗೆದಾರರಿಗೆ ಪರ್ಯಾಯ ವ್ಯವಸ್ಥೆ

ಹೊಸ ಕಟ್ಟಡ ನಿರ್ಮಾಣವಾಗುವವರೆಗೆ ಬಾಡಿಗೆದಾರರನ್ನು ಬೇರೆಡೆಗೆ ಸ್ಥಳಾಂತರಿಸಿ, ಕಟ್ಟಡ ಪೂರ್ಣಗೊಂಡ ನಂತರ ಅವರಿಗೇ ಹೊಸ ಕಟ್ಟಡದಲ್ಲಿ ಮಳಿಗೆಗಳನ್ನು ನೀಡಲಾಗುವುದು. ಈ ಬಗ್ಗೆ ಶಾಸಕರ ನೇತೃತ್ವದಲ್ಲಿ ಮುಂದಿನ ವಾರ ಮಳಿಗೆದಾರರ ಸಭೆ ಕರೆದು ಮನವರಿಕೆ ಮಾಡಲಾಗುವುದು ಎಂದು ಆಯುಕ್ತರು ತಿಳಿಸಿದರು. ನ್ಯಾಯಾಲಯ ಹಾಗೂ ಸರ್ಕಾರದಿಂದ ಹಸಿರು ನಿಶಾನೆ ದೊರೆಯುತ್ತಿದ್ದಂತೆ ಹೊಸ ಕಟ್ಟಸ ನಿರ್ಮಿಸಲು ಪ್ರಕ್ರಿಯೆ ಆರಂಭವಾಗಲಿದೆ. ಅದಕ್ಕೆ ಪೂರಕವಾಗಿ ಅಗತ್ಯವಿರುವ ಸಿದ್ಧತೆಗಳನ್ನು ಪಾಲಿಕೆ ಮಾಡಿಕೊಳ್ಳಲಿದೆ ಎಂದು ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಸರ್ಕಾರದ ಅನುಮೋದನೆ ಬಳಿಕ ಕ್ರಮ

ಹೆರಿಟೇಜ್ ಕಮಿಟಿ ನಿರ್ಣಯದಂತೆ ನ್ಯಾಯಾಲಯದ ಅನುಮತಿ ಮತ್ತು ಸರ್ಕಾರದ ಅನುಮತಿ ಬಂದ ನಂತರ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ಕೆಡವಿ ಹೊಸದಾಗಿ ನಿರ್ಮಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳುವುದಾಗಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ತಿಳಿಸಿದ್ದಾರೆ. ಈ ಹಿಂದೆ ಎರಡು ಸಮಿತಿಗಳು ವಿಭಿನ್ನ ವರದಿ ನೀಡಿ ಶಿಫಾರಸ್ಸು ಮಾಡಿದ್ದರಿಂದ ಉಂಟಾಗಿದ್ದ ಗೊಂದಲದಿಂದಾಗಿ ಅಂತಿಮ ನಿರ್ಧಾರ ಕೈಗೊಳ್ಳಲು ಸರ್ಕಾರಕ್ಕೆ ಸಾಧ್ಯವಾಗಿರಲಿಲ್ಲ. ಇದೀಗ ನ್ಯಾಯಾಲಯವೇ ರಚಿಸಿದ್ದ ಪಾರಂಪರಿಕ ತಜ್ಞರ ಸಮಿತಿ ಶಿಫಾರಸ್ಸು ಮಾಡಿರುವ ಕಾರಣ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಕಟ್ಟಡಗಳನ್ನು ನೆಲಸಮಗೊಳಿಸಿ ಹೊಸದಾಗಿ ನಿರ್ಮಿಸಲಾಗುವುದು. ಹೊಸ ಕಟ್ಟಡ ನಿರ್ಮಿಸುವವರೆಗೆ ದೇವರಾಜ ಮಾರುಕಟ್ಟೆ ಅಂಗಡಿ ಮಳಿಗೆದಾರರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕಾಗಿದ್ದು, ಈ ಬಗ್ಗೆ ಸಭೆ ನಡೆಸಿ ಚರ್ಚಿಸಿ ಕ್ರಮ ವಹಿಸುತ್ತೇವೆ ಎಂದು ನಾಗೇಂದ್ರ ತಿಳಿಸಿದರು.

ಮೈಸೂರು, ಚಾಮರಾಜನಗರ ಜಿಲ್ಲಾ ರಸಗೊಬ್ಬರ, ಬಿತ್ತನೆ ಬೀಜ, ಕ್ರಿಮಿನಾಶಕ ಸಂಘದ ವಾರ್ಷಿಕ ಮಹಾಸಭೆ

ರಸಗೊಬ್ಬರ ದರ ಏರಿಕೆಯಿಂದ ರೈತರಿಗೆ ನಷ್ಟ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ವಿಷಾದ

ಮೈಸೂರು, ಏ.14(ಆರ್‌ಕೆಬಿ)– ರಸಗೊಬ್ಬರ ದರ ಪ್ರತಿ ಬ್ಯಾಗ್‌ಗೆ 700 ರೂ. ಜಾಸ್ತಿಯಾಗಿದೆ. ಇದರಿಂದ ರೈತರಿಗಾಗಲೀ, ರಸಗೊಬ್ಬರ ಮಾರಾಟಗಾರರಿಗಾಗಲೀ ಅನುಕೂಲವಿಲ್ಲ. ನಮಗಂತೂ ಲಾಭ ಹೆಚ್ಚು ಸಿಗುತ್ತಿಲ್ಲ. ಇನ್ನೂ ಹೆಚ್ಚಿನ ಬಂಡವಾಳ ಹಾಕಬೇಕಾದ ಪರಿಸ್ಥಿತಿ ಬಂದಿದೆ ಎಂದು ಮಾರಾಟಗಾರರು ಅಲವತ್ತುಕೊಂಡಿದ್ದಾರೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಮೈಸೂರಿನ ಬಲ್ಲಾಳ್ ವೃತ್ತದ ಬಳಿಯಿರುವ ನಿತ್ಯೋತ್ಸವ ಸಭಾಂಗಣದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ ಬಿತ್ತನೆ ಬೀಜ ಹಾಗೂ ಕ್ರಿಮಿನಾಶಕ ಮಾರಾಟಗಾರರ ಸಂಘದ ಜಿಲ್ಲಾ ಮಟ್ಟದ ವಾರ್ಷಿಕ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕದ ಬೆಲೆ ಒಂದೂವರೆ ಪಟ್ಟು ಹೆಚ್ಚಾಗಿದೆ. ದರ ಏರಿಕೆಯಿಂದ ರೈತರಿಗೂ ಸಮಸ್ಯೆ ಆಗುತ್ತಿದೆ. ಕೃಷಿ ಪರಿಕರ ಬೆಲೆಯೂ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ರೈತರ ಮತ್ತು ರಸಗೊಬ್ಬರ ಮಾರಾಟಗಾರರ ಕೈ ಹಿಡಿಯಬೇಕಾಗಿದೆ. ಇದಕ್ಕಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಕೇಂದ್ರ ಸರ್ಕಾರದ ಗಮನ ಸೆಳೆಯಲು ಸಂಘಟಿತರಾಗಿ ಕೇಂದ್ರಕ್ಕೆ ಮನವಿ ಸಲ್ಲಿಸಬೇಕಾದ ಅಗತ್ಯವಿದೆ ಎಂದು ಹೇಳಿದರು.

ಎಂಸಿಡಿಸಿಸಿ ಬ್ಯಾಂಕ್ ಮತ್ತು ರೈತರ ನಡುವೆ ಅವಿನಾಭಾವ ಸಂಬಂಧವಿದೆ. ರಸಗೊಬ್ಬರ ಮಾರಾಟಗಾರರು ಸಹ ನಮ್ಮ ಜಿಲ್ಲಾ ಸಹಕಾರ ಬ್ಯಾಂಕ್ ಸಂಪರ್ಕಕ್ಕೆ ಬಂದರೆ ರೈತರಿಗೆ ಇನ್ನಷ್ಟು ಸಹಾಯ ಮಾಡಬಹುದು ಎಂದ ಅವರು, ರೈತರು, ಡಿಸಿಸಿ ಬ್ಯಾಂಕ್, ಕೃಷಿ ಇಲಾಖೆ ಹಾಗೂ ರಸಗೊಬ್ಬರ ಮಾರಾಟಗಾರರು ಎಲ್ಲರೂ ರೈತರ ಪರ ಕೆಲಸ ಮಾಡುತ್ತೇವೆ. ನಾವೆಲ್ಲರೂ ಒಟ್ಟಾಗಿ ಕೂಡಿ ರೈತರಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮ ರೂಪಿಸಬೇಕಾಗಿದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಎಂ.ಎ.ನಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ಕೃಷಿ ಇಲಾಖೆ ಚಾಮರಾಜನಗರ ಜಂಟಿ ಕೃಷಿ ನಿರ್ದೇಶಕಿ ಡಾ.ಹೆಚ್.ಟಿ.ಚಂದ್ರಕಲಾ, ಸಂಘದ ಗೌರವಾಧ್ಯಕ್ಷ ಯೋಗರಾಜ್, ಉಪಾಧ್ಯಕ್ಷ ಬಿ.ಪಿ.ಶಿವಪ್ರಕಾಶ್, ಕಾರ್ಯದರ್ಶಿ ಕೆ.ಕಿರಣ್, ಜಂಟಿ ಕಾರ್ಯದರ್ಶಿ ಕೆ.ಅಂಬಿಕ ಚರಣವಾಡಿ, ಆರ್.ಮಹೇಶ್, ಮೋಹನ್‌ಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ನಿತ್ಯೋತ್ಸವ ಸಭಾಂಗಣದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಕ್ರಿಮಿನಾಶಕ ಮಾರಾಟಗಾರರ ಸಂಘದ ಜಿಲ್ಲಾ ಮಟ್ಟದ ವಾರ್ಷಿಕ ಸಮಾವೇಶಕ್ಕೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ ಚಾಲನೆ ನೀಡಿದರು. ಚಿತ್ರದಲ್ಲಿ ಮೈಸೂರು ಜಂಟಿ ಕೃಷಿ ನಿರ್ದೇಶಕ ಡಾ.ಮಹಂತೇಶಪ್ಪ, ಚಾಮರಾಜನಗರ ಜಂಟಿ ಕೃಷಿ ನಿರ್ದೇಶಕಿ ಡಾ.ಎಚ್.ಟಿ.ಚಂದ್ರಕಲಾ, ಸಂಘದ ಅಧ್ಯಕ್ಷ ಎಂ.ಎ.ನಂಜಪ್ಪ, ಕಾರ್ಯದರ್ಶಿ ಕೆ.ಕಿರಣ್ ಇತರರನ್ನು ಕಾಣಬಹುದು.

ದರಪಟ್ಟಿ ಫಲಕ ಖಾಲಿ.... ದೂರು

ಅಧಿಕೃತ ಲೈಸೆನ್ಸ್ ಹೊಂದಿರುವ ರಸಗೊಬ್ಬರ ಮತ್ತು ಕ್ರಿಮಿನಾಶಕ ಮಾರಾಟಗಾರರ ಅಂಗಡಿಗಳ ಮುಂದಿರುವ ದರಪಟ್ಟಿ ಫಲಕಗಳು ಖಾಲಿ ಬಿಡಲಾಗಿದೆ. ಶೇ.90ರಷ್ಟು ಅಂಗಡಿಗಳ ದರ ಪಟ್ಟಿ ಫಲಕಗಳಲ್ಲಿ ಕ್ರಿಮಿನಾಶಕ ಮತ್ತು ಗೊಬ್ಬರ ದರ ಬೆಲೆಯನ್ನು ಬರೆಯದೆ ಖಾಲಿ ಬಿಡಲಾಗಿದೆ. ದರ ನಮೂದಿಸುತ್ತಿಲ್ಲ. ಖರೀದಿಸಿದ ಕೃಷಿ ಪರಿಕರಗಳಿಗೆ ಸಂಬಂಧಿಸಿದಂತೆ ಬಿಲ್ ನೀಡುತ್ತಿಲ್ಲ ಎಂದು ರೈತರು ದೂರಿದ್ದಾರೆ. ಹಾಗಾಗಿ ದರ ಪಟ್ಟಿ ಫಲಕದಲ್ಲಿ ದರ ನಮೂದಿಸಲು ಎಲ್ಲ ರಸಗೊಬ್ಬರ ಮಾರಾಟಗಾರರು ಕ್ರಮ ವಹಿಸಬೇಕು.

–ಡಾ.ಮಹಂತೇಶಪ್ಪ ಜಂಟಿ ಕೃಷಿ ನಿರ್ದೇಶಕ, ಮೈಸೂರು

ರಸಗೊಬ್ಬರ ದರ ಹೆಚ್ಚಳ: ಕುಸಿಯುತ್ತಿರುವ ಕೃಷಿ ಅವಲಂಬಿತರ ಸಂಖ್ಯೆ

ಜಂಟಿ ಕೃಷಿ ನಿರ್ದೇಶಕ ಡಾ.ಮಹಂತೇಶಪ್ಪ ಆತಂಕ

ಮೈಸೂರು, ಏ.14– ವರ್ಷದಲ್ಲಿ ಎರಡು ಮೂರು ಬಾರಿ ರಸಗೊಬ್ಬರ ಬೆಲೆ ಹೆಚ್ಚಾಗಿದೆ. ನಮ್ಮ ಇಲಾಖೆಗೂ ಈ ಬಗ್ಗೆ ಕೆಲವೊಮ್ಮೆ ಮಾಹಿತಿ ಇರುವುದಿಲ್ಲ. ಇದೇ ರೀತಿ ದರ ಏರುತ್ತಾ ಹೋದರೆ ಕೃಷಿ ಅವಲಂಬಿತರ ಸಂಖ್ಯೆ ಕಡಿಮೆಯಾಗುತ್ತದೆ ಎಂದು ಮೈಸೂರಿನ ಜಂಟಿ ಕೃಷಿ ನಿರ್ದೇಶಕ ಡಾ.ಮಹಂತೇಶಪ್ಪ ಆತಂಕ ವ್ಯಕ್ತಪಡಿಸಿದರು. ಹಿಂದೆ ಶೇ.82ರಷ್ಟಿದ್ದ ಕೃಷಿ ಅವಲಂಬಿತರ ಸಂಖ್ಯೆ ಇಂದು ಶೇ.61ಕ್ಕೆ ಕುಸಿದಿದೆ. ಈ ಸಂಖ್ಯೆ ಇನ್ನೂ ಕಡಿಮೆಯಾಗದಂತೆ ನೋಡಿಕೊಳ್ಳಬೇಕಾಗಿದೆ. ಇಂದು ಆಹಾರದ ಗುಣಮಟ್ಟವೂ ಕಡಿಮೆಯಾಗುತ್ತಿದೆ. ಸಾವಯವ ಕೃಷಿ ಮಾಡಿ ಎನ್ನುತ್ತಿದ್ದೀರಿ. ಅದರಿಂದ ನಮಗೆ ನಷ್ಟವಾಗುತ್ತಿದೆ ಎಂದು ರೈತರು ನಮಗೆ ದೂರುತ್ತಿದ್ದಾರೆ. ಆದರೆ ಇಂದು ರಸಗೊಬ್ಬರ, ಕೀಟನಾಶಕ ಬಳಕೆಯಿಂದ ನಾವು ಭೀಕರ ರೋಗಗಳಿಗೆ ತುತ್ತಾಗುತ್ತಿದ್ದೇವೆ. ಇದಕ್ಕೆ ವಿಷಪೂರಿತ ವಾತಾವರಣ ಕಾರಣ ಎಂದರು. ಎಲ್ಲ ಸಂಘಟನೆಗಳ ಒಗ್ಗೂಡಿ ರೈತರಲ್ಲಿ ಅರಿವು ಮೂಡಿಸುವ ಕಾರ್ಯ ಹಮ್ಮಿಕೊಳ್ಳಬೇಕು. ಕ್ರಿಮಿನಾಶಕ, ರಸಗೊಬ್ಬರಗಳ ಬಳಕೆ ಕಡಿಮೆ ಮಾಡಿ, ಗುಣಮಟ್ಟದ ಆಹಾರ ಬೆಳೆಯಲು ರೈತರಲ್ಲಿ ಆಸಕ್ತಿ ಮೂಡಿಸಬೇಕಾದ ಅಗತ್ಯವಿದೆ ಎಂದರು.

ಕೃಷಿ ಪರಿಕರ ಮಾರಾಟಗಾರರು ಬಿಟಿ ಹತ್ತಿ ಬಿತ್ತನೆ ಬೀಜವನ್ನು ವ್ಯವಸ್ಥಿತ ರೀತಿಯಲ್ಲಿ ವಿತರಣೆ ಮಾಡಲು ಸಲಹೆ ನೀಡಿದ ಅವರು, ಪುಲಿ ಬಿತ್ತನೆ ಬೀಜವನ್ನು ಸರ್ಕಾರ ನೀಡುತ್ತಿದೆ. 810 ರೂ. ಸರ್ಕಾರ ನಿಗದಿಪಡಿಸಿದೆ. ಅದಕ್ಕಿಂತ ಹೆಚ್ಚು ಬೆಲೆಗೆ ಮಾರಾಟ ಮಾಡಬೇಡಿ, ಮುಂದಿನ ದಿನಗಳಲಿ ಹೆಚ್ಚು ಬಿತ್ತನೆ ಬೀಜ ಬರುವ ಸಾಧ್ಯತೆಗಳಿವೆ ಎಂದರು.

ಸಚಿವ ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ಕಾಂಗ್ರೆಸ್ ಪ್ರತಿ ಜಿಲ್ಲೆಯಲ್ಲೂ ಪ್ರತಿಭಟನೆ

ಮೈಸೂರು, ಏ.14(ಎಂಟಿವೈ)– ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಬಂಧಿಸುವಂತೆ ಆಗ್ರಹಿಸಿ ಕಾಂಗ್ರೆಸ್ ಪ್ರತಿ ಜಿಲ್ಲೆಯಲ್ಲೂ ಪ್ರತಿಭಟನೆ ನಡೆಸಲಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ.



ಮೈಸೂರಲ್ಲಿ ಪತ್ರಕರ್ತರರೊಂದಿಗೆ ಮಾತನಾಡಿದ ಅವರು, ಮಾಜಿ ಸಚಿವ ಕೆ.ಜೆ.ಜಾರ್ಜ್ ಅವರ ವಿಚಾರದಲ್ಲಿ ಇದೇ ಕೆ.ಎಸ್.ಈಶ್ವರಪ್ಪ ಮತ್ತು ಬಿಜೆಪಿಗರು ಒತ್ತಡ ಹಾಕಿ ರಾಜೀನಾಮೆ ಪಡೆದಿದ್ದಾರೆ. ಅದೇ ಮಾರ್ಗವನ್ನೂ ಅವರು ಅನುಸರಿಸಬೇಕು ಅಲ್ಲವೇ? ಅಂದು ಜಾರ್ಜ್ ಅವರ ರಾಜೀನಾಮೆ ನೀಡಿದಂತೆ ಇಂದು ಈಶ್ವರಪ್ಪನವರೂ ರಾಜೀನಾಮೆ ನೀಡಬೇಕು. ಅವರು ಅಪರಾಧಿಯೋ ನಿರಪರಾಧಿಯೋ ಎಂದು ಆ ನಂತರ ನಿರ್ಧಾರವಾಗಲಿದೆ. ಅದಕ್ಕೂ ಮೊದಲು ಸಚಿವ ಸ್ಥಾನದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು

ಈಗ ಇರುವುದೇ ನರಹಂತಕರ ಸರ್ಕಾರ: ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಸಿದ್ದರಾಮಯ್ಯ ಸರ್ಕಾರ ನರಹಂತಕ ಸರ್ಕಾರ ಎಂಬ ಹೇಳಿಕೆ ಕೊಟ್ಟಿದ್ದಾರೆ. ಆದರೆ ರಾಜ್ಯದಲ್ಲಿರುವುದೇ ನರಹಂತಕ ಸರ್ಕಾರ ಯಾವುದು ಎಂದು ಗುತ್ತಿಗೆದಾರ ಸಂತೋಷ್ ಪಾಟೀಲ್ ಪ್ರಕರಣ ತಿಳಿಸಿದೆ. ಸಂತೋಷ್ ಪಾಟೀಲ್ ಪ್ರಕರಣ ಬಿಜೆಪಿ ಕಾರ್ಯಕರ್ತರಿಗೆ ಎಚ್ಚರಿಕೆ ಗಂಟೆಯಾಗಬೇಕು. ನಿಮ್ಮ ನಾಯಕರಿಂದಲೇ ನಿಮಗೆ ತೊಂದರೆಯಾಗುತ್ತದೆ. ಆ ನಂತರ ಅವರು ಯಾರೆಂದು ಗೊತ್ತೇ ಇಲ್ಲ ಎನ್ನುತ್ತಾರೆ. ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಪರ, ಸಂವಿಧಾನ ಪರ ಆಡಳಿತ ಮಾಡಿರುವುದು ದಾಖಲೆಯಲ್ಲಿ ಸೇರಿದೆ ಎಂದು ಮಹದೇವಪ್ಪ ಹೇಳಿದರು.

ಬಿಜೆಪಿ ಸರ್ಕಾರ ಕಾನೂನಿನ ಪರಿಪಾಲನೆಯಲ್ಲಿ ಸಂಪೂರ್ಣವಾಗಿ ಸೋತಿದೆ. ರಾಜ್ಯದಲ್ಲಿ ಈಗ ಜಂಗಲ್ ಆಡಳಿತ ನಡೆಯುತ್ತಿದೆ. ಎಲ್ಲಿ ಬೇಕೆಂದರಲ್ಲಿ ಹೋಗೋದು ಹೊಡೆದಾಡೋದು, ಸಂವಿಧಾನ ಬಾಹಿರ ಕೆಲಸ ಮಾಡುವುದು ನಡೆಯುತ್ತಿವೆ. ಇಂತಹ ವಿಚಾರಗಳು ನಡೆಯುತ್ತಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಇದು ಅಸಮರ್ಥ ಸರ್ಕಾರ ಎಂದು ದೂರಿದರು.

ಮಾಜಿ ಸಚಿವ ಬಿ.ಜೆ. ಪುಟ್ಟಸ್ವಾಮಿ ಪೀಠಾಧಿಪತಿ ಮಾಡುವ ಕ್ರಮಕ್ಕೆ ಕರ್ನಾಟಕ ಪ್ರಜಾಪಾರ್ಟಿ ವಿರೋಧ

ಮೈಸೂರು,ಏ.14(ಆರ್‌ಕೆಬಿ)–ಮಾಜಿ ಸಚಿವ ಬಿ.ಜೆ.ಪುಟ್ಟಸ್ವಾಮಿ ಅವರಿಗೆ ದೀಕ್ಷೆ ನೀಡುವ ಮೂಲಕ ಅವರನ್ನು ತೈಲೇಶ್ವರ ಗಾಣಿಗರ ಮಹಾ ಸಂಸ್ಥಾನ ಮಠದ ಪೀಠಾಧಿಪತಿಗಳನ್ನಾಗಿ ಮಾಡುವ ಕ್ರಮವನ್ನು ಕರ್ನಾಟಕ ಪ್ರಜಾಪಾರ್ಟಿ ರೈತ ಪರ್ವ ವಿರೋಧಿಸಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ, ಪೀಠಾಧಿಪತಿಗಳಾಗುವವರು ನ್ಯಾಯ, ನಿಷ್ಠೆ, ಪ್ರಾಮಾಣಿಕತೆ, ಸಾಮಾಜಿಕ ಕಳಕಳಿ ಹಾಗೂ ಧರ್ಮಕ್ಕೆ ಸಂಬಂಧಪಟ್ಟ ಗ್ರಂಥಗಳ ಜ್ಞಾನಾರ್ಜನೆ ಹೊಂದಿರಬೇಕು. ಆದರೆ, ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿ, ಗಾಣಿಗರ ಸಂಘದ ಅಧ್ಯಕ್ಷರಾಗಿ, ಕೊಳಚೆ ನಿರ್ಮೂಲನಾ ಮಂಡಳಿಯ ಅಧ್ಯಕ್ಷರಾಗಿ, ಬಿಜೆಪಿ ಪಕ್ಷದ ವಿವಿಧ ಸ್ಥಾನಗಳನ್ನು ಬಿ.ಜೆ.ಪುಟ್ಟಸ್ವಾಮಿ ಅಲಂಕರಿಸಿದ್ದಾರೆ. ಸಾಂಸಾರಿಕ ಜೀವನವನ್ನೂ ಮಾಡಿದವರಾಗಿದ್ದಾರೆ. ಹೀಗಾಗಿ 45 ಲಕ್ಷ ಜನ ಸಂಖ್ಯೆ ಇರುವ ಗಾಣಿಗ ಮಠದ ಪೀಠಕ್ಕೆ ಇವರು ಪೀಠಾಧಿಪತಿಗಳಾಗಲು ಅರ್ಹರಲ್ಲ ಎಂದು ಪ್ರತಿಪಾದಿಸಿದರು.

ಈ ಕುರಿತು ತಾವು ಮುಖ್ಯಮಂತ್ರಿ ಹಾಗೂ ಮುಜರಾಯಿ ಇಲಾಖೆ ಹಾಗೂ ದೀಕ್ಷೆ ನೀಡಲಿದ್ದಾರೆನ್ನುವ ಶ್ರೀ ಜಯೇಂದ್ರಪುರಿ ಸ್ವಾಮೀಜಿಗಳಿಗೆ ಮನವಿ ಮಾಡಿದ್ದು, ಒಂದು ವೇಳೆ ನಮ್ಮ ಮನವಿ ತಿರಸ್ಕರಿಸಿದಲ್ಲಿ ನ್ಯಾಯಾಲಯದ ಮೊರೆ ಹೋಗುವುದಾಗಿ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ತಮ್ಮಯ್ಯ, ಗಾಣಿಗ ಮುಖಂಡರಾದ ಕುಮಾರಸ್ವಾಮಿ, ಬೆಲವತ್ತ ಶಿವಕುಮಾರ್, ಎಸ್.ಮಹೇಶ್, ರಘು ಬ್ಯಾತಹಳ್ಳಿ, ಟಿ.ವಿ.ನಾಗರಾಜು ಉಪಸ್ಥಿತರಿದ್ದರು.

ಹಿರಿಯ ಪತ್ರಿಕಾ ವಿತರಕರ ಪುತ್ರಿಯ ಸಾಧನೆ

ಮೈಸೂರು,ಏ.14–ಹಿರಿಯ ಪತ್ರಿಕಾ ವಿತರಕ, ಮೈಸೂರಿನ ನಾಯ್ಡುನಗರ ನಿವಾಸಿ ಎಂ.ನಾಗರಾಜು ಅವರ ಪುತ್ರಿ, ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಬೆಳ್ಳೂರು ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ಎನ್. ಸುಮಾಭಾರತಿ, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ನಡೆಸಿದ 2ನೇ ವರ್ಷದ, 3ನೇ ಹಂತದ ಪರೀಕ್ಷೆಯಲ್ಲಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಜೇಷ್ಠ ಶ್ರೇಣಿಯಲ್ಲಿ ತೇರ್ಗಡೆಯಾಗಿ ಪ್ರತಿಭಾನ್ವಿತೆಯಾಗಿ ಹೊರ ಹೊಮ್ಮಿದ್ದ ಸುಮಾಭಾರತಿ, ತನ್ನ ಬಯಕೆಯಂತೆ ಎಂಬಿಬಿಎಸ್ ಆಯ್ಕೆ ಮಾಡಿಕೊಂಡಿದ್ದರು.



ಇಂದು ಭರತನಾಟ್ಯ



ಮೈಸೂರು,ಏ.14–ಮೈಸೂರಿನ ಕುವೆಂಪುನಗರದ ವೀಣೆ ಶೇಷಣ್ಣ ಭವನದಲ್ಲಿ ಏ.15ರಂದು ಸಂಜೆ 7 ಗಂಟೆಗೆ ವಿದುಷಿ ಡಾ.ವಸುಂಧರಾ ದೊರೆಸ್ವಾಮಿ ಅವರು ಶಿಷ್ಯೆ ಕುಮಾರಿ ಗೌರಿ ಬನಶಂಕರಿ ರಾಜೇಂದ್ರ ಅವರಿಂದ ಭರತನಾಟ್ಯ ಕಾರ್ಯಕ್ರಮ ಆಯೋಜಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದುಷಿ ದೀಪ್ತಿ ಶ್ರೀನಾಥ್–ಗಾಯನ, ವಿದ್ವಾನ್ ಹರಿರಂಗಸ್ವಾಮಿ ಮೃದಂಗ, ವಿದ್ವಾನ್ ರಾಕೇಶ್ ಸುಧೀರ್–ಕೊಳಲು ಸಹಕಾರ ನೀಡಲಿದ್ದಾರೆ.

ನಾಳೆ ಶನಿ ಮಹಾಶಾಂತಿ

ಮೈಸೂರು: ಇಲ್ಲಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಏ.16ರಂದು ಶನಿವಾರ ಮಿಥುನ ಕನ್ಯಾ ಧನಸ್ಸು ಮಕರ ಕುಂಭ ರಾಶಿಯವರಿಗೆ ಶನಿ ಮಹಾಶಾಂತಿ ಏರ್ಪಡಿಸಿದೆ. ಅಲ್ಲದೆ ಬಾಧಾ ನಿವಾರಕ ಶ್ರೀ ಸುದರ್ಶನ ಹೋಮ ಮತ್ತು ಆಯುವೃದ್ಧಿ ಶ್ರೀ ಮೃತ್ಯುಂಜಯ ಹೋಮ ಮತ್ತು ಚಿತ್ರ ಪೂರ್ಣಮಿ ಪ್ರಯುಕ್ತ ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಬೆಳಗ್ಗೆ 8.30ಗೆ ಪ್ರಾರಂಭವಾಗಿ 12ಕ್ಕೆ ಪೂರ್ಣಾಹುತಿ.ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ಸಂಕಲ್ಪಮಾಡಿಸಲಾಗುವುದು. ವಿವರಗಳಿಗೆ ಮೈ ಕುಮಾರ್ (ಜಾತಕ ವಿಮರ್ಶಕ) ರನ್ನು ಮೊ.9845183392 9480966522 ಮೂಲಕ ಸಂಪರ್ಕಿಸಿ.



ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದಿಂದ ಪುರಭವನದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಸಂಘದ ಗೌರವಾಧ್ಯಕ್ಷ ಸಿ.ಕೆ.ಮಹೇಂದ್ರ, ಅಧ್ಯಕ್ಷ ಹೋಮದೇವ, ಪದಾಧಿಕಾರಿಗಳಾದ ಶ್ರೀಕಾಂತ, ಚಿನ್ನರಾಜು, ಹರಿರಾವ್, ಮಹಾದೇವಸ್ವಾಮಿ, ನಂಜುಂಡಯ್ಯ, ವಿ.ರವಿ, ಹರೀಶ್, ಶಿವಣ್ಣ, ರಮೇಶ್ ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.04.2022 ಶುಕ್ರವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ: ಉಫ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಗಾನಭಾರತೀ:** ಕುಮಾರಿ ಎಸ್. ಶ್ರೀನಿಧಿ ಅವರಿಂದ ಭರತನಾಟ್ಯ, ವಿದುಷಿ ರೂಪಶ್ರೀ ಮಧುಸೂದನ್–ನಟುವಾಂಗ, ವಿದುಷಿ ದೀಪ್ತಿ ಶ್ರೀನಾಥ್–ಗಾಯನ, ವಿದ್ವಾನ್ ಹರಿರಂಗಸ್ವಾಮಿ–ಮೃದಂಗ, ವಿದ್ವಾನ್ ರಾಕೇಶ್ ಸುಧೀರ್–ಕೊಳಲು, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಸಿರಿಗನ್ನಡ ವೇದಿಕೆ ಮೈಸೂರು, ನಾಗನವ ಕಲಾ ಸಾಹಿತ್ಯ ವೇದಿಕೆ :** ಚೈತ್ರ ಸಂಭ್ರಮ–2022 ಕವಿಗೋಷ್ಠಿ, ಉದ್ಘಾಟನೆ : ಸಿರಿಗನ್ನಡ ವೇದಿಕೆ ಉಪಾಧ್ಯಕ್ಷ ಕೂಡ್ಲಾಪುರ ಮಹದೇವನಾಯಕ್, ಕವಿಗೋಷ್ಠಿ ಅಧ್ಯಕ್ಷತೆ : ಕವಿ ಎಂ.ಬಿ. ಸಂತೋಷ್, ಉಪಸ್ಥಿತರು : ಡಾ. ಸೌಗಂಧಿಕಾ ವಿ. ಜೋಯಿಸ್, ಟಿ.ಎನ್. ಶ್ರೀಕಂಠಶರ್ಮ, ವೇದಿಕೆ ಅಧ್ಯಕ್ಷ ಹೊಮ್ಮ ಮಂಜುನಾಥ್, ಪ್ರಾಸ್ತಾವಿಕ ನುಡಿ : ಎ. ಹೇಮಗಂಗಾ, ಸ್ಥಳ: ನಮನ ಕಲಾ ಮಂಟಪ, ರಾಮಮಂದಿರದ ಹತ್ತಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.15ಕ್ಕೆ.

ವಿವಿಧೆಡೆ ಶ್ರೀ ರಾಮನವಮಿ

■ **ಗಾನವಿಶಾರದ ಶ್ರೀಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ:** 106ನೇ ವಾರ್ಷಿಕ ಪಾರಂಪರಿಕ ರಾಮನವಮಿ ಸಂಗೀತೋತ್ಸವ, ವಿದ್ವಾನ್ ಸಾಕೇತ್ ರಾಮನ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಗೋಷ್ಠಿ, ವಿದ್ವಾನ್ ಭಾಸ್ಕರ್–ಪಿಟೀಲು, ವಿದ್ವಾನ್ ಕುಳೂರು ಜಯಚಂದ್ರ ರಾವ್–ಮೃದಂಗ, ವಿದ್ವಾನ್ ಗುರುಪ್ರಸನ್ನ–ಖಂಜಿರ ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 5.30ಕ್ಕೆ.

■ **ಶ್ರೀ ಜಾನಕೀ ರಾಮ ಮಂದಿರ :** ಶ್ರೀ ರಾಮನವಮಿ ಕಾರ್ಯಕ್ರಮ, ಬೆಳಗ್ಗೆ 11 ಗಂಟೆಗೆ ಶ್ರೀ ಗುರು ವಿಠಲ ಭಜನಾ ಮಂಡಳಿಯವರಿಂದ ಭಜನೆ, ಸಂಜೆ 6 ಗಂಟೆಗೆ ಶ್ರೀ ರಾಮನಿಗೆ ತೊಟ್ಟಿಲೋತ್ಸವ ಜೊತೆಗೆ ಶ್ರೀ ಆಂಡಾಳ್ ಘೋಷ್ಠಿ ಅವರಿಂದ ದಿವ್ಯ ಪ್ರಬಂಧಂ, ಸ್ಥಳ: ಮಂದಿರದ ಆವರಣ, ಗೊಲ್ಲಗೇರಿ, ಚಾಮರಾಜ ಮೊಹಲ್ಲಾ.



■ **ಶ್ರೀ ರಾಮ ಸೇವಾ ಮಂಡಲಿ :** ಶ್ರೀ ರಾಮೋತ್ಸವ ಕಾರ್ಯಕ್ರಮ, ಸಂಜೆ 6ಕ್ಕೆ ವಿಜಯ ವಿಠಲ ಭಜನಾ ಮಂಡಳಿಯಿಂದ ಭಜನೆ, ಸಂಜೆ 7 ರಿಂದ ವಿದ್ವಾನ್ ಶ್ರೀ ಪಟ್ಟಾಭಿರಾಂ ಪಂಡಿತ್ ಮತ್ತು ವೃಂದದವರಿಂದ ಸಂಗೀತ, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ, 4ನೇ ಮೇನ್ 9ನೇ ಕ್ರಾಸ್.

■ **ಶ್ರೀ ರಾಮಮಂದಿರ, ಜಯನಗರ :** ಶ್ರೀ ರಾಮೋತ್ಸವ, ಕಾಶಿಯಾತ್ರ ಪೂರ್ವಕ ಸೀತಾ ಕಲ್ಯಾಣ, ಸಂಜೆ 6.30 ರಿಂದ ಕು. ಅರ್ಚನ ಮತ್ತು ಕು.ಅನುಷ ಅವರಿಂದ ಸ್ಯಾಕ್ಸೋಫೋನ್ ವಾದನ, ರಾತ್ರಿ 9 ಗಂಟೆಗೆ ಉಯ್ಯಾಲೋತ್ಸವ ಮತ್ತು ಶಯನೋತ್ಸವ, ಸ್ಥಳ: ಶ್ರೀರಾಮಮಂದಿರ, ಜಯನಗರ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** ಶ್ರೀ ರಾಮೋತ್ಸವ, ವಿದುಷಿ ಹೇರಂಬ ಮತ್ತು ವಿದ್ವಾನ್ ಹೇಮಂತ್ ಅವರಿಂದ ದ್ವಂದ್ವ ಕೊಳಲು ವಾದನ, ಕೇಶವ–ಪಿಟೀಲು, ಅರ್ಜುನ್‌ಕುಮಾರ್–ಮೃದಂಗ, ಜಿ.ಎಸ್.ರಾಮಾನುಜಂ–ಘಟಂ, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ' ಮೈಸೂರು ಸುತ್ತಲಿನ ಪ್ರಾಗಿತಿಹಾಸ ತಾಣಗಳ ಪರಿಚಯ–ಡಾ.ಎಸ್.ಜಿ.ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಟಿಎಸ್. ಸ್ನೇಹಾ ವ್ಯಾಖ್ಯಾನ– ಡಾ. ಬಿ.ವಿ.ವಸಂತಕುಮಾರ್, 7.15 ದುಡಿಮೆಯ ಹಿರಿಮೆ–ಪ್ರಾಯೋಜಿತ ಕಾರ್ಯಕ್ರಮ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ಭಾಗವಹಿಸುವ ತಜ್ಞರು–ಡಾ. ಸತೀಶ್ ರಾವ್ ಕೆ., 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಎನ್.ಆರ್.ಪ್ರಶಾಂತ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ.ರವೀಂದ್ರಕುಮಾರ್, 3.00 ಹೆಚ್.ಕೆ. ನರಸಿಂಹಮೂರ್ತಿ–ವಯೋಲಿನ್ ವಾದನ, 4.00 ಮಹಿಳಾರಂಗ–ಸಖೀಪದ, ಪ್ರಸ್ತುತಿ– ಕೆ.ಬಿ. ಮೀನಾ, 6.50 ಕೃಷಿರಂಗ–ಕಿಸಾನ್‌ವಾಣಿ, ಕೃಷಿ ಬದುಕಿನಲ್ಲಿ ಸಾರ್ಥಕತೆ ಕುರಿತು ವಿಜಯ್ ಅವರೊಡನೆ ಸಂದರ್ಶನ, 9.00 ರಸಮಂಜರಿ, ಸಂಸ್ಕೃತ ಸುಭಾಷಿತಗಳು, ಮಾತನಾಡುತ್ತಾರೆ ಬಿ.ಕೆ. ಸುಮಾ, ವೇದಾಂಗಗಳು, ಪರಿಚಯಿಸುತ್ತಾರೆ ಡಾ.ಅನಂತ ನಾಗೇಂದ್ರಭಟ್ಟ, 10.30 ಸವಿನೆನಪು

ಸಾಲು ಸಾಲು ರಜೆ: ಮೈಸೂರಿಗೆ ಪ್ರವಾಸಿಗರ ದಂಡು, ಹೋಟೆಲ್ ರೂಂಗಳು ಭರ್ತಿ



ಮೈಸೂರು, ಏ.14(ಆರ್‌ಕೆ)– ಕೋವಿಡ್ ಪರಿಸ್ಥಿತಿಯಿಂದ ನೆಲ ಕಚ್ಚಿದ್ದ ಪ್ರವಾಸೋದ್ಯಮವು ಇದೀಗ ಮೈಸೂರಲ್ಲಿ ಚೇತರಿಸಿಕೊಳ್ಳುತ್ತಿದೆ. ಅದರಲ್ಲೂ ಸಾಲು ಸಾಲು ರಜೆಗಳಿರುವುದು, ಶಾಲೆಗಳಿಗೆ ರಜೆ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದಿರುವುದರಿಂದ ಮೈಸೂರಿನತ್ತ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇಂದು ಡಾ.ಅಂಬೇಡ್ಕರ್ ದಿನಾಚರಣೆ, ನಾಳೆ (ಏ.15) ಶುಭ ಶುಕ್ರವಾರದ ರಜೆ ಇದ್ದು, ಶನಿವಾರ ಹೊರತುಪಡಿಸಿದರೆ ಮತ್ತೆ ಭಾನುವಾರ ರಜೆ ಇರುವ ಕಾರಣ ಬುಧವಾರ (ಏ.13)ರ ರಾತ್ರಿಯೇ ಪ್ರವಾಸಿಗರು ಮೈಸೂರು ತಲುಪಿ ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡಿದ್ದಾರೆ.

ಮೈಸೂರಿನಲ್ಲಿರುವ ಎಲ್ಲಾ ಹೋಟೆಲ್‌ಗಳಲ್ಲಿ ಕೊಠಡಿಗಳು ಭರ್ತಿಯಾಗಿದ್ದು, ತಿಂಡಿ–ಊಟದ ಹೋಟೆಲ್‌ಗಳಲ್ಲಿ ವ್ಯಾಪಾರ ವಹಿವಾಟು ಚೆನ್ನಾಗಿ ನಡೆಯುತ್ತಿದೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದಾರೆ.

ಅದೇ ರೀತಿ ಇಂದು ಅರಮನೆಗೂ ಸುಮಾರು 9ರಿಂದ 10 ಸಾವಿರ ಮಂದಿ ಪ್ರವಾಸಿಗರು ಭೇಟಿ ನೀಡಿದ್ದಾರೆ. ಭಾನುವಾರದವರೆಗೂ ಇದೇ ರೀತಿ ಪ್ರವಾಸಿಗರು ಬರಬಹುದೆಂದು ನಿರೀಕ್ಷಿಸಿದ್ದೇವೆ ಎಂದು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಅಲ್ಲದೆ, ಮೃಗಾಲಯ, ಕಾರಂಜಿ ಕೆರೆ ಉದ್ಯಾನವನ, ಚಾಮುಂಡಿ ಬೆಟ್ಟ, ಜಗನ್ಮೋಹನ ಅರಮನೆ, ನಂಜನಗೂಡು ಶ್ರೀ ನಂಜುಂಡೇಶ್ವರ ದೇವಸ್ಥಾನ, ಮಂಡ್ಯ ಜಿಲ್ಲೆಯ ಕೆಆರ್‌ಎಸ್, ರಂಗನತಿಟ್ಟು ಪಕ್ಷಿಧಾಮ, ಶ್ರೀರಂಗಪಟ್ಟಣದ ಪ್ರವಾಸಿ ತಾಣಗಳು, ದೇವಾಲಯ, ಕೆರೆತೊಣ್ಣೂರು, ಮೇಲುಕೋಟೆಗೂ ಪ್ರವಾಸಿಗರ ದಂಡೇ ಹರಿದು ಬರುತ್ತಿದ್ದು, ಪ್ರವಾಸೋದ್ಯಮ ಚಟುವಟಿಕೆ ಗರಿಗೆದರಿದೆ.

ಮೈಸೂರಿನ ಹೋಟೆಲ್, ಪ್ರವಾಸಿ ಟ್ಯಾಕ್ಸಿ, ಮಾರ್ಗದರ್ಶಿಗಳಿಗೆ ಭಾರೀ ಬೇಡಿಕೆ ಬಂದಿದ್ದು, ಕೊರೊನಾ ಸೋಂಕು ಕಾಣಿಸಿಕೊಳ್ಳುವ ಮೊದಲು ಎರಡು ವರ್ಷಗಳ ಹಿಂದೆ ಇದ್ದಂತಹ ಪರಿಸ್ಥಿತಿ ಇದೀಗ ಕಾಣಿಸಿಕೊಳ್ಳುತ್ತಿರುವುದರಿಂದ ಹೋಟೆಲ್ ಮಾಲೀಕರು, ಟ್ರಾವೆಲ್ ಏಜೆಂಟರುಗಳಷ್ಟೇ ಅಲ್ಲದೇ ಪ್ರವಾಸೋದ್ಯಮ ಅವಲಂಬಿಸಿರುವವರೆಲ್ಲರಲ್ಲೂ ಸಂತಸ ಮೂಡಿದೆ.

'ಕೆಜಿಎಫ್–2' ಭರ್ಜರಿ ಪ್ರದರ್ಶನ



ಮೈಸೂರು, ಏ.14(ಎಂಕೆ)– ರಾಕಿಂಗ್ ಸ್ಟಾರ್ ಯಶ್ ಅಭಿನಯದ 'ಕೆಜಿಎಫ್ ಚಾಪ್ಟರ್–2' ಚಿತ್ರಕ್ಕೆ ಮೈಸೂರಿನಲ್ಲಿ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿದೆ.

ವಿಶ್ವದಾದ್ಯಂತ ತೀವ್ರ ಹವಾ ಸೃಷ್ಟಿಸಿದ್ದ 'ಕೆಜಿಎಫ್ ಚಾಪ್ಟರ್–2' 10 ಸಾವಿರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದ್ದು, ದೇಶದಲ್ಲಿ 6 ಸಾವಿರ ಹಾಗೂ ರಾಜ್ಯದಲ್ಲಿ 550ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಮೊದಲ ದಿನ ಹೌಸ್‌ಫುಲ್ ಪ್ರದರ್ಶನ ಕಂಡಿದೆ. ಪ್ರಶಾಂತ್ ನೀಲ್ ನಿರ್ದೇಶನದಲ್ಲಿ ರಾಕಿಂಗ್ ಸ್ಟಾರ್ ಯಶ್, ಬಾಲಿವುಡ್ ನಟ ಸಂಜಯ್‌ದತ್, ನಟಿ ರವೀನಾ ಟಂಡನ್ ನಟನೆಯ ಚಿತ್ರಕ್ಕೆ ಅಭಿಮಾನಿಗಳಿಂದ ಭರ್ಜರಿ ರೆಸ್ಪಾನ್ಸ್ ದೊರೆತಿದೆ.

ಕೊರೊನಾ ನಂತರ ತೆರೆಕಂಡ ನಟ ಪುನೀತ್ ರಾಜ್‌ಕುಮಾರ್ ಅಭಿನಯದ 'ಜೇಮ್ಸ್' ಬಳಿಕ 5 ಭಾಷೆ ಹಾಗೂ 70 ದೇಶಗಳಲ್ಲಿ ತೆರೆಕಂಡ 'ಕೆಜಿಎಫ್ ಚಾಪ್ಟರ್–2', ಪ್ರದರ್ಶನಗೊಂಡ ಎಲ್ಲಾ ಚಿತ್ರಮಂದಿರಗಳಲ್ಲಿಯೂ ಹೌಸ್‌ಫುಲ್ ಆದ ಕನ್ನಡದ ಚಿತ್ರ ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಮೈಸೂರು ನಗರದಲ್ಲಿ ಸಂಗಮ್, ರಾಜ್‌ಕಮಲ್, ಸ್ಟರ್ಲಿಂಗ್, ಉಡ್‌ಲ್ಯಾಂಡ್ ಚಿತ್ರಮಂದಿರ ಹಾಗೂ ಡಿಆರ್‌ಸಿ ಸಿನಿಮಾಸ್, ಐನಾಕ್ಸ್ ಮೂವಿಸ್ ಮಲ್ಟಿಪ್ಲೆಕ್ಸ್‌ಗಳಲ್ಲಿಯೂ ಭರ್ತಿಯಾಗಿದ್ದವು.

ರಾರಾಜಿಸಿದ ಕಟೌಟ್‌ಗಳು: 'ಕೆಜಿಎಫ್ ಚಾಪ್ಟರ್–2' ಚಿತ್ರ ಬಿಡುಗಡೆಗೊಂಡ ಚಿತ್ರಮಂದಿರಗಳ ಎದುರು ನೆಚ್ಚಿನ ನಟ ರಾಕಿಂಗ್ ಸ್ಟಾರ್ ಯಶ್ ಕಟೌಟ್‌ಗಳು ರಾರಾಜಿಸಿದವು. ಚಿತ್ರಮಂದಿರಗಳ ಎದುರು ಕುಣಿದು ಕುಪ್ಪಳಿಸಿದ ಅಭಿಮಾನಿಗಳ ಯಶ್ ಕಟೌಟ್‌ಗೆ ಹಾಲಿನ ಅಭಿಷೇಕ ಮಾಡಿ ಸಂಭ್ರಮಿಸಿದರು. ಮೊದಲ ಶೋ ನೋಡಿ ಹೊರಬಂದ ಚಿತ್ರ ರಸಿಕರು ನೂರಕ್ಕೆ ನೂರು ಅಂಕ ನೀಡಿ ಯಶ್ ನಟನೆಯನ್ನು ಹಾಡಿ ಹೊಗಳಿದ್ದಾರೆ.

ಸಿಂಗಲ್ ಸ್ಕ್ರೀನ್ ಫುಲ್: ಕೊರೊನ ನಂತರ ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳು ಶೇ.100ರಷ್ಟು ಭರ್ತಿಯಾಗುತ್ತಿವೆ. 'ಜೇಮ್ಸ್' ಬಳಿಕ 'ಕೆಜಿಎಫ್ ಚಾಪ್ಟರ್–2' ನೋಡಲು ಜನ ಮುಗಿ ಬೀಳುತ್ತಿದ್ದಾರೆ. ಇಂದಿನಂತೆ ಮತ್ತು ನಾಳೆಯೂ ಹೌಸ್‌ಫುಲ್ ಆಗುವ ಸಾಧ್ಯತೆ ಹೆಚ್ಚಾಗಿದೆ. 'ಕೆಜಿಎಫ್ ಚಾಪ್ಟರ್–2' ಚಿತ್ರ ಕುರಿತು ಮಾಧ್ಯಮಗಳಲ್ಲಿ ಬರುವ ಪ್ರತಿಕ್ರಿಯೆ ಬಳಿಕ ಏನಾಗುತ್ತದೆ ಎಂಬುದನ್ನು ನೋಡಬೇಕಿದೆ ಎಂದು ಕರ್ನಾಟಕ ಚಲನಚಿತ್ರ ಪ್ರದರ್ಶಕರ ಮಹಾಮಂಡಲ್ ಉಪಾಧ್ಯಕ್ಷ ಎಂ.ಆರ್.ರಾಜಾರಾಂ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಡಿಆರ್‌ಸಿ ಸಿನಿಮಾಸ್‌ನ ವೈಶಾಲಿ ಮಾತನಾಡಿ, ನಮ್ಮಲ್ಲಿ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಟಿಕೆಟ್ ನೀಡುತ್ತಿದ್ದೇವೆ. 'ಕೆಜಿಎಫ್ ಚಾಪ್ಟರ್–2' ಚಿತ್ರ ಮೊದಲ ದಿನ 16 ಸ್ಕ್ರೀನ್‌ಗಳಲ್ಲಿ ಪ್ರದರ್ಶನವಾಗಿದ್ದು, ಹೌಸ್‌ಫುಲ್ ಆಗಿತ್ತು. ನಾಳೆ (ಏ.15) ಮತ್ತು ಏ.16ಕ್ಕೆ ಈಗಾಗಲೇ ಶೇ.80 ಟಿಕೆಟ್ ಬುಕಿಂಗ್ ಆಗಿದೆ. ನಾಳೆ(ಏ.15) 15 ಸ್ಕ್ರೀನ್‌ಗಳಲ್ಲಿ 'ಕೆಜಿಎಫ್ ಚಾಪ್ಟರ್–2' ಚಿತ್ರ ಪ್ರದರ್ಶನ ಇರಲಿದೆ. ಇಲ್ಲಿಯವರೆಗೆ 2 ಸಾವಿರ ಆನ್‌ಲೈನ್ ಹಾಗೂ ಆಫ್‌ಲೈನ್‌ನಲ್ಲಿ 3 ಸಾವಿರ ಟಿಕೆಟ್ ಬುಕಿಂಗ್ ಆಗಿವೆ ಎಂದು ಮಾಹಿತಿ ನೀಡಿದರು.

ಬಿಜೆಪಿ ಯುವ ಮೋರ್ಚಾದಿಂದ ಅಂಬೇಡ್ಕರ್ ಜಯಂತಿ ಆಚರಣೆ



ಮೈಸೂರು, ಏ.14(ಎಂಕೆ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿಯನ್ನು ಬಿಜೆಪಿ ನಗರ ಯುವ ಮೋರ್ಚಾ ವತಿಯಿಂದ ಆಚರಿಸಲಾಯಿತು. ನಗರದ ಚಿಕ್ಕಗಡಿಯಾರ ವೃತ್ತದಲ್ಲಿ ಸಿದ್ಧವಾಗಿದ್ದ ವೇದಿಕೆಯಲ್ಲಿ ಸುರಿಯುತ್ತಿದ್ದ ಜಡಿ ಮಳೆಯ ನಡುವೆಯೂ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಜೈಕಾರ ಘೋಷಣೆಗಳನ್ನು ಕೂಗಿದರಲ್ಲದೆ, ಅವರ ಸಾಧನೆಗಳನ್ನು ಸ್ಮರಿಸಿದರು.

ಈ ವೇಳೆ ಶಾಸಕ ಎಲ್.ನಾಗೇಂದ್ರ ಮಾತನಾಡಿ, ದೇಶದೆಲ್ಲೆಡೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿ ಆಚರಣೆ ಮಾಡಲಾಗುತ್ತಿದೆ. ಇವತ್ತು ನಾನು ಶಾಸಕನಾಗಿರುವುದಕ್ಕೆ ಅಂಬೇಡ್ಕರ್ ಕೊಟ್ಟ ಸಂವಿಧಾನ ಕಾರಣ. ಸಂವಿಧಾನದಡಿಯಲ್ಲಿ ನೀಡಿರುವ ಅವಕಾಶದಿಂದಾಗಿ ಆರ್ಥಿಕವಾಗಿ ಹಿಂದುಳಿದವರು ಸೇರಿದಂತೆ ರಾಷ್ಟ್ರದಲ್ಲಿ ಪ್ರತಿಯೊಬ್ಬರು ನೆಮ್ಮದಿಯಿಂದ ಬದುಕುವ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

ನಗರ ಪಾಲಿಕೆ ಸದಸ್ಯ ರಂಗಸ್ವಾಮಿ, ಬಿಜೆಪಿ ನಗರ ಯುವಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಉಪಾಧ್ಯಕ್ಷರಾದ ಕಾರ್ತಿಕ್ ಮರಿಯಪ್ಪ, ಸಚಿನ್, ಹರ್ಷವರ್ಧನ್, ಪುನೀತ್ ಗೌಡ, ಕಾರ್ಯದರ್ಶಿಗಳಾದ ಸಂತೋಷ್ ಕುಮಾರ್, ಧನರಾಜ್, ಯುವ ಮುಖಂಡರಾದ ಚೇತನ್ ಗೊರೂರು, ಮನು ಶೈವ, ಮಧುಕುಮಾರ್, ಸಚಿನ್ ಗೌಡ, ಹೇಮಂತ್‌ಗೌಡ, ರಮೇಶಣ್ಣ ಮತ್ತಿತರು ಉಪಸ್ಥಿತರಿದ್ದರು.

ಬ್ರಹ್ಮಸ್ಥಾನ ವಾರ್ಷಿಕ ಮಹೋತ್ಸವ

ಮೈಸೂರು, ಏ.14–ಮೈಸೂರಿನ ಮಾತಾ ಅಮೃತಾನಂದಮಯಿ ಮಠದಲ್ಲಿ ಬ್ರಹ್ಮಸ್ಥಾನ ವಾರ್ಷಿಕ ಮಹೋತ್ಸವ ಏ.17ರಂದು ನಡೆಯಲಿದ್ದು, ಅಂದು ಮಹಾಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಮಹಾ ಸುದರ್ಶನ ಹೋಮ, ಲಲಿತಾ ಸಹಸ್ರ ನಾಮ ಅರ್ಚನೆ ನಡೆಯಲಿದೆ.





ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.


-ಜಾಹೀರಾತು ವ್ಯವಸ್ಥಾಪಕರು

ರಿಟರ್ನಿಂಗ್ ಆಫೀಸರ್, ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು ರವರ ಕಾರ್ಯಾಲಯ


ಪತ್ರಿಕಾ ಪ್ರಕಟಣೆ

ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಚುನಾವಣೆಯನ್ನು ದಿನಾಂಕ: 01–05–2022 ರಂದು ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4–00 ಗಂಟೆಯವರೆಗೆ "ಸಾಂಸ್ಕೃತಿಕ ಭವನ ಮೈಸೂರು ಒನ್ ಕಛೇರಿ ಹತ್ತಿರ, 5ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ, ಡಾಕ್ಟರ್ ಕಾರ್ನರ್ ಹತ್ತಿರ, ಮೈಸೂರು" ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ನಾಮಪತ್ರಗಳನ್ನು ದಿನಾಂಕ: 17.04.2022 ರಿಂದ 23.04.2022 ರವರೆಗೆ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 02–00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು ಹಾಗೂ ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ: 24.04.2022 ರಂದು ಮಧ್ಯಾಹ್ನ 12–00 ಗಂಟೆಗೆ ನಡೆಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮೂಲಕ ಈಗಾಗಲೇ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯದರ್ಶಿಯವರನ್ನು / ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ಹೆಚ್.ಕೆ. ಸತೀಶ್), ರಿಟರ್ನಿಂಗ್ ಅಧಿಕಾರಿ
ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು









ಮೈಸೂರು ಮಿತ್ರ ಶುಕ್ರವಾರ 15 ಏಪ್ರಿಲ್ 2022

ಒಂದು ಧರ್ಮದ ಉಳಿವಿಗಾಗಿ ಮತ್ತೊಂದು ಧರ್ಮದ ನಾಶ, ಬೆಂಕಿ ಹಚ್ಚುವ ಕೆಲಸ

ಮಾಜಿ ಸಿಎಂ ಹೆಚ್‌ಡಿಕೆ ಕಿಡಿ



ಮಳವಳ್ಳಿ,ಏ.14(ಮೋಹನ್‌ರಾಜ್)– ಒಂದು ಧರ್ಮ ಉಳಿವಿಗಾಗಿ ಮತ್ತೊಂದು ಧರ್ಮವನ್ನು ನಾಶ ಮಾಡುವ ಹುನ್ನಾರದ ಮೂಲಕ ಸರ್ವಜನಾಂಗದ ಶಾಂತಿಯ ತೋಟಕ್ಕೆ ಬೆಂಕಿ ಹಚ್ಚಲು ಹೊರಟಿರುವ ವ್ಯಕ್ತಿಗಳ ವಿರುದ್ಧ ಜನತೆ ಎಚ್ಚರಗೊಳ್ಳಬೇಕಿದೆ ಎಂದು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಕನಕದಾಸ ಕ್ರೀಡಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ನಡೆದ 131ನೇ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಧಿಕಾರಕ್ಕಾಗಿ ಕ್ಷುಲ್ಲಕ ವಿಚಾರಗಳನ್ನು ಮುಂದಿಟ್ಟುಕೊಂಡು ದೇಶದಲ್ಲಿ ಅಶಾಂತಿ ಉಂಟು ಮಾಡಲು ಮುಂದಾಗಿದ್ದಾರೆ. ಮುಂದಿನ ದಿನಗಳಲ್ಲಿ ಪ್ರತಿಯೊಬ್ಬರು ಎಚ್ಚರಿಕೆ ವಹಿಸಿ ಅಂಬೇಡ್ಕರ್ ಕೊಟ್ಟಿರುವ ಸಂವಿಧಾನದ ಶಕ್ತಿಯನ್ನು ಬಳಸಿಕೊಂಡು ಸಮಾಜ ಹಾಳುಮಾಡುವ ವ್ಯಕ್ತಿಗಳನ್ನು ಬಹಿಷ್ಕರಿಸಬೇಕೆಂದು ಹೇಳಿದರು.

ಪ್ರತಿಯೊಂದು ವರ್ಗದ ಧ್ವನಿಯಾಗಿ ಸಂವಿಧಾನದಲ್ಲಿ ಶಕ್ತಿ ತುಂಬಿದ್ದಾರೆ, ಅಸ್ಪೃಶ್ಯತೆ ಹೋಗಲಾಡಿಸಬೇಕೆಂದು ಅವರು ಹೋರಾಟ ಮಾಡಿದ್ದರೂ ಕೂಡ, ಇಂದಿಗೂ ಅಸ್ಪೃಶ್ಯತೆ ಕಾಣುತ್ತಿದ್ದೇವೆ, ಪ್ರತಿಯೊಬ್ಬರು ಸಮಾನರೇ. ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ. ಇಂದು ಜಾತಿ ಹೆಸರಿನಲ್ಲಿ ನಾಯಕನನ್ನು ಬೆಳೆಸುವ ಪ್ರಯತ್ನಗಳು ನಡೆಯುತ್ತಿವೆ, ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗದೇ ಬಡತನದಲ್ಲಿಯೇ ಬದುಕುತ್ತಿರುವುದನ್ನು ಕಾಣುತ್ತಿದ್ದೇವೆಂದು ವಿಷಾದಿಸಿದರು.

ರಾಷ್ಟ್ರೀಯ ಪಕ್ಷಗಳ ಆಡಳಿತದಿಂದ ಬೇಸತ್ತಿರುವ ಜನರು ಸ್ಥಳೀಯ ಪ್ರಾದೇಶಿಕ ಪಕ್ಷದ ಕಡೆಗೆ ಮುಖ ಮಾಡಿದ್ದಾರೆ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವೂ 123 ಸ್ಥಾನಗಳನ್ನು ಗೆಲ್ಲುವುದರ ಮೂಲಕ ಸ್ವತಂತ್ರವಾಗಿ ಅಧಿಕಾರ ಹಿಡಿಯಲಿದೆ, ಒಂದು ಬಾರಿ ಸ್ವತಂತ್ರವಾಗಿ ಅಧಿಕಾರ ನಡೆಸಲು ಅವಕಾಶ ಮಾಡಿಕೊಡಿ, ಅಧಿಕಾರ ಸಿಕ್ಕರೆ ಉಚಿತವಾಗಿ ಆರೋಗ್ಯ, ಶಿಕ್ಷಣ, ಮನೆಗೊಂದು ಉದ್ಯೋಗ ನೀಡುತ್ತೇನೆಂದು ತಿಳಿಸಿದರು.

ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಎಚ್.ಡಿ.ದೇವೇಗೌಡರ ಅಧಿಕಾರವಧಿಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯವನ್ನು ನೀಡುವ ಮೂಲಕ ಸ್ಥಳೀಯ ಸಂಸ್ಥೆಗಳಲ್ಲಿ ಎಸ್ಸಿ, ಎಸ್ಟಿ ಸಮುದಾಯವರಿಗೆ ಅಧಿಕಾರವನ್ನು ನೀಡಿದ್ದರು. ಸಂವಿಧಾನದ ಆಶಯಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವ ಮೂಲಕ ಮಾದರಿ ಆಡಳಿತ ನೀಡಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷೆ ರಾಧಾ ನಾಗರಾಜು, ಉಪಾಧ್ಯಕ್ಷ ನಂದಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಪುಟ್ಟಸ್ವಾಮಿ, ತಹಸೀಲ್ದಾರ್ ವಿಜಯಣ್ಣ, ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ರವಿ ಕಂಸಾಗರ, ಕೆಎಂಎಫ್ ನಿರ್ದೇಶಕ ವಿ.ಎಂ.ವಿಶ್ವನಾಥ್, ಪುರಸಭೆ ಸದಸ್ಯರಾದ ಎಂ.ಟಿ. ಪ್ರಶಾಂತ್, ಬಸವರಾಜು, ನೂರುಲ್ಲಾ, ಸಿದ್ದರಾಜು, ಪ್ರಮೀಳಾ ಸೇರಿದಂತೆ ಇತರರು ಇದ್ದರು.

ಶ್ರೀರಂಗಪಟ್ಟಣದಲ್ಲಿ ಡಾ.ಅಂಬೇಡ್ಕರ್ ಜಯಂತಿ



ಶ್ರೀರಂಗಪಟ್ಟಣ,ಏ.14(ವಿನಯ್ ಕಾರೇಕುರ)–ತಾಲೂಕು ಆಡಳಿತದ ವತಿಯಿಂದ ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 131 ನೇ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಶಾಸಕ ರವೀಂದ್ರ ಶ್ರೀಕಂಠಯ್ಯ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಸಂವಿಧಾನ ಶಿಲ್ಪಿಗೆ ಗೌರವ ಸಮರ್ಪಿಸಿದರು.

ನಂತರ ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿರುವ ಸಂವಿಧಾನಕ್ಕೆ ವಿಶ್ವ ಮನ್ನಣೆಯಿದೆ. ಅವರು ರಚಿಸಿರುವ ಕಾನೂನು ಕೇವಲ ಒಂದು ವರ್ಗಕ್ಕೆ ಮೀಸಲಾಗದೆ, ಎಲ್ಲಾ ವರ್ಗದ ಜನರಿಗೂ ಸಮಾನ ಹಕ್ಕು ಹಾಗೂ ಸರ್ವರಿಗೂ ಸೌಲಭ್ಯಗಳು ಸಿಗುವಂತಾಗಿದೆ ಎಂದರು.

ಅಂಬೇಡ್ಕರ್ ಜಯಂತ್ಯೋತ್ಸವ ಕಾರ್ಯಕ್ರಮಕ್ಕೆ ಗೈರಾದ ಅಧಿಕಾರಿಗಳ ವಿರುದ್ಧ ಕೆಂಡಾಮಂಡಲರಾಗಿ ಅವರ ವಿರುದ್ಧ ಸಂಬಂಧಪಟ್ಟ ಸಚಿವರಿಗೆ ಪತ್ರ ಬರೆದು ಕ್ರಮ ಕೈಗೊಳ್ಳುವಂತೆ ಶಾಸಕ ರವೀಂದ್ರ ಶ್ರೀಕಂಠಯ್ಯ ಸೂಚಿಸಿದರು.

ಸಂವಿಧಾನ ಶಿಲ್ಪಿ ಬಗ್ಗೆ ಇಡೀ ವಿಶ್ವವೇ ಕೊಂಡಾಡುತ್ತಿದ್ದು, ಆದರೆ ತಾಲೂಕು ಮಟ್ಟದ ಅಧಿಕಾರಿಗಳು ಕಾರ್ಯಕ್ರಮಕ್ಕೆ ಗೈರಾಗುವ ಮೂಲಕ ಬಾಬಾ ಸಾಹೇಬರಿಗೆ ಅಪಮಾನ ಎಸಗಿದ್ದಾರೆ. ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಸರ್ಕಾರದ ಗಮನ ಸೆಳೆಯುತ್ತೇನೆ ಎಂದರು.

ಮುಖ್ಯ ಭಾಷಣಕಾರರಾಗಿ ವಿಚಾರವಾದಿ ರಘೋತ್ತಮ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ವೇತಾ ಎನ್. ರವೀಂದ್ರ, ತಾಪಂ ಇಒ ನಿಶಾಂತ್ ಕಿಲಾರ, ಬಿಇಒ ಅನಂತ ರಾಜು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿಜೆ ಶ್ರೀನಿವಾಸ್, ಪುರಸಭೆ ಮುಖ್ಯಾಧಿಕಾರಿ ಮಹದೇವಯ್ಯ, ಕಸಾಪ ತಾಲೂಕು ಅಧ್ಯಕ್ಷ ಮಂಜುನಾಥ್, ಸಿಪಿಐ ಪುನೀತ್, ಸಮಾಜ ಕಲ್ಯಾಣ ಇಲಾಖೆ ಗಾಯಿತ್ರಿ, ಪುರಸಭೆ ಸದಸ್ಯರಾದ ಕೃಷ್ಣಪ್ಪ, ಗಂಜಾಂ ಶಿವು, ಎಸ್.ಟಿ ರಾಜು, ಶ್ರೀನಿವಾಸ್, ಚೈತ್ರ, ವನಿತಾ, ಡಿಎಸ್‌ಎಸ್ ಮುಖಂಡ ಕುಬೇರಪ್ಪ, ಮಹದೇವಸ್ವಾಮಿ, ಕೆ.ಟಿ.ರಂಗಯ್ಯ ರವಿಚಂದ್ರ, ಸೇರಿದಂತೆ ಇತರ ದಲಿತ ಮುಖಂಡರು ಹಾಗೂ ವಿವಿಧ ಸಂಘಟನೆಯ ಪದಾಧಿಕಾರಿಗಳು, ಅಧಿಕಾರಿ ವರ್ಗ ಹಾಜರಿದ್ದರು.

ಮೈಸೂರು ವ್ಯಾಪಾರಿಗೆ ಸೇರಿದ 1.24 ಕೋಟಿ ಮೌಲ್ಯದ ಆಭರಣ ದರೋಡೆ

ಮಂಡ್ಯದ ಬಸರಾಳು ಬಳಿ ಕಾರು, ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳಿಂದ ಕಾರು ತಡೆದು ಇಬ್ಬರ ಮೇಲೆ ಹಲ್ಲೆ; ರಾಸಾಯನಿಕ ಸಿಂಪಡಿಸಿ ಪ್ರಜ್ಞೆ ತಪ್ಪಿಸಿ ಕೃತ್ಯ

ಮಂಡ್ಯ,ಏ.14– ಮಂಡ್ಯ ತಾಲೂಕಿನ ಗಂಟಗೌಡನಹಳ್ಳಿ ಬಳಿ ಚಿನ್ನದ ವ್ಯಾಪಾರಿಯನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು 1.24 ಕೋಟಿಗೂ ಹೆಚ್ಚು ಮೊತ್ತದ ಚಿನ್ನಾಭರಣ ದರೋಡೆ ಮಾಡಿರುವ ಘಟನೆ ಗುರುವಾರ ಸಂಜೆ ನಡೆದಿದೆ.

ಮಂಡ್ಯ, ಬಸರಾಳು, ಜಕ್ಕನಹಳ್ಳಿ, ಕೆರಗೋಡು ಭಾಗದ ಚಿನ್ನದ ಅಂಗಡಿಗಳಿಗೆ ಆಭರಣ ಪೂರೈಸಲು ಮೈಸೂರಿನ ರಿಷಬ್ ಜುವೆಲರ್ಸ್‌ವೊಂದರ ಮಾಲೀಕರು ಒಡಂಬಡಿಕೆ ಮಾಡಿಕೊಂಡಿದ್ದರು. ತಮ್ಮ ಸಿಬ್ಬಂದಿಯನ್ನು ಆಭರಣ ಪೂರೈಕೆಗಾಗಿ ಕಳುಹಿಸಿದ್ದರು.

ಜಕ್ಕನಹಳ್ಳಿ, ಬಸರಾಳು ಅಂಗಡಿಗಳಿಗೆ ಆಭರಣ ವಿತರಣೆ ಮಾಡಿ ಕೆರಗೋಡು ಅಂಗಡಿಗಳಿಗೆ ವಿತರಿಸಲು ಮಂಡ್ಯ ಬಸರಾಳು ರಸ್ತೆಯಲ್ಲಿ ಬರುತ್ತಿದ್ದರು. ಗಂಟಗೌಡನಹಳ್ಳಿ ಗೇಟ್ ಬಳಿ ಒಂದು ಕಾರ್‌ನಲ್ಲಿ ನಾಲ್ವರು, ಬೈಕ್‌ನಲ್ಲಿ ಇಬ್ಬರು ದುಷ್ಕರ್ಮಿಗಳು ಬಂದವರೇ ಕಾರು ಅಡ್ಡಗಟ್ಟಿದ್ದಾರೆ.

ಕಾರು ಗಾಜು ಒಡೆದ ದುಷ್ಕರ್ಮಿಗಳು, ಸಿಬ್ಬಂದಿಗೆ ರಾಡ್‌ನಿಂದ ತಲೆಗೆ ಬಲವಾಗಿ ಥಳಿಸಿದ್ದಾರೆ. ಅಲ್ಲದೆ ಹೊಟ್ಟೆಗೆ ಗುದ್ದಿ ಮುಖಕ್ಕೆ ರಾಸಾಯನಿಕ ಸಿಂಪಡಣೆ ಮಾಡಿ ಪ್ರಜ್ಞೆ ತಪ್ಪಿಸಿದ್ದಾರೆ. ನಂತರ ಕಾರ್‌ನಲ್ಲಿದ್ದ 1.24 ಕೋಟಿ ಮೌಲ್ಯದ ಆಭರಣದೊಂದಿಗೆ ಪರಾರಿಯಾಗಿದ್ದಾರೆ.

ಘಟನೆಯ ನಂತರ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ಡಿವೈಎಸ್ಪಿ ಮಂಜುನಾಥ್, ಎಎಸ್‌ಪಿ ವೇಣುಗೋಪಾಲ್, ಸರ್ಕಲ್ ಇನ್‌ಸ್ಪೆಕ್ಟರ್ ಕ್ಯಾತೇಗೌಡ, ಕೆರಗೋಡು ಪಿಎಸ್‌ಐ ರಮೇಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೆರಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮೀಣ ಭಾಗದ ಚಿನ್ನದ ಅಂಗಡಿಗಳಿಗೆ ಹಲವು ವರ್ಷಗಳಿಂದ ಮೂಗುತಿ, ಸಣ್ಣ ಸಣ್ಣ ಓಲೆ, ಉಂಗುರ ಮುಂತಾದ ಆಭರಣಗಳನ್ನು ಪೂರೈಕೆ ಮಾಡುತ್ತಿದ್ದರು. ಇದನ್ನು ನೋಡಿಕೊಂಡಿದ್ದ ದುಷ್ಕರ್ಮಿಗಳು ದರೋಡೆ ಮಾಡಿರಬಹುದು ಎಂದು ಶಂಕಿಸಲಾಗಿದೆ. ಗಾಯಾಳುಗಳು ಸದ್ಯ ಚಿಕಿತ್ಸೆ ಪಡೆಯುತ್ತಿದ್ದು ನಂತರ ಅವರನ್ನು ವಿಚಾರಣೆಗೆ ಒಳಪಡಿಸಲಾಗುವುದು. ಆರೋಪಿಗಳ ಪತ್ತೆಗೆ 2 ತಂಡ ರಚನೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

ಜಿಲ್ಲಾದ್ಯಂತ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸ್ಮರಣೆ

ಸಮಾನತೆಯ ಹರಿಕಾರ... ಸಂವಿಧಾನ ಶಿಲ್ಪಿ... ಭಾರತರತ್ನ... ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜನ್ಮದಿನವನ್ನು ಜಿಲ್ಲೆಯ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ಸೇರಿದಂತೆ ಎಲ್ಲೆಡೆ ಗುರುವಾರ ಸಂಭ್ರಮ–ಸಡಗರದಿಂದ ಆಚರಿಸಲಾಯಿತು.

ಬಾಬಾ ಸಾಹೇಬ್‌ರ ಪುತ್ಥಳಿಗೆ ಪುಷ್ಪ ನಮನ, ಅದ್ಧೂರಿ ಮೆರವಣಿಗೆ

ಚಾಮರಾಜನಗರ, ಏ.14– ನಗರದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಜಿಲ್ಲಾಡಳಿತ ಭವನ ಆವರಣದಲ್ಲಿರುವ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ, ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಪ್ರವಾಸಿ ಮಂದಿರದಲ್ಲಿ ಡಾ. ಅಂಬೇಡ್ಕರ್ ಅವರ ಭಾವಚಿತ್ರದ ಅದ್ಧೂರಿ ಮೆರವಣಿಗೆಗೂ ಅವರು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸಚಿವರು, ಸಂವಿಧಾನದ ಪಿತಾಮಹ ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತದ ಇತಿಹಾಸದಲ್ಲಿ ಅಪರೂಪದ ಅತ್ಯಂತ ಪ್ರಮುಖ ಮಹಾನ್ ವ್ಯಕ್ತಿ. ಅಂಬೇಡ್ಕರ್ ಅವರ ಬದುಕು ಎಲ್ಲರಿಗೂ ಸ್ಫೂರ್ತಿಯಾಗಿದೆ. ಅವರ ಆದರ್ಶ ಎಲ್ಲರ ಜೀವನಕ್ಕೆ ದಾರಿದೀಪ ಎಂದರು. ಅನುದಿನವೂ ನಮ್ಮನ್ನು ಜ್ಞಾಪಿಸುವ, ಎಚ್ಚರಿಸುವ, ಮುನ್ನಡೆಸುವ ಮತ್ತು ಮಾರ್ಗದರ್ಶನ ಮಾಡುವ ಒಂದು ಜೀವಂತ ದಾಖಲೆ ಎಂದರೆ ಅದು ಅಂಬೇಡ್ಕರ್ ರಚಿಸಿದ ಸಂವಿಧಾನ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಸಿ.ಎಸ್.ನಿರಂಜನ್‌ಕುಮಾರ್, ಕೇಂದ್ರ ಪರಿಹಾರ ಸಮಿತಿಯ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಬಿ.ಶಾಂತಮೂರ್ತಿ ಕುಲಗಾಣ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಎಸ್‌ಪಿ ಟಿ.ಪಿ.ಶಿವಕುಮಾರ್, ಎಡಿಸಿ ಎಸ್.ಕಾತ್ಯಾಯಿನಿ ದೇವಿ, ಎಎಸ್‌ಪಿ ಕೆ.ಎಸ್.ಸುಂದರರಾಜು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಹೆಚ್.ಸಿ.ಭಾಗೀರಥಿ, ಮುಖಂಡರು ಹಾಗೂ ಅಧಿಕಾರಿಗಳು ಇದ್ದರು.



ಸ್ವಾತಂತ್ರ್ಯ, ಸಮಾನತೆ, ಸಹೋದರತೆ ದೇಶದ ಅಭಿವೃದ್ಧಿಗೆ ದಿಕ್ಸೂಚಿ



ಚಾಮರಾಜನಗರ, ಏ.14– ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಅಡಕಗೊಳಿಸಿರುವ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಅಂಶಗಳು ದೇಶದ ಅಭಿವೃದ್ಧಿಯ ದಿಕ್ಸೂಚಿಯಾಗಿದೆ ಎಂದು ಬೆಂಗಳೂರು ಕ್ರೈಸ್ಟ್ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ.ಹ.ರಾ.ಮಹೇಶ್ ಅಭಿಪ್ರಾಯಪಟ್ಟರು.

ನಗರದ ಪೇಟೆ ಪ್ರೈಮರಿ ಶಾಲೆಯ ಆವರಣದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆ ವೇದಿಕೆ ಸಮಾರಂಭದಲ್ಲಿ ಮುಖ್ಯ ಭಾಷಣ ಮಾಡಿ ಅವರು ಮಾತನಾಡಿದರು.

ಸಂವಿಧಾನಶಿಲ್ಪಿ ಅಂಬೇಡ್ಕರ್ ಅವರು ಕೇವಲ ದಲಿತರ ಹಕ್ಕು, ಅವಕಾಶಗಳಿಗಾಗಿ ಮಾತ್ರ ಹೋರಾಟ ಮಾಡಿದವರಲ್ಲ. ತಮ್ಮ ವೈಯಕ್ತಿಕ ಬದುಕನ್ನು ಬದಿಗಿಟ್ಟು ಶೋಷಿತರು, ಹಿಂದುಳಿದ ವರ್ಗಗಳು, ಮಹಿಳೆಯರು ಸೇರಿದಂತೆ ದೇಶದ ಎಲ್ಲಾ ಸಮುದಾಯಗಳ ಸರ್ವಾಂಗೀಣ ಪ್ರಗತಿಗಾಗಿ ಹೋರಾಡಿದರು. ಅಂಬೇಡ್ಕರ್ ಅವರು ಜ್ಞಾನ, ವ್ಯಕ್ತಿತ್ವ, ರಾಜೀಯಾಗದ ಹೋರಾಟದ ಮೂಲಕ ಭಾರತಕ್ಕೆ ನೀಡಿದ ಸಂವಿಧಾನ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ವಹಿಸಿದ್ದರು. ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಕಾರ್ಯಕ್ರಮ ಉದ್ಘಾಟಿಸಿದರು. ಟಿ.ನರಸೀಪುರ ನಳಂದ ಬುದ್ಧ ವಿಹಾರದ ಪೂಜ್ಯ ಬೋಧಿರತ್ನ ಬಂತೇಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ಹಾಗೂ ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ಪ್ರೋತ್ಸಾಹ ಧನ ವಿತರಿಸಲಾಯಿತು. ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಬಿ. ಶಾಂತಮೂರ್ತಿ ಕುಲಗಾಣ, ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಪಂ ಮಾಜಿ ಸದಸ್ಯರಾದ ಕೆರೆಹಳ್ಳಿ ನವೀನ್, ಎ.ಆರ್. ಬಾಲರಾಜು ಇತರರು ಉಪಸ್ಥಿತರಿದ್ದರು.



ಹನೂರು ಪಟ್ಟಣದಲ್ಲಿ ಬಿಜೆಪಿ ಓಬಿಸಿ ಮೋರ್ಚಾದ ಜಿಲ್ಲಾ ಸಂಯೋಜಕ ವೆಂಕಟೇಶ್ ಅವರ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಹೋಳಿಗೆ, ಲಾಡು, ಪಾನಕ, ಮಜ್ಜಿಗೆ ವಿತರಣೆ



ಚಾಮರಾಜನಗರ,ಏ.14(ಎಸ್.ಎಸ್)– ನಗರದಲ್ಲಿ ಗುರುವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ಹೋಳಿಗೆ, ಲಾಡು, ಮಜ್ಜಿಗೆ ಹಾಗೂ ಪಾನಕವನ್ನು ವಿತರಣೆ ಮಾಡಿದರು.

ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಅಂಬೇಡ್ಕರ್ ಅವರ ಪ್ರತಿಮೆ ಮುಂಭಾಗ ನಾಗರಿಕರಿಗೆ ಹೋಳಿಗೆ ವಿತರಿಸಲಾಯಿತು. ಬಳಿಕ ಇಲ್ಲಿನ ಪ್ರವಾಸಿ ಮಂದಿರದಿಂದ ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ ಆರಂಭವಾಗುತ್ತಿದ್ದಂತೆಯೇ ಲಾಡು ವಿತರಿಸಲಾಯಿತು. ನಂತರ ನಗರಸಭೆ ಕಾರ್ಯಾಲಯ ಮುಂಭಾಗ ಮೆರವಣಿಗೆಯಲ್ಲಿ ಆಗಮಿಸುತ್ತಿದ್ದವರಿಗೆ ಮಜ್ಜಿಗೆ ಹಾಗೂ ಪಾನಕವನ್ನು ಮಲ್ಲೇಶ್ ವಿತರಿಸಿ ದಣಿವನ್ನು ನೀಗಿಸಿದರು.

ಹೃದಯವಂತರ ಬಳಗದಿಂದ ಸಂವಿಧಾನ ಶಿಲ್ಪಿಯ ಜನ್ಮ ದಿನಾಚರಣೆ

ಕೊಳ್ಳೇಗಾಲ: ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ಹೃದಯವಂತರ ಬಳಗದಿಂದ ಆಚರಿಸಲಾಯಿತು. ಕರ್ನಾಟಕ ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮಧುವನಹಳ್ಳಿ ಎಸ್.ಶಿವಕುಮಾರ್ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕಾರ್ಯಕ್ರಮ ಉದ್ಘಾಟಿಸಿದರು.



ಸಮಾರಂಭದಲ್ಲಿ ಹಿರಿಯ ವಕೀಲ ವೆಂಕಟಾಚಲ, ಹೃದಯವಂತರ ಬಳಗದ ಅಧ್ಯಕ್ಷ ನಿಂಪು ರಾಜೇಶ್, ಜಿಲ್ಲಾ ದಸಂಸ ಅಂಬೇಡ್ಕರ್ ವಾದದ ಜಿಲ್ಲಾ ಸಂಚಾಲಕ ದೊಡ್ಡಿಂದುವಾಡಿ ಸಿದ್ದರಾಜು, ಜಿಲ್ಲಾ ರೈತ ಮುಖಂಡ ಅಣಗಳ್ಳಿ ಬಸವರಾಜ್, ಜಿಪಂ ಕೊಳ್ಳೇಗಾಲ ವಿಭಾಗದ ಇಂಜಿನಿಯರ್‌ಗಳಾದ ಸಿದ್ದಪ್ಪಾಜಿಗೌಡ, ಮಹದೇವ ಮತ್ತು ಮುಖಂಡರಾದ ಕುಮಾರ್, ಸಿದ್ದರಾಜು, ಭಾಗ್ಯಮ್ಮ, ಆಕಾಶ್, ನಂದೀಶ್ ಇದ್ದರು.

ವೃದ್ಧೆ ಓಲೆ ಕಸಿದಿದ್ದ ಮಹಿಳೆ ಸೇರಿ ಇಬ್ಬರ ಬಂಧನ

ಮಡಿಕೇರಿ, ಏ.14– ವೃದ್ಧೆಯ ಕಿವಿಓಲೆ ಅಪಹರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿರಾಜಪೇಟೆ ನಗರ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ವಿರಾಜಪೇಟೆ ತಾಲೂಕು ಪಾರಾಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾವಲಿ ಕಿರುಂದಾಡು ನಿವಾಸಿ ಮಣಿ ಅಲಿಯಾಸ್ ಕುಟ್ಟಪ್ಪ(50) ಮತ್ತು ನಾಲ್ಕೇರಿ ಗ್ರಾಮದ ಲಕ್ಕುಂದ ಪೈಸಾರಿ ನಿವಾಸಿ ಗಾಯತ್ರಿ(45) ಬಂಧಿತ ಆರೋಪಿಗಳಾಗಿದ್ದು, ಇಬ್ಬರು ಆರೋಪಿಗಳು ಕೂಡ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಹಿನ್ನೆಲೆ: ವಿರಾಜಪೇಟೆ ಬೋಯಿಕೇರಿ ಗ್ರಾಮ ನಿವಾಸಿ ಕಾಂತರಾಜು ಮತ್ತು ರಾಜಮ್ಮ ದಂಪತಿ ಕೂಲಿ ಕಾರ್ಮಿಕರಾಗಿದ್ದು, ರಾಜಮ್ಮ(65) ಕ್ಯಾಂಟಿನ್ ಒಂದರಲ್ಲಿ ಕಾರ್ಮಿಕಳಾಗಿ ದುಡಿಯುತ್ತಿದ್ದರು. ಈ ಮಧ್ಯೆ ರಾಜಮ್ಮನಿಗೆ ಕುಟ್ಟಪ್ಪ ಎಂಬವನ ಪರಿಚಯವಾಗಿದೆ. ಮನೆಯೊಂದರಲ್ಲಿ ಶಾಶ್ವತವಾಗಿ ಕೆಲಸ ಕೊಡಿಸುವಂತೆ ರಾಜಮ್ಮ ಕುಟ್ಟಪ್ಪನ ಬಳಿ ವಿನಂತಿಸಿದ್ದು, ಕುಟ್ಟಪ್ಪ ಕೆಲಸ ಕೊಡಿಸುವುದಾಗಿ ಭರವಸೆ ನೀಡಿದ್ದ.

ಏ.5ರಂದು ವೃದ್ಧೆ ರಾಜಮ್ಮ ಅವರನ್ನು ಗಾಯತ್ರಿಯೊಂದಿಗೆ ಕುಟ್ಟಪ್ಪ ಆಟೋ ಒಂದರಲ್ಲಿ ನಗರದ ಹೊರ ವಲಯದ ಬೇಟೋಳಿ ಚಿಟ್ಟಡೆ ಗ್ರಾಮದ ಅಜ್ಞಾತ ಸ್ಥಳಕ್ಕೆ ಕರೆದುಕೊಂಡು ಹೋಗಿ ವೃದ್ಧೆಯ ಮೇಲೆ ಹಲ್ಲೆ ನಡೆಸಿ ವೇಲ್‌ನಿಂದ ಕತ್ತನ್ನು ಬಿಗಿದು ಕೊಲೆ ಮಾಡುವ ಪ್ರಯತ್ನ ನಡೆಸಿದ್ದಾರೆ. ಪ್ರಜ್ಞಾಹೀನಗೊಂಡ ವೃದ್ಧೆ ರಾಜಮ್ಮ ನೆಲಕ್ಕೆ ಕುಸಿದು ಬಿದ್ದಿದ್ದಾರೆ. ಈ ವೇಳೆ ರಾಜಮ್ಮ ಧರಿಸಿದ್ದ ಚಿನ್ನದ ಕಿವಿ ಓಲೆಯನ್ನು ಅಪಹರಿಸಿ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು.

ಪ್ರಜ್ಞೆ ಬಂದ ರಾಜಮ್ಮ ಘಟನೆ ನಡೆದ ಸ್ಥಳದಿಂದ ಸುಮಾರು 6 ಕಿ.ಮಿ. ಕಾಲ್ನಡಿಗೆಯಲ್ಲಿ ಬಂದು ಮನೆಗೆ ಸೇರಿದ್ದಾರೆ. ನಡೆದ ಘಟನೆಯನ್ನು ಪತಿ ಕಾಂತರಾಜು ಅವರಿಗೆ ವಿವರಿಸಿ, ಅದೇ ದಿನ ವಿರಾಜಪೇಟೆ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು ವಿರಾಜಪೇಟೆಯಲ್ಲಿ ಆರೋಪಿ ಕುಟ್ಟಪ್ಪನನ್ನು ಬಂಧಿಸಿದ್ದರು. ಆರೋಪಿ ಕುಟ್ಟಪ್ಪ ನೀಡಿದ ಮಾಹಿತಿಯಂತೆ ನಾಲ್ಕೇರಿ ಗ್ರಾಮದ ಲಕ್ಕುಂದ ಪೈಸಾರಿ ನಿವಾಸಿ ಗಾಯತ್ರಿ ಎಂಬ ಮಹಿಳಾ ಆರೋಪಿಯನ್ನು ಕೂಡ ಪೊಲೀಸರು ಬಂಧಿಸಿದ್ದು, ಮಾಲನ್ನು ವಶಕ್ಕೆ ಪಡೆಯಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಚೀರ ಎ.ಅಯ್ಯಪ್ಪ ಮಾರ್ಗದರ್ಶನದಲ್ಲಿ ವಿರಾಜಪೇಟೆ ಉಪವಿಭಾಗ ಪ್ರಭಾರ ಡಿವೈಎಸ್ಪಿ ಗಜೇಂದ್ರ ಪ್ರಸಾದ್ ನಿರ್ದೇಶನದ ಮೇರೆಗೆ ವಿರಾಜಪೇಟೆ ವೃತ್ತ ನಿರೀಕ್ಷಕ ಬಿ.ಎಸ್.ಶ್ರೀಧರ್ ನೇತೃತ್ವದಲ್ಲಿ ವಿರಾಜಪೇಟೆ ನಗರ ಠಾಣೆಯ ಠಾಣಾಧಿಕಾರಿ ಜಗದೀಶ್ ಧೂಳಶೆಟ್ಟಿ ಸಿಬ್ಬಂದಿಗಳಾದ ಎಸ್.ಟಿ.ಗಿರೀಶ್, ಆನಂದ್ ಡೊಳ್ಳಿ, ಮಧು, ಕಿರಣ್, ಮಹಿಳಾ ಸಿಬ್ಬಂದಿಗಳಾದ ಗೀತಾ, ವಾಣಿ ಹಾಗೂ ರಮೇಶ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಕೇರಳ ಲಾಟರಿ ಟಿಕೆಟ್ ಮಾರುತ್ತಿದ್ದವನ ಬಂಧನ

ಮಡಿಕೇರಿ, ಏ.14– ಕೇರಳದಿಂದ ಲಾಟರಿ ಟಿಕೆಟ್ ತಂದು ವಿರಾಜಪೇಟೆ ನಗರದಲ್ಲಿ ಮಾರಾಟ ಮಾಡುತಿದ್ದ ಕೇರಳ ಮೂಲದ ವ್ಯಕ್ತಿಯನ್ನು ವಿರಾಜಪೇಟೆ ನಗರ ಪೊಲೀಸರು ಬಂಧಿಸಿದ್ದಾರೆ. ಕೇರಳ ತಳಿಪರಂಬು ಕುಂಞಪರಂಬು ಗ್ರಾಮ ನಿವಾಸಿ ವಿಜು ಕುರಿಯಕೊಸ್(46) ಎಂಬಾತನೇ ಬಂಧಿತ ಆರೋಪಿಯಾಗಿದ್ದಾನೆ.

ವಿರಾಜಪೇಟೆ ನಗರದಲ್ಲಿ ವ್ಯಕ್ತಿಯೊಬ್ಬ ಅಕ್ರಮವಾಗಿ ಕೇರಳ ರಾಜ್ಯದ ಲಾಟರಿ ಮಾರಾಟ ಮಾಡುತ್ತಿರುವ ಬಗ್ಗೆ ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ಖಾಸಗಿ ಬಸ್ ನಿಲ್ದಾಣದ ಅಂಗಡಿಯೊಂದರ ಮೇಲೆ ದಾಳಿ ನಡೆಸಿ, ಆರೋಪಿಯನ್ನು ಲಾಟರಿ ಸಹಿತ ಬಂಧಿಸಿದ್ದಾರೆ. ಈ ವೇಳೆ ಕೇರಳ ರಾಜ್ಯದ 40 ರೂ. ಮುಖಬೆಲೆಯ 25 ವಿನ್‌ವಿನ್ ಲಾಟರಿ ಟಿಕೆಟ್‌ಗಳು ಹಾಗೂ 3,400 ರೂ. ನಗದನ್ನು ವಶಕ್ಕೆ ಪಡೆದಿದ್ದಾರೆ. ಬಂಧಿತ ಆರೋಪಿಯ ವಿರುದ್ಧ ಕರ್ನಾಟಕ ರಾಜ್ಯ ಲಾಟರಿ ನಿಷೇಧ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ವಿರಾಜಪೇಟೆ ವೃತ್ತ ನಿರೀಕ್ಷಕ ಬಿ.ಎಸ್.ಶ್ರೀಧರ್ ನೇತೃತ್ವದಲ್ಲಿ ವಿರಾಜಪೇಟೆ ನಗರ ಠಾಣೆಯ ಠಾಣಾಧಿಕಾರಿ ಜಗದೀಶ್ ಧೂಳಶೆಟ್ಟಿ ಸಿಬ್ಬಂದಿಗಳಾದ ಎಸ್.ಟಿ.ಗಿರೀಶ್, ಮಧು, ರಮೇಶ್ ಕಾರ್ಯಾಚರಣೆ ನಡೆಸಿದ್ದಾರೆ.

ಮಿನಿ ಬಸ್ ಪಲ್ಟಿ; ಸಣ್ಣಪುಟ್ಟ ಗಾಯ

ಮಡಿಕೇರಿ, ಏ.14– ಮಡಿಕೇರಿ ಕಡೆಗೆ ಬರುತ್ತಿದ್ದ ಪ್ರವಾಸಿ ಮಿನಿಬಸ್ ಒಂದು ರಸ್ತೆ ಮಧ್ಯೆ ಪಲ್ಟಿಯಾದ ಘಟನೆ ಬೊಯಿಕೇರಿ ಬಳಿ ನಡೆದಿದೆ. ಬಸ್‌ನಲ್ಲಿದ್ದ ಪ್ರವಾಸಿಗರು ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದಾರೆ. ಸಂಜೆ ವೇಳೆಗೆ ಮಡಿಕೇರಿ ಸುತ್ತಮುತ್ತ ಮಳೆ ಸುರಿಯಲಾರಂಭಿಸಿದ್ದು, ಈ ವೇಳೆ ಪ್ರವಾಸಿಗರನ್ನು ಹೊತ್ತ ಮಿನಿ ಬಸ್ ಒಂದು ಕುಶಾಲನಗರದಿಂದ ಮಡಿಕೇರಿ ಬರುತ್ತಿತ್ತು ಈ ವೇಳೆ ರಾಷ್ಟ್ರೀಯ ಹೆದ್ದಾರಿ 275ರ ಬೊಯಿಕೇರಿ ಬಳಿ ಬಸ್ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಮಧ್ಯೆ ಪಲ್ಟಿಯಾಗಿದೆ. ಬಸ್‌ನಲ್ಲಿದ್ದ ಪ್ರವಾಸಿಗರು ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದಾರೆ.

ಡಾ. ಅಂಬೇಡ್ಕರ್ ಆದರ್ಶ ಪ್ರತಿಯೊಬ್ಬರ ಜೀವನಕ್ಕೆ ದಾರಿದೀಪ

ಮಡಿಕೇರಿ, ಏ.14– ಸಂವಿಧಾನ ಶಿಲ್ಪಿ, ಭಾರತ ರತ್ನ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ರಾಷ್ಟ್ರದ ದೊಡ್ಡ ಶಕ್ತಿ, ಎಲ್ಲರೂ ಆರಾಧಿಸುವ ಜ್ಞಾನಿ. ಆ ನಿಟ್ಟಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಆದರ್ಶಗಳು ಪ್ರತಿಯೊಬ್ಬರ ಜೀವನಕ್ಕೆ ಮಾರ್ಗದರ್ಶಿ ಹಾಗೂ ದಾರಿದೀಪವಾಗಿದೆ ಎಂದು ಶಾಸಕರಾದ ಕೆ.ಜಿ.ಬೋಪಯ್ಯ ಮತ್ತು ಎಂ.ಪಿ.ಅಪ್ಪಚ್ಚು ರಂಜನ್ ಅವರು ಹೇಳಿದ್ದಾರೆ.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ಗುರುವಾರ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 131 ನೇ ಜನ್ಮ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಕೆ.ಜಿ.ಬೋಪಯ್ಯ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ವಿಶ್ವದಲ್ಲಿಯೇ ಮಾದರಿ ಹಾಗೂ ಅತ್ಯಂತ ಶ್ರೇಷ್ಠ ಸಂವಿಧಾನವನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡಿದ್ದಾರೆ. ಆ ನಿಟ್ಟಿನಲ್ಲಿ ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನ ಉಳಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂದು ಪ್ರತಿಪಾದಿಸಿದರು.

ಭಾರತದ ಸಂವಿಧಾನದ ಮೂಲಕ ಧ್ವನಿ ಇಲ್ಲದವರಿಗೆ ಧ್ವನಿಯಾಗಿದ್ದಾರೆ. ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿದ್ದಾರೆ. ಆ ನಿಟ್ಟಿನಲ್ಲಿ ವಿಶ್ವದಲ್ಲಿ 143 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನವನ್ನು ಆಚರಿಸಲಾಗುತ್ತಿದೆ ಎಂದರು.

ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಪಿ. ಅಪ್ಪಚ್ಚುರಂಜನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ವಿಶ್ವಕ್ಕೆ ಮಾದರಿಯಾದ ಸಂವಿಧಾನ ನೀಡಿದ್ದಾರೆ. 18 ವರ್ಷ ಪೂರ್ಣಗೊಂಡ ಭಾರತೀಯ ಎಲ್ಲಾ ಪ್ರಜೆಗಳಿಗೂ ಮತದಾನ ಹಕ್ಕು ನೀಡುವ ಮೂಲಕ ಸಮಾನ ಅವಕಾಶ ಕಲ್ಪಿಸಿದ್ದಾರೆ ಎಂದರು. ವಿಧಾನಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ ಮಾತನಾಡಿ, ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳು, ಬರಹಗಳನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡಬೇಕು. ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನದ ಆಶಯವನ್ನು ತಿಳಿದುಕೊಳ್ಳುವಂತಾಗಬೇಕು ಎಂದರು.

ವಿರಾಜಪೇಟೆ ಸೆಂಟ್ ಆನ್ಸ್ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಎಚ್.ಆರ್.ಅರ್ಜುನ್ ಅವರು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಕಾವ್ಯ, ಕಥೆ, ಕವಿತೆಯಲ್ಲ, ಹಾಗೆಯೇ ಕಾಲ್ಪನಿಕ ದೃಷ್ಟಿಕೋನದಿಂದ ನೋಡುವುದಲ್ಲ, ಅವರೊಬ್ಬ ಜ್ಞಾನಿ, ವಾಸ್ತವದ ಪ್ರತಿನಿಧಿ ಹಾಗೂ ಆಧುನಿಕ ಭಾರತದ ಪಿತಾಮಹ ಎಂದು ಪ್ರತಿಪಾದಿಸಿದರು. ವಿದ್ಯಾರ್ಥಿನಿ ಶ್ರೀಶಾ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಪ್ರೀತಿಸುವುದಕ್ಕೆ ಮತ್ತು ಗೌರವಿಸುವುದಕ್ಕೆ ಒಂದಲ್ಲ ಒಂದು ಕಾರಣಗಳಿವೆ. ಈ ದೇಶದ ಕಾನೂನು ಸಚಿವರಾಗಿ, ಸಂವಿಧಾನ ಶಿಲ್ಪಿಯಾಗಿ ಅವರು ದೇಶಕ್ಕೆ ನೀಡಿದ ಕೊಡುಗೆ ಅಪಾರ. ಸ್ವಾತಂತ್ರ್ಯ ಪೂರ್ವದಲ್ಲಿ ಅತಿ ಹೆಚ್ಚಿನ ಶಿಕ್ಷಣ ಪಡೆದವರು ಅಂಬೇಡ್ಕರ್ ಆಗಿದ್ದಾರೆ. ಅಮೇರಿಕಾದಲ್ಲಿ ಪಿಹೆಚ್‌ಡಿ ಪದವಿ ಪಡೆದ ಮೊದಲ ಭಾರತೀಯ ಕೂಡ ಅಂಬೇಡ್ಕರ್ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಅಂತರ್‌ಜಾತಿ ವಿವಾಹಿತರಿಗೆ ಪ್ರೋತ್ಸಾಹ ಧನ ವಿತರಿಸಲಾಯಿತು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು, ಕೋವಿಡ್ ಸಂದರ್ಭದಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿದ ಶುಶ್ರೂಷಕರು ಹಾಗೂ ಪೌರಕಾರ್ಮಿಕರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.

ನಗರಸಭಾ ಅಧ್ಯಕ್ಷರಾದ ಅನಿತಾ ಪೂವಯ್ಯ, ಉಪಾಧ್ಯಕ್ಷರಾದ ಸವಿತಾ ರಾಕೇಶ್, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಜಿಪಂ ಸಿಇಒ ಭಂವರ್‌ಸಿಂಗ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ತಹಸೀಲ್ದಾರ್ ಪಿ.ಎಸ್. ಮಹೇಶ್, ಪೌರಾಯುಕ್ತರಾದ ರಾಮದಾಸ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ್, ನಾನಾ ಇಲಾಖೆ ಅಧಿಕಾರಿಗಳು ಇದ್ದರು.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಒಳಗೊಂಡ ಸ್ತಬ್ಧಚಿತ್ರ ಮೆರವಣಿಗೆಗೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಹಾಗೂ ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ ಅವರು ಚಾಲನೆ ನೀಡಿದರು.

ಎರಡ್ಮೂರು ತಿಂಗಳಲ್ಲಿ ಮೈಸೂರು ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣ

● ಇದಕ್ಕಾಗಿ ಹೆಚ್ಚುವರಿ 17 ಕೋಟಿ ರೂ. ಅನುದಾನ ● ಮೈಸೂರು ಉಸ್ತುವಾರಿ ಸಚಿವ ಸೋಮಶೇಖರ್ ಭರವಸೆ

ಮೈಸೂರು, ಏ.14(ಎಂಟಿವೈ)– ಮೈಸೂರಲ್ಲಿ ನಿರ್ಮಿಸಲಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿಗೆ ರಾಜ್ಯ ಸರ್ಕಾರ ಮತ್ತೆ 17 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದು, ಮುಂದಿನ 2–3 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಂಡು ರಾಜ್ಯದ ನಂ. 1 ಸಮುದಾಯ ಭವನದ ಕೀರ್ತಿಗೆ ಪಾತ್ರವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮೈಸೂರು ಮಹಾನಗರ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಡಾ.ಅಂಬೇಡ್ಕರ್ ಭವನದ ಕಾಮಗಾರಿಗೆ ಇದುವರೆಗೂ 44 ಕೋಟಿ ರೂ. ವೆಚ್ಚ ಮಾಡಲಾಗಿದೆ. ಆದರೂ ಭವನದ ಕಾಮಗಾರಿ ಪೂರ್ಣಗೊಂಡಿಲ್ಲ. ಬಾಕಿ ಕಾಮಗಾರಿಗೆ ಮತ್ತೆ 17 ಕೋಟಿ ರೂ.ಬಿಡುಗಡೆಗೆ ಸಚಿವ ಸಂಪುಟದಲ್ಲಿ ಒಪ್ಪಿಗೆ ದೊರೆತಿದೆ. ಮುಂದಿನ 2–3 ತಿಂಗಳಲ್ಲಿ ಕಾಮಗಾರಿ ಪೂರ್ಣಗಳಿಸಲು ಉದ್ದೇಶಿಸಲಾಗಿದೆ. ಒಂದು ವೇಳೆ ಈ ಅನುದಾನವೂ ಸಾಕಾಗದಿದ್ದರೆ ಹೆಚ್ಚುವರಿ ಹಣ ನೀಡಿ, ಕಾಮಗಾರಿ ಮುಗಿಸಲು ಮುಡಾದವರಿಗೆ ಸೂಚಿಸಲಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ಮೈಸೂರಿನ ಅಂಬೇಡ್ಕರ್ ಭವನ ರಾಜ್ಯದ ನಂಬರ್ 1 ಭವನವಾಗಲಿದೆ ಎಂದರು.

ಕಳೆದ ಎರಡು ವರ್ಷಗಳಿಂದ ಕೋವಿಡ್ ಹಿನ್ನೆಲೆಯಲ್ಲಿ ಡಾ. ಅಂಬೇಡ್ಕರ್ ಜಯಂತಿಯನ್ನು ಸರಳವಾಗಿ ಆಚರಿಸಲಾಗಿತ್ತು. ಅದರೆ, ಈಗ ಕೊರೊನಾ ಸೋಂಕು ಸಂಪೂರ್ಣವಾಗಿ ನಿಯಂತ್ರಣಕ್ಕೆ ಬಂದಿರುವುದರಿಂದ ರಾಜ್ಯಾದ್ಯಂತ ಅಂಬೇಡ್ಕರ್ ಜಯಂತಿಯನ್ನು ಅದ್ಧೂರಿಯಾಗಿ ನಡೆಸಲು ಸರ್ಕಾರ ನಿರ್ಧರಿಸಿತ್ತು. ಈ ಹಿನ್ನೆಲೆಯಲ್ಲಿ ಎಲ್ಲೆಡೆ ಈ ಬಾರಿ ಅದ್ಧೂರಿಯಾಗಿ ಕಾರ್ಯಕ್ರಮ ಆಚರಿಸಲಾಗುತ್ತಿದೆ.

ಹಿತ ಕಾಯಲು ಬದ್ಧ: ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಹಿತ ಕಾಯಲು ಬದ್ಧವಾಗಿದೆ. ಇದಕ್ಕಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಶೋಷಿತ ಸಮುದಾಯದ ಏಳಿಗೆಗೆ ಶ್ರಮಿಸುತ್ತಿದೆ. ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಮೀಸಲಿಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ನವೋದ್ಯಮಕ್ಕೆ 50 ಲಕ್ಷ ರೂ. ಸಹಾಯಧನ ನೀಡುವ ಯೋಜನೆಯನ್ನು ಶೀಘ್ರ ಜಾರಿಗೊಳಿಸಲು



ಸರ್ಕಾರ ನಿರ್ಧರಿಸಿದೆ. ಭೂ ಒಡೆತನ ಯೋಜನೆಯಡಿ ನೀಡಲಾಗುತ್ತಿದ್ದ 15 ಲಕ್ಷ ರೂ. ಧನ ಸಹಾಯವನ್ನು 20 ಲಕ್ಷ ರೂ.ಗೆ ಹೆಚ್ಚಳ ಮಾಡಲಾಗಿದೆ. ಸ್ವಯಂ ಉದ್ಯೋಗ ಸ್ಥಾಪಿಸಲು ಮುಂದಾಗುವವರಿಗೆ ಪ್ರತಿ ತಾಲೂಕಿನಲ್ಲಿ ಬಾಬು ಜಗಜೀವನ್ ರಾಂ ಸ್ವಯಂ ಉದ್ಯೋಗ ಯೋಜನೆ ಜಾರಿಗೆ ತರಲಾಗುತ್ತಿದೆ. 8 ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಮಾರ್ಗದರ್ಶಿನಿಯದ ಮೂಲಕ ವಿಶೇಷ ತರಬೇತಿ ನೀಡುವ ವಿಶೇಷ ಕಾರ್ಯಕ್ರಮ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಈ ವರ್ಷದಿಂದಲೇ ವಸತಿ ಶಾಲೆಗಳಲ್ಲಿ ವಿಶೇಷ ತುರ್ತಿ ಯೋಜನೆಗೆ ಚಾಲನೆ ನೀಡಲಾಗಿದೆ ಎಂದು ವಿವರಿಸಿದರು.

ವಿಶ್ವ ಕಂಡ ಉತ್ತಮ ಆರ್ಥಿಕ ತಜ್ಞ: ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ವಿಶ್ವ ಕಂಡ ಅಪ್ರತಿಮ ಆರ್ಥಿಕ ತಜ್ಞರೂ ಆಗಿದ್ದರು. ದೇಶದ ಅರ್ಥ ವ್ಯವಸ್ಥೆ ಸರಿಯಾಗಿದ್ದರೆ, ಅಭಿವೃದ್ಧಿಯೂ ಚೆನ್ನಾಗಿರುತ್ತದೆ. ದೇಶದ ಅರ್ಥ ವ್ಯವಸ್ಥೆಗೆ ಅವರು ಭದ್ರ ಬುನಾದಿ ಹಾಕಿಕೊಟ್ಟಿದ್ದರಿಂದಲೇ ಇಂದು ಭಾರತ ಸದೃಢ ದೇಶ ಎನಿಸಿದೆ. ನೆರೆ ರಾಷ್ಟ್ರಗಳಾದ ಪಾಕಿಸ್ತಾನ, ಶ್ರೀಲಂಕಾ ಸೇರಿದಂತೆ ಇನ್ನಿತರ ರಾಷ್ಟ್ರಗಳಲ್ಲಿನ ದುಸ್ಥಿತಿ ನಮ್ಮಲ್ಲೂ ನಿರ್ಮಾಣವಾಗುತ್ತಿತ್ತು ಎಂದು ವಿಷಾದಿಸಿದ ಅವರು, ಅಂಬೇಡ್ಕರ್ ಉತ್ತಮ ಅರ್ಥಶಾಸ್ತ್ರಜ್ಞರಾಗಿದ್ದರಿಂದಲೇ ಅವರನ್ನು ಪ್ರೀತಿಸುವ ವರ್ಗವೊಂದು ಇದೆ. ಇಂದು ಭಾರತ ವಿಶ್ವ ಗುರು ಎನಿಸಿಕೊಳ್ಳಲು ಅಂಬೇಡ್ಕರ್ ನೀಡಿದ ಕೊಡುಗೆಯೇ ಕಾರಣ ಎಂದು ಬಣ್ಣಿಸಿದರು. ಚುನಾವಣೆ ಬಂದಾಗ ಎಲ್ಲರೂ ಅಂಬೇಡ್ಕರ್ ಅವರ ಫೋಟೋ ಇಟ್ಟುಕೊಂಡು ಮತ ಕೇಳುತ್ತಿದ್ದಾರೆ. 150 ವರ್ಷಗಳ ಇತಿಹಾಸವಿರುವ ಪಕ್ಷವು ಮಹಾರಾಷ್ಟ್ರದಲ್ಲಿ ಅಂಬೇಡ್ಕರ್ ವಿರುದ್ಧ ಮೇಲ್ವರ್ಗದ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಸೋಲಿಸುತ್ತಾರೆ. ಹಿಂದೂ ಕೋಡ್ ಬಿಲ್ ಮಸೂದೆ ಮಂಡಿಸಿದಾಗ ಬೆಂಬಲ ಸಿಗದೆ ರಾಜೀನಾಮೆ ಕೊಡುವಂತಹ ಪರಿಸ್ಥಿತಿಗೆ ತರಲಾಯಿತು.

ಮತ ಬ್ಯಾಂಕ್ ರಾಜಕಾರಣಕ್ಕಾಗಿ ನಾಯಕರನ್ನು ಸಮುದಾಯದವರಂತೆ ಸಂಕುಚಿತ ಮನೋಭಾವದಿಂದ ನೋಡಿದ್ದೇವೆ. ದಾರ್ಶನಿಕರು, ಮಹನೀಯರನ್ನು ಒಂದು ಜಾತಿಗೆ ಸೀಮಿತಗೊಳಿಸದೆ ಎಲ್ಲರೂ ಸೇರಿ ಜಯಂತಿ ಆಚರಣೆ ಮಾಡಬೇಕು. ಅಬ್ರಾಹಂ ಲಿಂಕನ್ ಮತ್ತು ಅಂಬೇಡ್ಕರ್ ಧ್ರುವತಾರೆಗಳು. ಅಂಬೇಡ್ಕರ್ ಅವರಿಗೆ ದೇಶದ ಪ್ರಧಾನಿಯಾಗುವ ಎಲ್ಲ ಅರ್ಹತೆಗಳಿತ್ತು. ಅದು ಸಾಧ್ಯವಾಗಿದ್ದರೆ ದೇಶ ವಿಶ್ವಗುರುವಾಗುತ್ತಿತ್ತು. ಎಲ್ಲ ಪಕ್ಷಗಳು ಒಮ್ಮತದಿಂದ ಗೆಲ್ಲಿಸಬೇಕಾದ ಅವರನ್ನು ಅಂದು ಸೋಲಿಸಲಾಯಿತು. ಪ್ರಧಾನಿ ನರೇಂದ್ರ ಮೋದಿ ಅವರು ಅಂಬೇಡ್ಕರ್ ಅವರ 5 ಶಕ್ತಿ ಕೇಂದ್ರಗಳನ್ನು ಗುರುತಿಸಿ ಅಭಿವೃದ್ಧಿ ಮಾಡಿದರು. ನಾವೆಲ್ಲರೂ ಅವರ ಆದರ್ಶಗಳನ್ನು ಪಾಲನೆ ಮಾಡಬೇಕು ಎಂದು ಹೇಳಿದರು.

ಶಾಸಕ ಎಲ್. ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಜೆಎಲ್‌ಆರ್ ಅಧ್ಯಕ್ಷ ಎಂ.ಅಪ್ಪಣ್ಣ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಕಾಡಾ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪ ಗೌಡ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಎಸ್ಪಿ ಆರ್.ಚೇತನ್, ಜಿ.ಪಂ ಸಿಇಓ ಬಿ.ಆರ್. ಪೂರ್ಣಿಮಾ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಮಾಲತಿ ಹಾಜರಿದ್ದರು. ಒಂಬತ್ತು ಚಿನ್ನದ ಪದಕ ಪಡೆದ ತೇಜಸ್ವಿನಿ, ಮೂರು ಚಿನ್ನದ ಪದಕ ಪಡೆದ ಪಲ್ಲವಿ ಅವರನ್ನು ಅಭಿನಂದಿಸಲಾಯಿತು.

ಇಂದಿನ ಪೀಳಿಗೆ ಡಾ.ಅಂಬೇಡ್ಕರ್ ಬದುಕು, ಬರಹ, ಭಾಷಣ ಓದುವುದು ಅಗತ್ಯ

ಮೈಸೂರು ವಿವಿ ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ಅಂಬೇಡ್ಕರ್ ಜಯಂತಿಗೆ ಚಾಲನೆ ನೀಡಿದ ಕುಲಪತಿ ಪ್ರೊ.ಜಿ.ಹೇಮಂತಕುಮಾರ್

ಮೈಸೂರು, ಏ.14(ಆರ್‌ಕೆಬಿ)– ಇಂದಿನ ಪೀಳಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬದುಕು, ಬರಹ ಮತ್ತು ಭಾಷಣಗಳನ್ನು ಓದುವುದು ಅಗತ್ಯ ಎಂದು ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ತಿಳಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕದ ಜಂಟಿ ಆಶ್ರಯದಲ್ಲಿ ಮಾನಸ ಗಂಗೋತ್ರಿ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ವರ್ಷದ ಜಯಂತಿ ಆಚರಣೆ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ನಾವು ಪ್ರಜಾಪ್ರಭುತ್ವದ ಮೌಲ್ಯಗಳ ಆಚರಣೆಯಲ್ಲಿ ಎತ್ತ ಸಾಗುತ್ತಿದ್ದೇವೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸುವ ಅಗತ್ಯವಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಪಮೌಲ್ಯಗೊಳಿಸುವ ದುಷ್ಟಶಕ್ತಿಗಳು ಒಳಗಿರಲಿ ಅಥವಾ ಹೊರಗಿರಲಿ ಅವುಗಳಿಗೆ ಸಂವಿಧಾನಾತ್ಮಕವಾದ ಉತ್ತರವನ್ನು ಪ್ರಜಾಸತ್ತಾತ್ಮಕವಾಗಿ ನೀಡುತ್ತದೆ ಎಂಬುದನ್ನು ಅಂಬೇಡ್ಕರ್ ವಾದಿಗಳು ಆಗಿಂದಾಗ್ಗೆ ನಿರೂಪಿಸಿದ್ದಾರೆ. ಭೀಮವಾದಕ್ಕೆ ಆ ಧೈರ್ಯ ಮತ್ತು ಶಕ್ತಿ ಎರಡೂ ಇದೆ ಎಂದು ಹೇಳಿದರು.

ಮನುಕುಲಕ್ಕೆ ಸ್ವಾಭಿಮಾನ, ಆತ್ಮಗೌರವ, ಆಧುನಿಕ ಜೀವನಕ್ಕೆ ಗಟ್ಟಿಯಾದ ನೆಲೆಯನ್ನು ನಿರ್ಮಾಣ ಮಾಡಿದ ಮಹಾನಾಯಕ ಡಾ.ಅಂಬೇಡ್ಕರ್ ಅವರು, ಭಾರತಕ್ಕೆ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಕಟ್ಟಿಕೊಟ್ಟ ಸಂವಿಧಾನದ ನಿರ್ಮಾತೃ, ಅಕ್ಷರ ಜ್ಞಾನವಿಲ್ಲದ ಸಮುದಾಯದಿಂದ ಬಂದ ಅಂಬೇಡ್ಕರ್ ಭಾರತೀಯರಿಗೆ ಸ್ವಾತಂತ್ರ್ಯ, ಸಮಾನತೆ, ಸೋದರತ್ವ ನೀಡಿದ ಮಹಾಸುಧಾರಕ. ಶಿಕ್ಷಣವನ್ನು ಹಠವಾಗಿ ಸ್ವೀಕರಿಸಿ, ಸಾಮಾಜಿಕ ಸವಾಲುಗಳನ್ನ ಎದುರಿಸಿ, ಎದೆಗುಂದದೆ ಅಕ್ಷರದ ಹಸಿವನ್ನು ಕೊನೆಯ ಉಸಿರು ಇರುವವರೆಗೂ ಇಂಗಿಸಿಕೊಂಡ ಏಕೈಕ ಅಕ್ಷರ ಪ್ರೇಮಿ. ಅಕ್ಷರ ಲೋಕಕ್ಕೆ ಅವರು ನೀಡಿರುವ ಕೊಡುಗೆ ವಿಶ್ವ ವಿದ್ಯಾನಿಲಯಗಳಿಗಿಂತಲೂ ಅಧಿಕವಾದ್ದು ಎಂದು ಬಣ್ಣಿಸಿದರು.

ಹಿರಿಯ ನ್ಯಾಯವಾದಿ, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕನಾಥ್ ಅವರು 'ಪ್ರಸ್ತುತ ಸಂದರ್ಭ: ಡಾ.ಬಿ.ಆರ್.ಅಂಬೇಡ್ಕರ್' ಕುರಿತ ವಿಶೇಷ ಉಪನ್ಯಾಸ ನೀಡಿದರು.

> ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಬಾಬಾ ಸಾಹೇಬರ ಆಶಯದ ಪ್ರತಿಫಲದಂತೆ ಕಾಣುತ್ತದೆ. ಈ ಸಮುದಾಯಗಳ ಸಂಶೋಧಕರೆಲ್ಲರಿಗೂ ಮೈಸೂರು ವಿವಿ ವತಿಯಿಂದ 2021–22ನೇ ಸಾಲಿನಿಂದ ಶಿಷ್ಯ ವೇತನ ನೀಡಿರುವುದು ಅಂಬೇಡ್ಕರ್ ಅವರ ಆಶಯದಂತೆ ನಡೆದಿರುವುದಕ್ಕೆ ವೈಯಕ್ತಿಕವಾಗಿ ನನಗೆ ಸಂತೋಷವಾಗಿದೆ.
>
> **- ಪ್ರೊ.ಜಿ.ಹೇಮಂತಕುಮಾರ್,**
> ಕುಲಪತಿ, ಮೈಸೂರು ವಿವಿ

ಇದೇ ವೇಳೆ ಪಿಎಚ್‌ಡಿ ಪದವೀಧರರು, ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದವರನ್ನು ಅಭಿನಂದಿಸಲಾಯಿತು. ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ (ಪರೀಕ್ಷಾಂಗ) ಪ್ರೊ.ಎ.ಪಿ.ಜ್ಞಾನಪ್ರಕಾಶ್, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಉಪಕುಲಸಚಿವ ಪ್ರೊ.ಎಸ್.ಮಹದೇವಮೂರ್ತಿ, ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರಕುಮಾರ್ ಉಪಸ್ಥಿತರಿದ್ದರು.

ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಅಂಬೇಡ್ಕರ್ ಕನಸು ನನಸಾಗಿಲ್ಲ

ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ವಿಷಾದ



ಮೈಸೂರು, ಏ.14(ಎಂಟಿವೈ)– ಎರಡನೇ ದರ್ಜೆಯ ಪ್ರಜೆಗಳಾಗಿ ನೋಡುತ್ತಿದ್ದ ಮಹಿಳೆಯರಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ರಾಜಕೀಯದಲ್ಲಿ ಶೇ.50ರಷ್ಟು ಮೀಸಲಾತಿ ಕಲ್ಪಿಸುವಲ್ಲಿ ಸರ್ಕಾರಗಳು ಮೀನಾಮೇಷ ಎಣಿಸುತ್ತಿರುವುದು ಖಂಡನೀಯ ಎಂದು ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ವಿಷಾದಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಕಾರ್ಯಕ್ರಮದಲ್ಲಿ ಪ್ರಮುಖ ಭಾಷಣಕಾರರಾಗಿ ಮಾತನಾಡಿದ ಅವರು, ನಾವು ಅಂಬೇಡ್ಕರ್ ಅಮಲನ್ನು ಏರಿಸಿಕೊಂಡಿದ್ದೇವೆಯೇ ಹೊರತು, ಅರಿವು ಮೂಡಿಸುತ್ತಿಲ್ಲ. ಭಾವಚಿತ್ರಗಳಿಗೆ ಮಾಲಾರ್ಪಣೆ ಮಾಡುತ್ತೇವೆ ವಿನಾ ಅವರ ಆದರ್ಶಗಳನ್ನು ಪಾಲನೆ ಮಾಡುತ್ತಿಲ್ಲ. ಮೊದಲು ಭಾರತದ ಸಂವಿಧಾನವನ್ನು ತಿಳಿಸುವ ಕೆಲಸ ಆಗಬೇಕು. ಸಂವಿಧಾನ ಮತ್ತು ಅಂಬೇಡ್ಕರ್ ಬಗ್ಗೆ ಮಾತನಾಡಬೇಕು. ಜಾತಿಯ ನಾಯಕನಾಗಿ ಕಾಣುತ್ತಿದ್ದೇವೆಯೇ ಹೊರತು ಅದನ್ನು ಮೀರಿ ನೋಡುತ್ತಿಲ್ಲ. ಇದು ಅಂಬೇಡ್ಕರ್ ಅವರಿಗೆ ಮಾಡಿದ ಅಪಮಾನ. ಧ್ವನಿ ಇಲ್ಲದವರಿಗೆ ಧ್ವನಿ, ಸ್ಥೈರ್ಯ ತುಂಬಿದರು. ಸಮಾನತೆಯ ನ್ಯಾಯ ಒದಗಿಸಿದರು. ಶೇ.50ರಷ್ಟು ಮಹಿಳೆಯರನ್ನು ಎರಡನೇ ದರ್ಜೆಯವರನ್ನಾಗಿ ಕಾಣುತ್ತಿದ್ದನ್ನು ನೋಡಿ ಕಾನೂನು ಸಚಿವರಾಗಿದ್ದಾಗ ಹಿಂದೂ ಕೋಡ್ ಬಿಲ್ ಮಂಡಿಸಿದರು. ಬಹುಮತ ಇದ್ದರೂ ಬಿಲ್ ಅನುಮೋದನೆ ಸಿಗದ ಕಾರಣ ರಾಜೀನಾಮೆ ಕೊಟ್ಟು ಹೊರ ಬಂದರು. ಮಹಿಳೆಯರಿಗೆ ಸ್ವಾತಂತ್ರ್ಯ ಸಿಗಲು ಅಂಬೇಡ್ಕರ್ ಕಾರಣ. ಮಹಿಳಾ ಮೀಸಲಾತಿಗಾಗಿ ಎರಡು ದಶಕಗಳಿಂದ ಹೋರಾಟ ನಡೆಯುತ್ತಿದೆ. ಮಹಿಳಾ ಮೀಸಲಾತಿ ಬಿಲ್ ಪಾಸ್ ಮಾಡಿ ಮಹಿಳೆಯರಿಗೆ ಸಮಾನತೆ ಕೊಡುವ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಬೇಕು. ರಾಜ್ಯ ಶಾಸನ ಸಭೆಗಳು, ಸಂಸತ್ತಿನಲ್ಲಿ ಮಹಿಳೆಯರಿಗೆ ಸಮಾನ ರಾಜಕೀಯ ಪ್ರಾತಿನಿಧ್ಯ ನೀಡುವ ಕಾಯ್ದೆ ಈ ತನಕ ಮಂಡನೆಯಾಗಿಲ್ಲ. ಎಲ್ಲ ಪಕ್ಷಗಳ ನಾಯಕರ ಈ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕು ಎಂದು ಆಗ್ರಹಿಸಿದರು.

ರಾಜಕೀಯದಲ್ಲಿ ಮಹಿಳೆಯರಿಗೆ ಶೇ.50ರಷ್ಟು ಪ್ರಾತಿನಿಧ್ಯ ನೀಡುವ ಮಹಿಳಾ ಮೀಸಲಾತಿ ವಿಧೇಯಕಕ್ಕೆ ಅನುಮತಿ ನೀಡಿದಾಗ ಮಾತ್ರ ಡಾ.ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ. ಶತಮಾನಗಳಿಂದಲೂ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಗಳಾಗಿ ನೋಡಲಾಗುತ್ತಿತ್ತು. ಅಂಬೇಡ್ಕರ್ ಅವರು ಮಹಿಳೆಯರಿಗೆ ಶಿಕ್ಷಣ, ಆಸ್ತಿ, ಅಧಿಕಾರ, ಸಮಾನ ಅವಕಾಶಗಳನ್ನು ಕಲ್ಪಿಸಲು ಹಿಂದೂ ಕೋಡ್ ಬಿಲ್ ಅನ್ನು ಮಂಡಿಸಿದರು.

ಸ್ವಾತಂತ್ರ್ಯ ಪಡೆದ ನಂತರ ಅನೇಕ ಸಾಧನೆ ಮಾಡಿದ್ದೇವೆ, ಗಡಿಯೇ ಇರದ ಭಾರತಕ್ಕೆ ಒಂದು ಭೌಗೋಳಿಕ ಚೌಕಟ್ಟು ದೊರೆತಿದೆ. ಪಾಳೇಗಾರಿಕೆ ವಿರುದ್ಧ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಕಟ್ಟಿದ್ದೇವೆ. ಬಡತನ ನಿರ್ಮೂಲನೆ, ಶಿಕ್ಷಣದಲ್ಲಿ ಪ್ರಗತಿ ಅಂಬೇಡ್ಕರ್ ಕೊಟ್ಟ ಸಂವಿಧಾನದಿಂದ ಸಾಧ್ಯವಾಗಿದೆ ಎಂದು ಹೇಳಿದರು.

ಸಂವಿಧಾನ ಜಾರಿಯಾದ ಮೇಲೂ ಜಾತಿ ವ್ಯವಸ್ಥೆ ಪೂರ್ಣವಾಗಿ ನಿರ್ಮೂಲನೆಯಾಗಿಲ್ಲ. ಆದರೆ ಅದಕ್ಕೆ ಪೆಟ್ಟು ಕೊಟ್ಟಿದ್ದೇವೆ. ಶೂದ್ರರು, ಮಹಿಳೆಯರು ರಾಷ್ಟ್ರಪತಿ, ಪ್ರಧಾನಿಯಾಗಲು ಸಾಧ್ಯವಾಗಿದೆ. ಸಂವಿಧಾನ ಜಾರಿಯಾಗಿ 75 ವರ್ಷಗಳಾದರೂ ಅದರ ಬಗ್ಗೆ ಪೂರ್ಣವಾಗಿ ಜನರಿಗೆ ತಿಳಿಸಲು ಸಾಧ್ಯವಾಗಿಲ್ಲ ಎಂದು ವಿಷಾದಿಸಿದರು.

ಗಾಂಧಿ, ಅಂಬೇಡ್ಕರ್ ವಿಚಾರಗಳ ಮಧ್ಯೆ ದ್ವೇಷ ಬಿತ್ತುವ ಕಾರ್ಯ

ಕಾಂಗ್ರೆಸ್ ಭವನದಲ್ಲಿ ಅಂಬೇಡ್ಕರ್ ಜಯಂತಿಯಲ್ಲಿ ಸಿ.ಬಸವಲಿಂಗಯ್ಯ ವಿಷಾದ



ಮೈಸೂರು, ಏ.14(ಎಂಟಿವೈ)– ಮಹಾತ್ಮಗಾಂಧೀಜಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ವಿಚಾರಗಳ ಮಧ್ಯೆ ದ್ವೇಷ ಬಿತ್ತುವ ಮೂಲಕ ಕೆಲವರು ರಾಜಕೀಯ ಲಾಭ ಮಾಡಿಕೊಳ್ಳುವತ್ತ ಸಂಚು ನಡೆಸುತ್ತಿದ್ದಾರೆ ಎಂದು ರಂಗಕರ್ಮಿ ನಿರ್ದೇಶಕ ಸಿ.ಬಸವಲಿಂಗಯ್ಯ ವಿಷಾದಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ ಕೆಲ ವರ್ಷಗಳಿಂದ ಗಾಂಧೀಜಿ ಮತ್ತು ಅಂಬೇಡ್ಕರ್ ವಿಚಾರಗಳ ಮಧ್ಯೆ ದ್ವೇಷ ಸೃಷ್ಟಿಸುವ ಕೆಲಸ ಎಗ್ಗಿಲ್ಲದೆ ಸಾಗಿದೆ. ಅದು ಇತ್ತೀಚೆಗೆ ಹೆಚ್ಚಾಗ ತೊಡಗಿದೆ. ಆದರೆ, ಕಳೆದ 20 ವರ್ಷಗಳಿಂದ ಅಂಬೇಡ್ಕರ್ ಕುರಿತು ಓದುವವರ ಸಂಖ್ಯೆ ಅಧಿಕವಾಗಿದೆ ಎಂದರು.

ಮತೀಯವಾದಿಗಳಿಗೆ ಈಗ ಸಂವಿಧಾನದ ಕಥೆ ಹೇಳಬೇಕಾಗಿದೆ. ಎಲ್ಲ ಧರ್ಮಗಳಿಗೂ ಧರ್ಮ ಗುರು ಮತ್ತು ಧರ್ಮ ಗ್ರಂಥ ಇದೆ. ಆದರೆ, ಹಿಂದೂ ಧರ್ಮಕ್ಕೆ ಧರ್ಮ ಗುರುವೂ ಇಲ್ಲ, ಧರ್ಮ ಗ್ರಂಥವೂ ಇಲ್ಲ. ಹಿಂದೂ ಧರ್ಮದ ಪರಿಕಲ್ಪನೆಯನ್ನು ಕೇಳಿದರೆ ಅಯ್ಯಪ್ಪ ಸ್ವಾಮಿ ಕಥೆ ಹೇಳಲಾಗುತ್ತಿದೆ. ಅದರಲ್ಲೂ ಯಾವುದೇ ಆಧಾರಗಳಿಲ್ಲ. ವೇದ ಉಪನಿಷತ್ತುಗಳಲ್ಲಿ ಹಿಂದೂ ಎಂಬ ಪದವೇ ಇಲ್ಲ ಈ ಪದವನ್ನು ಹೈಜಾಕ್ ಮಾಡಲಾಗಿದೆ ಎಂದು ಆರೋಪಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಪ್ರಸ್ತುತ ರಾಜಕೀಯದೊಳಗೆ ಧರ್ಮವನ್ನು ಎಳೆದು ತಂದು ಸಂವಿಧಾನದ ಆಶಯಗಳಿಗೆ ಅಪಚಾರದೊಂದಿಗೆ ದೇಶದ್ರೋಹಿ ಕೃತ್ಯ ಎಸಗಲಾಗುತ್ತಿದೆ. ಸ್ವಾತಂತ್ರ್ಯ ಬಂದು 72 ವರ್ಷವಾದರೂ ಈಗಲೂ ಸಂವಿಧಾನದ ಆಶಯಗಳು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಬಿಜೆಪಿಯಿಂದ ಸಂವಿಧಾನಕ್ಕೆ ಕಂಟಕ ಎದುರಾಗಿದೆ. ಸಂವಿಧಾನ ಆಶಯಗಳನ್ನು ಬುಡಮೇಲು ಮಾಡಲಾಗುತ್ತಿದೆ. ಸಂವಿಧಾನ ಉಳಿಯದಿದ್ದರೆ ದೇಶ ಉಳಿಯಲ್ಲ ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ವಾಸು, ವಿಧಾನಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಮಾಜಿ ಉಪ ಮೇಯರ್ ಪುಷ್ಪವಲ್ಲಿ, ಮಾಧ್ಯಮ ವಕ್ತಾರ ಮಹೇಶ್, ಮುಖಂಡರಾದ ಶಿವಣ್ಣ, ಎಂ.ಎ.ಕಮಲಾ ಅನಂತರಾಮು, ಶಿವಪ್ರಸಾದ್, ಸೋಮಶೇಖರ್, ಮನೋಮಣಿ, ಲಕ್ಷ್ಮೀ, ರಾಣಿ, ಕುಮುದ, ಹೇಮಂತ್, ಸಕಳ್ಳಿ ಬಸವರಾಜು, ಹಿನಕಲ್ ಬಸವರಾಜು, ಡೊನಾಲ್ಡ್, ದೀಪಕ್ ಶಿವಣ್ಣ, ರಫೀಕ್ ಆಲಿ, ಪ್ರವೀಣ್ ಮುಂತಾದವರು ಪಾಲ್ಗೊಂಡಿದ್ದರು.



ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಮೈಸೂರು ಎನ್.ಆರ್.ಮೊಹಲ್ಲಾ ಉಪ ವಿಭಾಗದ ಪರಿಶಿಷ್ಟ ಜಾತಿ, ಪಂಗಡ ಕಲ್ಯಾಣ ಸಂಸ್ಥೆ ವತಿಯಿಂದ ಡಾ.ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಯಿತು. ಈ ವೇಳೆ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರಾಜು, ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 131ನೇ ಜಯಂತಿಯನ್ನು ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್ ಅವರೊಂದಿಗೆ ತಮ್ಮ ನಿವಾಸ 'ಭೀಮ ಸದನ'ದಲ್ಲಿ ಸರಳವಾಗಿ ಆಚರಿಸಿದರು. ಈ ವೇಳೆ ಕುಟುಂಬ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಡಾ.ಅಂಬೇಡ್ಕರ್ ಅವರ 131ನೇ ಜನ್ಮದಿನಾಚರಣೆ

ವಿಜೃಂಭಣೆಯಿಂದ ನಡೆದ ಬಾಬಾ ಸಾಹೇಬರ ಸ್ತಬ್ಧಚಿತ್ರ ಮೆರವಣಿಗೆ

ಮೈಸೂರು,ಏ.14(ಪಿಎಂ)– ಸಂವಿಧಾನ ಶಿಲ್ಪಿ, ವಿಶ್ವಜ್ಞಾನಿ, ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮದಿನಾಚರಣೆ ಅಂಗವಾಗಿ ಅಂಬೇಡ್ಕರ್ ಅವರ ಪ್ರತಿಮೆ, ಚಿತ್ರ ಮತ್ತು ಸಂದೇಶಗಳನ್ನು ಒಳಗೊಂಡ ಸ್ತಬ್ಧಚಿತ್ರದ ಮೆರವಣಿಗೆಯು ಗುರುವಾರ ಸಾವಿರಾರು ಸಂಖ್ಯೆಯ ಜನಸ್ತೋಮದ ನಡುವೆ ವಿಜೃಂಭಣೆಯಿಂದ ನೆರವೇರಿತು.





ಮೈಸೂರಿನ ಅಶೋಕ ವೃತ್ತದಲ್ಲಿ ಮೆರವಣಿಗೆ ಸಾಗಿದ ಸಂದರ್ಭ. ಮತ್ತೊಂದು ಚಿತ್ರದಲ್ಲಿ ಸ್ತಬ್ಧಚಿತ್ರದ ಒಂದು ಬದಿಯ ಚಿತ್ರಣ ಕಾಣಬಹುದು.

ಸ್ತಬ್ಧಚಿತ್ರದೊಂದಿಗೆ ಸಾಗಿದ 10ಕ್ಕೂ ಹೆಚ್ಚು ಕಲಾ ತಂಡಗಳು ಸಾಂಸ್ಕೃತಿಕ ವೈಭವ ಅನಾವರಣಗೊಳಿಸಿದರೆ, ಬ್ಯಾಂಡ್ ಮತ್ತು ಮಂಗಳವಾದ್ಯದ ಸಂಗೀತವು ಸಂಭ್ರಮವನ್ನು ಇಮ್ಮಡಿಗೊಳಿಸಿದವು. ಮೆರವಣಿಗೆಯಲ್ಲಿ ಅಂಬೇಡ್ಕರ್ ಭಾವಚಿತ್ರವುಳ್ಳ ನೀಲಿ ಧ್ವಜಗಳು ರಾರಾಜಿಸಿದವು.

ಮೈಸೂರು ನಗರ ಅಶೋಕಪುರಂ ಆದಿ ಕರ್ನಾಟಕ ಮಹಾಸಂಸ್ಥೆ ಮತ್ತು ಅಶೋಕಪುರಂನ ಯುವ ಸಂಘಟನೆಗಳ ಒಕ್ಕೂಟದ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮೆರವಣಿಗೆಯು ಹೀಗೆ ಅತ್ಯಂತ ಭವ್ಯತೆಯಿಂದ ನಡೆಯಿತು.

ಸ್ತಬ್ಧಚಿತ್ರದ ಮುಂಭಾಗದಲ್ಲಿ ಅಂಬೇಡ್ಕರ್ ಅವರ ನಿಂತ ಭಂಗಿಯ ಪ್ರತಿಮೆ ಇದ್ದಿತು. ಪ್ರತಿಮೆ ಹಿಂಭಾಗದಲ್ಲಿ ನೀಲಿಯ ಹಿನ್ನೆಲೆಯಲ್ಲಿ ಅಶೋಕ ಚಕ್ರವು ಶ್ವೇತವರ್ಣದಲ್ಲಿ ಮೂಡಿಬಂದಿತ್ತು. ಜೊತೆಗೆ ಬುದ್ಧನ ಭಾವಚಿತ್ರವೂ ಇದ್ದಿತು. ಮೇಲ್ಭಾಗದಲ್ಲಿ ದೇಶದ ರಾಷ್ಟ್ರ ಲಾಂಛನದ ಪ್ರತಿರೂಪ ಅನಾವರಣಗೊಂಡಿತ್ತು. ಸ್ತಬ್ಧಚಿತ್ರದ ಹಿಂಬದಿಯಲ್ಲಿ ಧ್ಯಾನಸ್ಥ ಬುದ್ಧನ ಪ್ರತಿಮೆ ಇದ್ದರೆ, ಎದುರಿಗೆ ಅಂಬೇಡ್ಕರ್ ತಮ್ಮ ಅನುಯಾಯಿಗಳೊಂದಿಗೆ ಬುದ್ಧನೆಡೆಗೆ ಸಾಗುತ್ತಿರುವಂತೆ ಸಾಲು ಪ್ರತಿಮೆಗಳನ್ನು ಮೂಡಿಸಲಾಗಿತ್ತು.

ಅಲ್ಲದೆ, ಒಂದು ಬದಿಯಲ್ಲಿ ಅಂಬೇಡ್ಕರ್ ಅವರು ಸಂವಿಧಾನದ ಪುಸ್ತಕ ಹಿಡಿದು ಆಸೀನರಾಗಿರುವ ಚಿತ್ರವಿದ್ದರೆ, ಮತ್ತೊಂದು ಬದಿಯಲ್ಲಿ ಆಧುನಿಕ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ರಾಜ ಗಾಂಭೀರ್ಯದಲ್ಲಿ ನಿಂತಿರುವ ಭಂಗಿ ಚಿತ್ರದೊಂದಿಗೆ ಅವರ ಕೊಡುಗೆಯ ವಿವರಗಳು ಕಂಡು ಬಂದಿತು. ಅಶೋಕಪುರಂ ಉದ್ಯಾನವನದ ಎದುರು ಸ್ತಬ್ಧಚಿತ್ರದಲ್ಲಿರುವ ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಸಂಸದ ವಿ.ಶ್ರೀನಿವಾಸ ಪ್ರಸಾದ್, ಮೆರವಣಿಗೆಗೆ ಚಾಲನೆ ನೀಡಿದರು.

ಉದ್ಯಾನವನದಲ್ಲೂ ಭೀಮ ಸ್ಮರಣೆ: ಅಶೋಕಪುರಂನ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನವನದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಗಣ್ಯರು, ಸಾರ್ವಜನಿಕರು ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು. ಅಲ್ಲದೆ, ಉದ್ಯಾನದ ಮುಖ್ಯದ್ವಾರವನ್ನು ಅಂಬೇಡ್ಕರ್ ಮತ್ತು ಬುದ್ಧನ ಛಾಯಾಚಿತ್ರಗಳೊಂದಿಗೆ ವಿಶೇಷವಾಗಿ ಅಲಂಕರಿಸಲಾಗಿತ್ತು. ಚಿಕ್ಕಮಗಳೂರಿನ ಕೊಪ್ಪ ತಾಲೂಕಿನ ಗೌರಿಗದ್ದೆಯ ಶ್ರೀ ಅವಧೂತ ವಿನಯ್ ಗುರೂಜಿ ಆಶ್ರಮದ ಶ್ರೀವಿನಯ್ ಗುರೂಜಿ, ಶಾಸಕ ಎಸ್.ಎ.ರಾಮದಾಸ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಚಲನಚಿತ್ರ ನಟ ಚೇತನ್ ಮೆರವಣಿಗೆಯಲ್ಲಿ ಭಾಗವಹಿಸಿದ್ದಲ್ಲದೆ, ಉದ್ಯಾನವನದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು.

> **ಅಂಬೇಡ್ಕರ್ ಸಂದೇಶ ಕಾರ್ಯರೂಪಕ್ಕೆ ಪ್ರಾಮಾಣಿಕ ಪ್ರಯತ್ನ ಅಗತ್ಯ ; ವಿ.ಶ್ರೀನಿವಾಸ ಪ್ರಸಾದ್**
>
> ಮೆರವಣಿಗೆಗೆ ಚಾಲನೆ ನೀಡಿ ಮಾಧ್ಯಮದೊಂದಿಗೆ ಮಾತನಾಡಿದ ಸಂಸದ ವಿ.ಶ್ರೀನಿವಾಸ ಪ್ರಸಾದ್, ಇಂದು ದೇಶಾದ್ಯಂತ ಅತ್ಯಂತ ಸಂಭ್ರಮದಿಂದ ಅಂಬೇಡ್ಕರ್ ಅವರ ಜಯಂತಿ ಆಚರಣೆ ಮಾಡಲಾಗುತ್ತಿದೆ. ಪ್ರತಿವರ್ಷ ಅಶೋಕಪುರಂನಲ್ಲಿ ಅಂಬೇಡ್ಕರ್ ಜಯಂತಿಯನ್ನು ಅತ್ಯಂತ ಸಡಗರದಿಂದ ಆಚರಿಸಲಾಗುತ್ತದೆ. ನಾನು ಹುಟ್ಟಿ ಬೆಳೆದ ಇಲ್ಲಿ, ಪ್ರತಿ ಬಾರಿ ನಡೆಯುವ ಅಂಬೇಡ್ಕರ್ ಜಯಂತಿಗೆ ನಾನು ತಪ್ಪದೇ ಭಾಗವಹಿಸುತ್ತೇನೆ. ಅಂಬೇಡ್ಕರ್ ಅವರು ನೀಡಿದ ಸಂದೇಶಗಳನ್ನು ಕಾರ್ಯರೂಪಕ್ಕೆ ತರಲು ನಾವು ಪ್ರಾಮಾಣಿಕವಾಗಿ ಮುಂದಾಗಬೇಕು ಎಂದು ಹೇಳಿದರು.

ಅಶೋಕಪುರಂನಲ್ಲಿ ಹಬ್ಬದ ಸಂಭ್ರಮ: ಅಶೋಕಪುರಂನಲ್ಲಿ ಪ್ರತಿ ಮನೆಯಲ್ಲೂ ಹಬ್ಬದ ವಾತಾವರಣ ಮನೆ ಮಾಡಿತ್ತು ಇಲ್ಲಿನ ಮನೆ ಮನೆಯಲ್ಲೂ ಅಂಬೇಡ್ಕರ್ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಅಲ್ಲದೆ, ಮೆರವಣಿಗೆಯು ಮನೆ ಎದುರಿಗೆ ಬಂದಾಗ ಪ್ರತಿ ಮನೆಯಿಂದಲೂ ಸ್ತಬ್ಧಚಿತ್ರದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಯಿತು. ಮೆರವಣಿಗೆಯಲ್ಲಿ ಸಿಹಿ, ಕೇಸರಿಬಾತ್, ಮೊಸರನ್ನ ಹಾಗೂ ಮಜ್ಜಿಗೆ, ಪಾನಕ ವಿತರಣೆ ಮಾಡಲಾಯಿತು.

ಅಶೋಕಪುರಂನ ಬೀದಿ ಬೀದಿಗಳಲ್ಲಿ ಸಂಚರಿಸಿದ ಮೆರವಣಿಗೆಯು, ಅಂಬೇಡ್ಕರ್ ರಸ್ತೆ, ಅಶೋಕ ವೃತ್ತ (ಬಲ್ಲಾಳ್ ವೃತ್ತ), ಆರ್‌ಟಿಓ ವೃತ್ತ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಬಸವೇಶ್ವರ ವೃತ್ತ (ಪಾಠಶಾಲೆ ವೃತ್ತ), ಸಯ್ಯಾಜಿರಾವ್ ರಸ್ತೆ, ಕೆಆರ್ ವೃತ್ತ, ಚಾಮರಾಜ ಒಡೆಯರ್ ವೃತ್ತದ ಮೂಲಕ ಪುರಭವನ ತಲುಪಿ, ಇಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಮುಕ್ತಾಯಗೊಂಡಿತು.

ಆದಿ ಕರ್ನಾಟಕ ಮಹಾಸಂಸ್ಥೆ ಸಲಹೆಗಾರ ಹಾಗೂ ಮಾಜಿ ಮೇಯರ್ ಪುರುಷೋತ್ತಮ್, ಮಹಾಸಂಸ್ಥೆ ಅಧ್ಯಕ್ಷ ಸಿ.ವಿಜಯಕುಮಾರ್, ಉಪಾಧ್ಯಕ್ಷ ಸಿ.ಎಂ.ಮಹಾಲಿಂಗು, ಪ್ರಧಾನ ಕಾರ್ಯದರ್ಶಿ ಎಂ.ಗಂಗಾಧರ, ಖಜಾಂಚಿ ಎಂ.ಎನ್.ಶಿವಪ್ರಸಾದ್, ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಅಶೋಕಪುರಂ ದೊಡ್ಡ ಗರಡಿ ಅಧ್ಯಕ್ಷ ಕೆ.ಪುಟ್ಟಸಿದ್ದಯ್ಯ, ಕಾರ್ಯದರ್ಶಿ ಚಿಕ್ಕಪಾಪಣ್ಣ, ಚಿಕ್ಕಗರಡಿ ಅಧ್ಯಕ್ಷ ಮಹೇಶ್, ಕಾರ್ಯದರ್ಶಿ ರವಿಕುಮಾರ್, ಲೇಖಕ ಸಿದ್ದಸ್ವಾಮಿ ಸೇರಿದಂತೆ ಅಶೋಕಪುರಂ ಮತ್ತು ವಿವಿಧ ಪ್ರದೇಶದ ಜನತೆ ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ

10 ಸಾವಿರ ಥಿಯೇಟರ್‌ಗಳಲ್ಲಿ ಕೆಜಿಎಫ್-2 ಘರ್ಜನೆ



ರಣವಿಕ್ರಮ ಖ್ಯಾತಿಯ ಅದಾ ಶರ್ಮಾ





ಬಹುನಿರೀಕ್ಷಿತ ಕೆಜಿಎಫ್2 ಚಿತ್ರ ಗುರುವಾರ ರಿಲೀಸಾಗಿದೆ. ವಿಶ್ವಾದ್ಯಂತ 10 ಸಾವಿರಕ್ಕೂ ಹೆಚ್ಚು ಸ್ಕ್ರೀನ್‌ಗಳಲ್ಲಿ ತೆರೆಕಾಣುವ ಮೂಲಕ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಹೊಸ ದಾಖಲೆ ಬರೆದಿದೆ. ಭಾರತದಾದ್ಯಂತ ಆರು ಸಾವಿರ ಅಲ್ಲದೇ ಕರ್ನಾಟಕದಲ್ಲೇ ಐದುನೂರ ಐವತ್ತಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಭರ್ಜರಿಯಾಗಿ ತೆರೆಕಂಡಿದೆ. ಅಭಿಮಾನಿಗಳ ಒತ್ತಾಯದ ಮೇರೆಗೆ ಮೈಸೂರು, ದಾವಣಗೆರೆ, ರಾಯಚೂರು ಸೇರಿದಂತೆ ರಾಜ್ಯದ ಬಹುತೇಕ ಕೇಂದ್ರಗಳಲ್ಲಿ ಬೆಳಗಿನ ಜಾವ 4ರಿಂದಲೇ ಕೆಜಿಎಫ್2 ಚಿತ್ರ ಪ್ರದರ್ಶನ ಆರಂಭವಾಗಿದೆ. ಚಿನ್ನದ ಒಡೆಯನ ವೈಭವವನ್ನು ಬೆಳ್ಳಿತೆರೆಯ ಮೇಲೆ ಕಣ್ತುಂಬಿಕೊಂಡ ಅಭಿಮಾನಿಗಳ ಹರ್ಷೋದ್ಘಾರ ವರ್ಣಿಸಲಸಾಧ್ಯ.

ರಾಕಿಭಾಯ್‌ಗೆ ನರಾಚಿಯ ಒಡೆಯನನ್ನಾಗಿ ಮಾಡಿದ್ದ ನಿರ್ದೇಶಕ ಪ್ರಶಾಂತ್‌ನೀಲ್, ಆತನ ಒಂದು ಮಹತ್ವಾಂಕ್ಷೆ, ನರಾಚಿಯ ಚಿನ್ನದ ರಾಶಿಯನ್ನೇ ಮೀರಿದ್ದು ಎಂದು ಹೇಳಿದ್ದಾರೆ. ರಾಕಿಭಾಯ್ ಚಿನ್ನದ ಭೂಮಿಯ ಒಡೆಯನಾದ ಮೇಲೆ ಆತನಿಗೆ ಇಲ್ಲಿ ಶತೃಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ತನ್ನಮೇಲೆ ಮುಗಿಬಿದ್ದ ವೈರಿಗಳನ್ನು ಚಾಣಾಕ್ಷನಾದ ರಾಕಿಭಾಯ್ ಹೇಗೆ ಎದುರಿಸುತ್ತಾನೆ, ವೈರಿಗಳ ವಿರುದ್ಧ ಗೆದ್ದು, ಸ್ವ ಇಚ್ಚೆಯಿಂದ ಸೋಲುತ್ತಾನೆ. ನಾನು ದೇಶದ ಒಟ್ಟು ಸಾಲವನ್ನೂ ತೀರಿಸಬಲ್ಲೆ ಎಂದು ಹೇಳುವ ಆತನ ಡೈಲಾಗೇ ಆತನ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುತ್ತದೆ. ಕೆಜಿಎಫ್ 2 ನಿಜಕ್ಕೂ ಕನ್ನಡಿಗರೆಲ್ಲ ಹೆಮ್ಮೆ ಪಡುವಷ್ಟು ರಿಚ್ ಆಗಿದೆ. ತಾಂತ್ರಿಕವಾಗಿಯೂ ಅದ್ಭುತವಾಗಿ ಮೂಡಿಬಂದಿದೆ.

ಚಿತ್ರದ ಮ್ಯೂಸಿಕ್ ಜೊತೆಗೆ ಕ್ಯಾಮೆರಾ ಕೆಲಸವೂ ಅತ್ಯದ್ಭುತವಾಗಿದೆ. ಆಕ್ಷನ್ ದೃಶ್ಯಗಳಲ್ಲಂತೂ ಛಾಯಾಗ್ರಾಹಕ ಹಾಗೂ ಸಾಹಸ ಸಂಯೋಜಕರ ಪರಿಶ್ರಮ ಎದ್ದು ಕಾಣುತ್ತದೆ. ಹಾಡುಗಳ ಜೊತೆಗೆ ಚಿತ್ರದ ಸಂಭಾಷಣೆಗಳೂ ಚುರುಕಾಗಿವೆ, ಪ್ರಥಮ ಭಾಗದಲ್ಲಿ ರಾಕಿಗೆ ಸವಾಲ್ ನೀಡುವ ಅಧೀರನ ಪಾತ್ರದಾರಿ ಸಂಜಯ್‌ದತ್ ಸೆಕೆಂಡ್‌ಹಾಫ್‌ನಲ್ಲಿ ಕಣ್ಮರೆಯಾಗುತ್ತಾರೆ. ಮತ್ತವರು ಕ್ಲೈಮ್ಯಾಕ್ಸ್‌ನಲ್ಲೇ ಕಾಣಿಸಿಕೊಳ್ಳುವುದು, ಚಿತ್ರದಲ್ಲಿ ರವೀನಾ ಟಂಡನ್ ಅವರ ಪಾತ್ರ ತಡವಾಗಿಯೇ ಎಂಟ್ರಿಯಾದರೂ ಗಟ್ಟಿತನದಿಂದ ಕೂಡಿದ್ದು, ಕತೆಯ ಮೇಲೂ ಪ್ರಭಾವ ಬೀರುತ್ತದೆ. ಯಶ್ ಅಭಿನಯದ ಬಗ್ಗೆ ಹೇಳುವಂತೆಯೇ ಇಲ್ಲ, ಕೆಜಿಎಫ್ ನಿಜಕ್ಕೂ ಕನ್ನಡದ ಹೆಮ್ಮೆಯ ಚಿತ್ರವಾಗಿದೆ.



ಫಸ್ಟ್‌ಲುಕ್‌ನಲ್ಲಿ ಬೆಂಗಲೂರು ಬಾಯ್ಸ್

ಟೀಸರ್, ಟ್ರೇಲರ್ ಹಾಗೂ ಹಾಡುಗಳ ಮೂಲಕ ತಮ್ಮ ಸಿನಿಮಾದ ತಾಕತ್ತು ಏನು ಅನ್ನೋದನ್ನು ಸಾಬೀತು ಮಾಡುವುದು ಚಿತ್ರದ ನಿರ್ದೇಶಕನ ಜಾಣ್ಮೆ. ಅಂತಹ ಕಲೆಯನ್ನು ಬೆಂಗಳೂರು ಬಾಯ್ಸ್ ಸಿನಿಮಾದ ಮೂಲಕ ವಿ.ಮೇಕರ್ಸ್ ತಂಡ ಪ್ರೂವ್ ಮಾಡಿದೆ. ವಿ ಮೇಕರ್ಸ್ ವಿಭಿನ್ನ ಪ್ರಯತ್ನದಲ್ಲಿ ಮೂಡಿ ಬಂದಿರುವ 'ಬೆಂಗಳೂರು ಬಾಯ್ಸ್' ಸಿನಿಮಾದ ಫಸ್ಟ್ ಲುಕ್ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. 90ರ ದಶಕದ ಸೂಪರ್‌ಹಿಟ್ ಸಿನಿಮಾಗಳಾದ ಅಂತ, ಎ, ರಣಧೀರ ಹಾಗೂ ಓಂ ಸಿನಿಮಾ ನಾಯಕರ ಗೆಟಪ್ ಹಾಕಿರುವ ನಟ ಸಚಿನ್ ಚೆಲುವರಾಯಸ್ವಾಮಿ, ಅಭಿಷೇಕ್‌ದಾಸ್ ಹಾಗೂ ರೋಹಿತ್ ಈ ಚಿತ್ರದ ಮೂವರು ನಾಯಕರು. ಇವರ ಜೊತೆ ನಾಯಕಿಯರಾಗಿ ವೈನಿಧಿ ಜಗದೀಶ್, ಹಾಗೂ ಸೋನಿ ನಟಿಸಿದ್ದಾರೆ.

ಬೆಂಗಳೂರು ಬಾಯ್ಸ್ ಒಂದು ರೊಮ್ಯಾಂಟಿಕ್ ಕಾಮಿಡಿ ಎಂಟರ್‌ಟೈನರ್ ಚಿತ್ರವಾಗಿದ್ದು, ಕಾಲೇಜುಗಳಲ್ಲಿ ಹುಡುಗ ಹುಡುಗಿಯರ ನಡುವೆ ನಡೆಯುವ ಕಥೆಯ ಜೊತೆ ಒಂದು ಲವ್‌ಸ್ಟೋರಿ ಕೂಡ ಸಾಗುತ್ತದೆ. ಎಮೋಷನ್-ಸೆಂಟಿಮೆಂಟ್‌ಗೂ ಕೊರತೆಯೇನಿಲ್ಲ. ರ್‍ಯಾಪರ್ ಅಲೋಕ್ ಧರ್ಮವಿಷ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ವಿಕ್ರಮ್ ಅವರು ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಪ್ರಶಾಂತ್‌ರಾವ್ ಸಹ ನಿರ್ಮಾಪಕರಾಗಿದ್ದು, ಅಂಬಿ ನಿಂಗೆ ವಯಸ್ಸಾಯ್ತೋ ಖ್ಯಾತಿಯ ಗುರುದತ್‌ಗಾಣಿಗ ನಿರ್ದೇಶನ ಸಾರಥ್ಯ ಹೊತ್ತಿದ್ದಾರೆ. ಈಗಾಗಲೇ ಬೆಂಗಳೂರು ಬಾಯ್ಸ್ ಚಿತ್ರದ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿರುವ ಚಿತ್ರತಂಡ ಫಸ್ಟ್‌ಲುಕ್ ಟೀಸರ್ ರಿಲೀಸ್ ಮಾಡುವ ಮೂಲಕ ಪ್ರಮೋಷನ್‌ಗೆ ಮುನ್ನುಡಿ ಬರೆದಿದೆ.



ಸಚಿನ್ ಚೆಲುವರಾಯಸ್ವಾಮಿ

ಸಿನಿಪದಬಂಧ-003

ಆಜ್ಹಾದ್ ಜಿ. ಆಚಾರ್ಯ 6361429085

1					2			■	3	4
	■	■	■	■		■	■	5	■	
	■	6			■	■	7			
8			■	■	9			■	■	
	■	■	10	■		■	11			■
	■	■		■		■		■	■	12
■	13			■		■	17	■	■	18
14	■	■	15			■	■	16		
17		18		■	■	19			■	
	■		■	■	20	■	■	■	■	
21		■	22							

ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಡಾ. ರಾಜ್ ಪ್ರೀತಿ ಬಿರಿಯಿತು, ಮೊಗ್ಗು ಹೂವಾದಂತೆ 8
3. ನಕ್ಷತ್ರ ಹೆಸರಿನ ಹಿರಿಯ ನಟಿ 2
6. ಶ್ರೀಮುರಳಿ ಮತ್ತು ಶ್ರೀಲೀಲಾ ಅಭಿನಯಿಸಿದ ಚಿತ್ರ ತಿರುಗಿದೆ 3
7. ತಿರುಗಿದೆ ದರ್ಶನ್ ಬಿರುದಿನ ಪೂರ್ವಾರ್ಧ 4
8. ಡಾ. ರಾಜ್ ಚಿತ್ರವಾದರೂ ನವಿಲು ದೀರ್ಘವಾಗಿದೆ 3
9. ಮಿನುಗುತಾರೆ 3
11. ರನ್ನನ ನಾಯಕಿ 3
13. ಅಂಬರೀಶ್ ಪುತ್ರನ ಚಿತ್ರ 3
15. ದಾಸನಾದ ಪ್ರಜ್ವಲ್ ದೇವರಾಜ್ 3
16. ಕನ್ನಡ ನಾಡು ------ ಗುಡಿ 3
17. ಪುನೀತ್, ಕಿಟ್ಟಿ, ಲೂಸ್ ಮಾದ ಅಭಿನಯದ ಚಿತ್ರ 4
19. --- ಗಮನ, ವೃಷಭ ವಾಹನ 3
21. ಅಭಿ ಚಿತ್ರದ ನಾಯಕಿ 2
22. ನಾಗತಿಹಳ್ಳಿ ಚಂದ್ರಶೇಖರ್ ಹನಿಮೂನ್‌ಗೆ ಕರೆದಿದ್ದು 8

ಮೇಲಿನಿಂದ ಕೆಳಕ್ಕೆ

1. ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಪುನೀತ್ 6
2. ಸುದೀಪ್ ಕವಿಯಾಗಿದ್ದು 2
4. ರವಿಚಂದ್ರನ್-ಮಾಲಾಶ್ರೀ ಚಿತ್ರ 4
5. -ಮರಿ ಓಡ್ತಾ ಐತೆ, ನೋಡ್ಲಾ ಮಗಾ ಎಂದೊಡನೆ ತಿರುಗಿದೆ 2
6. ಧನಂಜಯನ ಗಿರಿಗಿಟ್ಲೆ ತಿರುಗಿದೆ 2
7. ಒಂದಾನೊಂದು ಕಾಲದಲ್ಲಿ ಚಿತ್ರದಿಂದ ಮೇಲೇರಿದವರು ತಿರುಗಿದ್ದಾರೆ 5
9. ರಾಜ್ ಶೆಟ್ಟಿ-ರಿಷಭ್ ಶೆಟ್ಟಿ ಅಭಿನಯಿಸಿದ ಚಿತ್ರಕ್ಕೆ ಏಳು ಜನ ನಿರ್ದೇಶಕರು 5
10. ತ್ರಿಪಾತ್ರದಲ್ಲಿ ಡಾ.ರಾಜ್ ಅಭಿನಯಿಸಿದ ಪ್ರಸಿದ್ಧ ಚಿತ್ರ 5
12. ಆಕ್ರೋಶದ ಮೃಗರಾಜ ಶೀರ್ಷಾಸನ ಹಾಕಿದೆ 6
14. ರವಿಚಂದ್ರನ್ ಶ್ರೀಮಂತ 4
16. ರವಿಚಂದ್ರನ್ ಗಡಿಬಿಡಿಯ ಪತಿ 2
18. ಜಗ ಮೆಚ್ಚಿದ ದರ್ಶನ್ ಚಿತ್ರ 2
20. -- ಸ್ವರ್ಗ -- ನರಕ 2

ಸಿನಿ ಪದಬಂಧ 002ರ ಸರಿ ಉತ್ತರ

ಒಂ	ದಾ	ನೊಂ	ದು	ಕಾ	ಲ	ದ	ಲ್ಲಿ	■	ದ್ವೀ	ಪ
ದಾ	■	■	ಗಾರ್	■	ವ್	■	■	■	■	ರ
ಗೋ	ಕ	ರ್ಣ	■	ಡ್ರಾ	■	ಯು	ಗ	■	ಭಂ	ಶು
ಣ	■	■	■	ಮಾ	ನ	ವ	■	ರಾ	■	ರಾ
ಬಾ	ರೆ	ಬಾ	ರೆ	■	ಮ್ಮ	■	■	ಮಾ	■	ಮ್
■	■	ಳ	■	ತ	ಬ	ಲಾ	■	ಯ	■	■
ಕ	■	ನಾ	■	■	ಸ	■	ರ	ಣ	ಧೀ	ರ
ಥಾ	■	ಕೆ	■	ಮಾ	ವ	ನ	■	■	■	ಕ್ತ
ಸಂ	ತ	■	ಕು	ಸ್ತಿ	■	ಲ್ಲ	■	ನಾ	ಯ	ಕ
ಗ	■	■	■	■	ಮಾ	■	ತು	■	■	ಣ್ಣೀ
ಮ	ಠ	■	ಎ	ಲ್ಲಿಂ	ದ	ಲೋ	ಬಂ	ದ	ವ	ರು

ವಿಜೇತರು: ನಾಗರತ್ನ C/O ರಾಘವೇಂದ್ರ ಟೈಪಿಂಗ್ ಸೆಂಟರ್, ಹಳೆ ಅಂಚೆ ಕಚೇರಿ ರಸ್ತೆ, ಶ್ರೀರಂಗಪಟ್ಟಣ

ಉಸಿರೇ ಉಸಿರೇ ಬಹುತೇಕ ಪೂರ್ಣ



ಬಿಗ್‌ಬಾಸ್ ಖ್ಯಾತಿಯ ರಾಜೀವ್ ನಟಿಸುತ್ತಿರುವ ಉಸಿರೇ ಉಸಿರೇ ಚಿತ್ರದಲ್ಲಿ ಬರುವ ಸೀತಾಪಹರಣ ನಾಟಕ ದೃಶ್ಯದ ಚಿತ್ರೀಕರಣ ವರದಾಚಾರ್ ಮೆಮೋರಿಯಲ್ ಹಾಲ್‌ನಲ್ಲಿ ನಡೆಯುತ್ತಿತ್ತು. ಸಿ.ಎಂ.ವಿಜಯ್ ನಿರ್ದೇಶನವಿರುವ ಈ ಚಿತ್ರವನ್ನು ಪ್ರದೀಪ್ ಯಾದವ್ ನಿರ್ಮಿಸುತ್ತಿದ್ದಾರೆ. ರಾಜೀವ್, ನಾಯಕಿ ಶ್ರೀಜಿತ್ ಘೋಷ್ ಮುಖ್ಯವಾಗಿ ತೆಲುಗಿನ ಹಾಸ್ಯನಟರಾದ ಬ್ರಹ್ಮಾನಂದಂ ಹಾಗೂ ಅಲಿ ಅಲ್ಲದೆ ಬಿಗ್‌ಬಾಸ್ ಮಂಜು ಪಾವಗಡ ಈ ಶೂಟಿಂಗ್‌ನಲ್ಲಿ ಭಾಗವಹಿಸಿದ್ದರು. ರಾಜೀವ್ ರಾಮನಾಗಿ, ಮಂಜು ಹನುಮಂತನಾಗಿ, ಬ್ರಹ್ಮಾನಂದಂ ನಾಟಕ ಹೇಳಿಕೊಡುವ ಮೇಷ್ಟ್ರಾಗಿ ಅಭಿನಯಿಸುತ್ತಿದ್ದರು. ಚಿತ್ರೀಕರಣ ವೀಕ್ಷಿಸಲು ಆಗಮಿಸಿದ ಪತ್ರಕರ್ತರೊಂದಿಗೆ ಚಿತ್ರತಂಡ ಮಾಹಿತಿ ಹಂಚಿಕೊಂಡಿತು,

ನಾಯಕ ರಾಜೀವ್ ಮಾತನಾಡಿ, ಇಬ್ಬರು ಲೆಜೆಂಡರಿಗಳೊಟ್ಟಿಗೆ ತೆರೆ ಹಂಚಿಕೊಳ್ಳುವ ಅವಕಾಶ ಈ ಚಿತ್ರದಲ್ಲಿ ಸಿಕ್ಕಿದೆ. ಇಷ್ಟುವರ್ಷ ಎಂಥ ಪಾತ್ರಗಳಿಂದ ಅವರು ಪ್ರಸಿದ್ಧರಾಗಿದ್ರೋ ಅದೇ ಪಾತ್ರಗಳಲ್ಲಿ ಇವರನ್ನು ನೋಡಬಹುದು. ಕಾಲೇಜಿನಲ್ಲಿ ನಡೆಯುವ ರಾಮಾಯಣದ ಪ್ರಸಂಗವನ್ನಾಧರಿಸಿ ಮಾಡುತ್ತಿರೋ ನಾಟಕದ ದೃಶ್ಯವಿದು. ಚಿತ್ರದ ಕಥೆಗೂ ಇದಕ್ಕೂ ಸಂಬಂಧವಿಲ್ಲ ಎಂದರು.

ಈವರೆಗೆ ಅನೇಕ ಪ್ರೇಮಕಥೆಯನ್ನು ನೀವು ನೋಡಿರಬಹುದು, ಅದೆಲ್ಲಕ್ಕಿಂತ ನಮ್ಮ ಚಿತ್ರ ವಿಭಿನ್ನವಾಗಿರಲಿದೆ. ಈಗಾಗಲೇ ಶೇ.50ರಷ್ಟು ಚಿತ್ರೀಕರಣ ಮುಗಿದಿದ್ದು, ಹಾಡುಗಳಷ್ಟೇ ಬಾಕಿಯಿದೆ, ಇವತ್ತು ಸೀತಾಪಹರಣದ ಸೀನ್ ನಡೆಯುತ್ತಿದೆ ಎಂದರು, ರಾಜೀವ್ ಮಾತನಾಡಿ, ಈಗಾಗಲೇ ಅರ್ಧದಷ್ಟು ಚಿತ್ರದ ಶೂಟಿಂಗ್ ಮುಗಿದಿದೆ. ನಾವೆಲ್ಲ ಬ್ರಹ್ಮಾನಂದಂ ಅಲಿ ಅವರ ಚಿತ್ರಗಳನ್ನು ನೋಡಿಕೊಂಡೇ ಬೆಳೆದವರು, ಈಗ ಅಂಥವರ ಜೊತೆ ಅಭಿನಯಿಸುವ ಅವಕಾಶ ನಿರ್ಮಾಪಕರು ಒದಗಿಸಿಕೊಟ್ಟಿದ್ದಾರೆ ಎಂದರು.

ನಂತರ ಮಾತನಾಡಿದ ನಿರ್ಮಾಪಕ ಪ್ರದೀಪ್ ಯಾದವ್, ಈ ಸಿನಿಮಾ ನಿರ್ಮಿಸಲು ಮುಖ್ಯ ಕಾರಣ ನನ್ನ ತಾಯಿ ಹಾಗೂ ನನ್ನ ಸ್ನೇಹಿತರು. ಇವರೆಲ್ಲರ ಬೆಂಬಲ ಹಾಗೂ ಪ್ರೋತ್ಸಾಹದಿಂದಲೇ ಇಂಥ ದೊಡ್ಡ ಸಿನಿಮಾ ಮಾಡುತ್ತಿದ್ದೇವೆ. ಅಲಿ ಮತ್ತು ಬ್ರಹ್ಮಾನಂದಂ ಇಬ್ಬರನ್ನೂ ಒಂದೇ ಫ್ರೇಮ್‌ನಲ್ಲಿ ತೋರಿಸಬೇಕೆಂಬುದು ನಮ್ಮ ಮೂಲ ಉದ್ದೇಶವಾಗಿತ್ತು ಎಂದರು. ನಾಯಕಿ ಬಹುಭಾಷಾ ತಾರೆ ಶ್ರೀಜಿತ್ ಘೋಷ್ ಮಾತನಾಡಿ, ತನ್ನ ಪಾತ್ರದ ಬಗ್ಗೆ ಹಾಗೂ ಚಿತ್ರತಂಡದ ಕುರಿತಂತೆ ಹೇಳಿಕೊಂಡರು. ನಟ ಅಲಿ ಮಾತನಾಡಿ ತಾನು ಈ ಹಿಂದೆ ಅಂಬರೀಶ್ ಜೊತೆ ಏಕಲವ್ಯ ಚಿತ್ರದಲ್ಲಿ ನಟಿಸಿದ್ದ ದಿನಗಳನ್ನು ನೆನಪಿಸಿಕೊಂಡರು. ಈ ಚಿತ್ರಕ್ಕೆ ವಿವೇಕ್ ಚಕ್ರವರ್ತಿ ಸಂಗೀತ, ಸರವಣನ್ ಛಾಯಾಗ್ರಹಣವಿದೆ.

ಮಾರಿಗುಡ್ಡದ ಗಡ್ಡಧಾರಿಗಳ ಕಥೆ..



ಮಾರಿಗುಡ್ಡದ ಗಡ್ಡಧಾರಿಗಳು ಎನ್ನುವ ಕುತೂಹಲಕರ ಶೀರ್ಷಿಕೆ ಹೊಂದಿದ ಚಿತ್ರವೊಂದು ಕಳೆದವಾರ ಸೆಟ್ಟೇರಿದೆ. 75ಕ್ಕೂ ಹೆಚ್ಚು ಚಿತ್ರಗಳಿಗೆ ಡಿಸೈನರ್ ಆಗಿ ಕೆಲಸ ಮಾಡಿದ ರಾಜೀವ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ಮೊದಲ ಬಾರಿಗೆ ಆಕ್ಷನ್‌ಕಟ್ ಹೇಳುತ್ತಿದ್ದಾರೆ. ವಿಶೇಷವಾಗಿ ಇದು ಖಳನಾಯಕನನ್ನು ಕೇಂದ್ರೀಕರಿಸಿ ಹೆಣೆದಂಥ ಕಥೆಯಾಗಿದ್ದು, ಸಲಗ ಚಿತ್ರದಲ್ಲಿ ಸೂರಿಯಣ್ಣನ ಪಾತ್ರದ ಮೂಲಕ ಗುರ್ತಿಸಿಕೊಂಡಿದ್ದ ದಿನೇಶ್‌ಕುಮಾರ್ ಅವರು ಇಲ್ಲಿ ಗಡ್ಡಧಾರಿಗಳ ಗುಂಪಿನ ನಾಯಕ ಹಲಿಯಾ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ, ಡಿಜೆ ಪ್ರಕಾಶ್ ಸಿನಿ ಪ್ರೊಡಕ್ಷನ್ಸ್ ಅಡಿಯಲ್ಲಿ ಈ ಚಿತ್ರದ ನಿರ್ಮಾಣವನ್ನೂ ಸಹ ಮಾಡುತ್ತಿದ್ದಾರೆ. ರಾಮಾಪುರ ಎಂಬ ಊರಿನ ಎಂಟು ಜನ ಗಡ್ಡಧಾರಿಗಳ ಸುತ್ತ ನಡೆಯುವ ಸೆನ್ಸೇಷನಲ್ ಕಥನ ಈ ಚಿತ್ರದಲ್ಲಿದೆ.

ಚಿತ್ರದ ಉಳಿದ ತಾರಾಗಣದಲ್ಲಿ ಪ್ರವೀಣ್, ನಂಜುಂಡ, ಊರ ಗೌಡನಾಗಿ ಅವಿನಾಶ್, ನಾಯಕಿಯ ತಂದೆಯಾಗಿ ರಮೇಶ್ ಭಟ್, ಇನ್‌ಸ್ಪೆಕ್ಟರ್ ಆಗಿ ಗಣೇಶ್‌ರಾವ್, ಬೆನಕ ನಂಜಪ್ಪ ಪ್ರಶಾಂತ್‌ಸಿದ್ದಿ ಮುಂತಾದವರು ಅಭಿನಯಿಸುತ್ತಿದ್ದಾರೆ. ನಾಯಕಿ ಪಾತ್ರಕ್ಕೆ ಹುಡುಕಾಟ ನಡೆದಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು ಕೆ.ಎಂ. ಇಂದ್ರ ಸಂಗೀತ ಸಂಯೋಜಿಸುತ್ತಿದ್ದಾರೆ. ವೀರೇಶ್ ಅವರ ಛಾಯಾಗ್ರಹಣ, ಪಳನಿ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಕೋಲಾರ, ಕೆಜಿಎಫ್ ಸುತ್ತಮುತ್ತ 35 ದಿನಗಳ ಕಾಲ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಬಂಡಿ ಮಾಂಕಾಳಮ್ಮ ದೇವಸ್ಥಾನದಲ್ಲಿ ನಡೆದ ಮಹೂರ್ತ ಸಮಾರಂಭಕ್ಕೆ ಟಗರು ನಿರ್ಮಾಪಕ ಕೆ.ಪಿ. ಶ್ರೀಕಾಂತ್, ಮಾಜಿ ಶಾಸಕ ನೆ.ಲ. ನರೇಂದ್ರಬಾಬು ಆಗಮಿಸಿ ಶುಭ ಹಾರೈಸಿದರು.

ಮೈಸೂರು ಮಿತ್ರ

ವಿವಿಧೆಡೆ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ

ವಿಶ್ವದಲ್ಲೇ ಭಾರತ ಸಂವಿಧಾನ ಶ್ರೇಷ್ಠ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ



ಹುಣಸೂರು, ಏ.14(ಕೆಕೆ)– ವಿಶ್ವದಲ್ಲೇ ಭಾರತ ಸಂವಿಧಾನ ಶ್ರೇಷ್ಠ ಸಂವಿಧಾನ. ದೇಶಕ್ಕೆ ಒಂದು ಶಕ್ತಿಯುತವಾದ ಸಂವಿಧಾನವನ್ನು ಅಂಬೇಡ್ಕರ್ ರಚಿಸಿ ಕೊಟ್ಟಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ದೇವರಾಜ ಒಡೆಯರ್ ಜನಸೇವಾ ಕೇಂದ್ರದಿಂದ ಏರ್ಪಡಿಸಿದ್ದ ರಾಜ್ಯ ಮಟ್ಟದ ನಾಡಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿ ನಂತರ ಮಾತನಾಡಿದ ಅವರು, ಅಂಬೇಡ್ಕರ್ ಅವರು, ವಿಶ್ವದ ಪ್ರಮುಖ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಆಡಳಿತ ವ್ಯವಸ್ಥೆ ಕಲೆಹಾಕಿ ಒಂದು ಪವಿತ್ರವಾದ ಸಂವಿಧಾನವನ್ನು ರಚಿಸಿಕೊಟ್ಟಿದ್ದಾರೆ. ಶೂದ್ರರು, ಶೋಷಿತರಲ್ಲದೇ ಎಲ್ಲಾ ವರ್ಗದ ಅಸಹಾಯಕ ವರ್ಗದವರ ಶಕ್ತಿಯಾಗಿ ಕಾರ್ಯ ನಿರ್ವಹಿಸುವ ಶಕ್ತಿಯನ್ನು ಸಂವಿಧಾನಕ್ಕೆ ಕೊಟ್ಟಿದ್ದಾರೆ. ಇದನ್ನು ಎಲ್ಲಾ ಜಾತಿ, ಧರ್ಮ, ವರ್ಗದವರು ಗೌರವಿಸಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಜಾತಿ ಜಾತಿಗಳ ಮಧ್ಯೆ ಸಂಘರ್ಷ ಹೆಚ್ಚಾಗಿದೆ. ಅದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ನಾವು ಹೋರಾಡಬೇಕಿದೆ. ಅಂಬೇಡ್ಕರ್ ಮತ್ತು ಜಗಜೀವನ್ ರಾಂ ಇಬ್ಬರೂ ಶೋಷಿತ ಸಮುದಾಯಗಳಿಗಾಗಿ ದುಡಿದವರು. ಜಗಜೀವನ್ ರಾಂ ಅವರಿಗೆ ನಮ್ಮ ತಂದೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೊಂದಿಗೆ ಒಡನಾಟವಿತ್ತು ಎಂದು ಸ್ಮರಿಸಿದರು.

ಕುಸ್ತಿ ನಮ್ಮ ಗ್ರಾಮೀಣ ಕ್ರೀಡೆ. ಮೈಸೂರು ಮಹಾರಾಜರ ಕಾಲದಿಂದಲೂ ಕುಸ್ತಿ ಪಂದ್ಯಾವಳಿ ನಡೆದುಕೊಂಡು ಬಂದಿದೆ. ಅಂತಹ ಕುಸ್ತಿ ಪಂದ್ಯಾವಳಿಯನ್ನು ಹುಣಸೂರಿನಲ್ಲಿ ಆಯೋಜಿಸಿರುವುದು ಸಂತಸದ ವಿಚಾರ ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಮಹದೇವ್, ಅಶ್ವಿನ್ ಕುಮಾರ್, ಮಂಜೇಗೌಡ, ನಗರಸಭೆ ಸದಸ್ಯರಾದ ಕೃಷ್ಣರಾಜ ಗುಪ್ತ, ಶರವಣ, ರಾಧ, ರಾಣಿಪೆರಿಮಾಳ್, ಶಾಹೀನ್ ತಾಜ್, ಶ್ರೀನಿವಾಸ್, ತಾಲೂಕು ಜೆಡಿಎಸ್ ಅಧ್ಯಕ್ಷ ಸೋಮಶೇಖರ್, ತಾಲೂಕು ಜೆಡಿಎಸ್ ಮಹಿಳಾ ಅಧ್ಯಕ್ಷೆ ಯಾಶೋಧ, ಉಪಾಧ್ಯಕ್ಷ ದೇವರಾಜ ಒಡೆಯರ್, ಜೆಡಿಎಸ್ ಮುಖಂಡರಾದ ನಾಝಿಯಾ, ಗಣೇಶ್ ಗೌಡ, ಹೆಚ್.ಎಂ.ಫಝಲುಲ್ಲಾ, ಅಣ್ಣಯ್ಯ, ಸಿರಾಜ್ ಪಾಷ, ಅಫ್ರೋಜ್, ಫೈರೋಜ್ ಇನ್ನಿತರರಿದ್ದರು.

ದೇಶಕ್ಕೆ ಅಂಬೇಡ್ಕರ್ ಕೊಡುಗೆ ಅಪಾರ

ಸಂಸದ ವಿ. ಶ್ರೀನಿವಾಸ ಪ್ರಸಾದ್



ನಂಜನಗೂಡು, ಏ.14(ಸುದರ್ಶನ್)– ದೇಶಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಕೊಡುಗೆ ಅಪಾರ. ಅಂತಹ ಮಹಾನ್ ವ್ಯಕ್ತಿಯನ್ನು ದಿನವಿಡೀ ಸ್ಮರಿಸಬೇಕು ಎಂದು ಸಂಸದ ವಿ. ಶ್ರೀನಿವಾಸ್ ಪ್ರಸಾದ್ ತಿಳಿಸಿದರು.

ನಗರದ ಕಲಾಮಂದಿರದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಎಲ್ಲಾ ಜನಾಂಗಕ್ಕೆ ಸಮಾನತೆ ಕಲ್ಪಿಸಿಕೊಟ್ಟ ಮಹಾನ್ ನಾಯಕ. ಅವರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಅಳವಡಿಕೊಂಡಾಗ ಮಾತ್ರ ಅವರ ಹಾದಿಯಲ್ಲಿ ನಡೆಯಲು ಸಾಧ್ಯ. ಅಂಬೇಡ್ಕರ್ ಅವರು ಬಡತನದಲ್ಲಿ ಜನಿಸಿ, ಕಷ್ಟಪಟ್ಟು ಶಿಕ್ಷಣ ಕಲಿತರು. ಅಲ್ಲದೇ ಅಸ್ಪೃಶ್ಯತೆ ಹೋಗಲಾಡಿಸುವ ನಿಟ್ಟಿನಲ್ಲಿ ಹೋರಾಡಿದರು. ಇಂದಿನ ಯುವಕರಿಗೆ ಸ್ಫೂರ್ತಿಯಾಗಿರುವ ಅವರನ್ನು ದಿನವಿಡೀ ಸ್ಮರಿಸಬೇಕು. ಅಂಬೇಡ್ಕರ್ ದೇಶಕ್ಕಾಗಿ ತಮ್ಮ ಜೀವನವನ್ನೇ ತ್ಯಾಗ ಮಾಡಿದ್ದಾರೆ ಎಂದ ಅವರು, ಪ್ರತಿಯೊಬ್ಬರು ತಮ್ಮ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕು. ಡಾ.ಅಂಬೇಡ್ಕರ್ ಅವರ ಆಸೆಯಂತೆ ನಾವು ಶಿಕ್ಷಣದ ಮೂಲಕ ಹೋರಾಟ ಮಾಡೋಣ ಎಂದರು.

ಇದಕ್ಕೂ ಮುನ್ನ ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಬಿ.ಹರ್ಷವರ್ಧನ್, ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ನಗರಸಭಾಧ್ಯಕ್ಷ ಮಹದೇವಸ್ವಾಮಿ, ಪ್ರೊ.ನಾಗಣ್ಣ, ತಹಸೀಲ್ದಾರ್ ಶಿವಮೂರ್ತಿ, ಇಓ ಶ್ರೀನಿವಾಸ್, ನಗರಸಭಾ ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ ಡಿವೈಎಸ್ಪಿ ಗೋವಿಂದ ರಾಜು, ಆಯುಕ್ತ ರಾಜಣ್ಣ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಬಿ.ಜಿ.ಶ್ರೀನಿವಾಸ್ ಪ್ರಸಾದ್ ಸೇರಿದಂತೆ ಪ್ರಮುಖರಿದ್ದರು.

ಕೆಲವರಿಂದ ಅಂಬೇಡ್ಕರ್ ಸಂವಿಧಾನ ದುರ್ಬಳಕೆ

ಪುರಸಭಾ ಸದಸ್ಯ ಅರ್ಜುನ್ ಆರೋಪ



ತಿ.ನರಸೀಪುರ, ಏ.14 (ಎಸ್‌ಕೆ)– ಭಾರತರತ್ನ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಕೊಟ್ಟ ಸಂವಿಧಾನವನ್ನು ಕೆಲವರು ತಮ್ಮ ಹೊಟ್ಟೆಪಾಡಿಗೆ, ಜೀವನ ನಡೆಸಲು ಬಳಸಿಕೊಳ್ಳುತ್ತಿದ್ದಾರೆ ಎಂದು ಪುರಸಭಾ ಸದಸ್ಯ ಅರ್ಜುನ್ ಆರೋಪಿಸಿದರು.

ಪಟ್ಟಣದ ಗೋಪಾಲಪುರ ಗ್ರಾಮದಲ್ಲಿರುವ ಬಿಜೆಪಿ ಜನಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ 131ನೇ ಜಯಂತಿಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

ಬಾಬಾ ಸಾಹೇಬರು ಇತಿಹಾಸವನ್ನು ಯಾರು ಮರೆಯುತ್ತಾರೋ ಅವರಿಂದ ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದರು. ಅವರು ಹೇಳಿದಂತೆ ಸಂವಿಧಾನ ಎಂದರೇನು? ಅದನ್ನೇಕೆ ರಚಿಸಲಾಯಿತು. ಅದರಿಂದಾಗುವ ಅನುಕೂಲಗಳೇನು ಎಂಬುದನ್ನು ತಿಳಿಯದ ಕೆಲವರು ಸಂವಿಧಾನದ ಹೆಸರಿನಲ್ಲಿ ಜೀವನ ನಡೆಸಲು ಮುಂದಾಗಿದ್ದಾರೆ. ಅದಕ್ಕಾಗಿ ಸಂವಿಧಾನದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಕೇವಲ ಹೊಟ್ಟೆ ಪಾಡಿಗಾಗಿ ರಚಿತವಾದ ಬೃಹತ್ ಸಂವಿಧಾನ ನಮ್ಮದಲ್ಲ. ಜೀವನ ಮಾಡಲಷ್ಟೇ ಬಾಬಾ ಸಾಹೇಬರು ಸಂವಿಧಾನ ಬರೆಯಲಿಲ್ಲ. ಇಡೀ ರಾಷ್ಟ್ರ ಸಮಾನತೆಯ ನಿಟ್ಟಿನಲ್ಲಿ ಸಾಗಬೇಕೆಂದು ಅವರು ಸಂವಿಧಾನ ನೀಡಿದರು. ಇದರ ದುರ್ಬಳಕೆ ಸರಿಯಲ್ಲ ಎಂದರು.

ಇನ್ನೊಂದೆಡೆ ಅಂಬೇಡ್ಕರ್, ಯಾರು ಎಷ್ಟು ಸುದೀರ್ಘ ಕಾಲ ಬದುಕುತ್ತೀವಿ ಎಂಬುದು ಮುಖ್ಯವಲ್ಲ. ಎಷ್ಟು ಶ್ರೇಷ್ಠರಾಗಿ ಬದುಕುತ್ತೀವಿ ಎಂಬುದು ಮುಖ್ಯ ಎಂದಿದ್ದರು. ಆ ನಿಟ್ಟಿನಲ್ಲಿ ನಾವು ಶ್ರೇಷ್ಠರಾಗಿ ಬದುಕಬೇಕಿದೆ ಎಂದರು.

ಬದುಕಿದ್ದರೆ ಸಂವಿಧಾನ ಸುಟ್ಟು ಹಾಕುತ್ತಿದ್ದರೇನೋ: ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಯಾವತ್ತು ಸಂವಿಧಾನಕ್ಕೆ ಅಪಮಾನ ಮಾಡುವಂತಹ ಕೆಲಸವಾಗುತ್ತದೋ ಅಂದು ನಾನೇ ಸಂವಿಧಾನ ಸುಟ್ಟು ಹಾಕುತ್ತೇನೆ ಎಂದು ಹೇಳಿದ್ದರು. ಬಹುಶಃ ಅವರು ಬದುಕಿದ್ದರೆ ಆ ಕೆಲಸ ಆಗುತ್ತಿತ್ತೇನೋ, ಯಾಕೆಂದರೆ ಅನೇಕ ರಾಜಕಾರಣಿಗಳು ಸಂವಿಧಾನದ ಆಶಯಕ್ಕೆ ತಕ್ಕಂತೆ ನಡೆಕೊಳ್ಳುತ್ತಿಲ್ಲ. ಹಾಗಾಗಿ ಮುಂದೆಯಾದರೂ ಅಂಬೇಡ್ಕರ್ ಅವರಿಗೆ ಹಾಗೂ ಸಂವಿಧಾನಕ್ಕೆ ಗೌರವ ಸಲ್ಲಿಸುವ ಕೆಲಸ ಮಾಡಬೇಕು. ಸಂವಿಧಾನದ ವಿರುದ್ಧ ನಡೆಯುವವರಿಗೆ ಸರ್ಕಾರ ಕಠಿಣವಾದ ನೀತಿ ನಿಯಮ ಜಾರಿಗೆ ತಂದು ಶಿಕ್ಷೆಗೊಳಪಡಿಸುವ ಕೆಲಸ ಮಾಡಬೇಕಿದೆ ಎಂದರು.

ಮಕ್ಕಳಿಗೆ ತಿಳಿಸಿಕೊಡಿ: ಸಂವಿಧಾನದ ಪಿತಾಮಹ ಡಾ.ಅಂಬೇಡ್ಕರ್ ಬಗ್ಗೆ ಇನ್ನೂ ಅನೇಕ ಮಕ್ಕಳಿಗೆ ಗೊತ್ತಿಲ್ಲದಿರುವುದು ವಿಷಾದನೀಯ. ಪೋಷಕರು ತಮ್ಮ ಮಕ್ಕಳಿಗೆ ಅವರ ಬಗ್ಗೆ ತಿಳಿಸಿಕೊಡುವ ಕೆಲಸ ಮಾಡಬೇಕಿದೆ. ಅವರು ಕೇವಲ ಜಾತಿಗೆ ಸೀಮಿತವಾದವರಲ್ಲ. ಇಡೀ ರಾಷ್ಟ್ರದ ಆಸ್ತಿಯಾಗಿದ್ದರೆಂಬುದನ್ನು ತಿಳಿಸಿಕೊಡಬೇಕು. ಇಂದು ಸಂವಿಧಾನ ಇಲ್ಲದಿದ್ದರೆ ಎಷ್ಟೋ ಜನ ಕಾರ್ಮಿಕರು, ಮಹಿಳೆಯರು, ಕೆಳ ವರ್ಗಕ್ಕೆ ಸೇರಿದ ಉಪಜಾತಿಗಳು ಬದುಕುವ ಪರಿಸ್ಥಿತಿಯೇ ನಿರ್ಮಾಣವಾಗುತ್ತಿರಲಿಲ್ಲ. ಹಾಗಾಗಿ ದೇಶಕ್ಕೆ ಸಂವಿಧಾನ ನೀಡಿದ ಅಂಬೇಡ್ಕರ್ ಜನ್ಮದಿನ ಆಚರಿಸುವುದೇ ನಮ್ಮ ಹೆಮ್ಮೆ ಎಂದರು.

ಪುರಸಭಾ ಸದಸ್ಯ ನಂಜುಂಡಸ್ವಾಮಿ, ಬಾಬು ಜಗಜೀವನ ರಾಂ ಸಂಘದ ಅಧ್ಯಕ್ಷ ಮಲಿಯೂರು ಶಂಕರ್, ಖಜಾಂಚಿ ಬಿ.ಎಲ್.ಮಹದೇವ, ಎಸ್.ಸಿ. ಮೋರ್ಚಾ ಮಾಜಿ ಅಧ್ಯಕ್ಷ ಸಿದ್ದರಾಜು, ಯಜಮಾನ್ ರಾಜಣ್ಣ, ಸಿ.ಡಿ.ವೆಂಕಟೇಶ್, ಮುಖಂಡರಾದ ಸಂದೀಪ್, ವಿಶ್ವ, ಶಿವು, ವಿನಯ್, ಧನಂಜಯ, ನಾರಾಯಣಸ್ವಾಮಿ, ಶ್ರೀನಿವಾಸ್ ಮತ್ತಿತರಿದ್ದರು.

ತುಳಿತಕ್ಕೊಳಗಾದವರ ಆಶಾಕಿರಣ ಅಂಬೇಡ್ಕರ್

ಲಾಳಂದೇವನಹಳ್ಳಿ ಗ್ರಾಪಂ ಅಧ್ಯಕ್ಷೆ ಜಯಮ್ಮ



ಭೇರ್ಯ, ಏ.14– ಮೇಲು–ಕೀಳೆಂಬ ಜಾತಿ ಕಂದಕಗಳ ನಡುವೆ ಸಿಲುಕಿ ತುಳಿತಕ್ಕೊಳಗಾದವರ ಆಶಾಕಿರಣವಾಗಿ ಈ ಭೂಮಿ ಮೇಲೆ ಅಮರರಾಗಿ ಉಳಿದವರು ಡಾ.ಬಿ.ಆರ್.ಅಂಬೇಡ್ಕರ್ ಎಂದು ಲಾಳಂದೇವನಹಳ್ಳಿ ಗ್ರಾಪಂ ಅಧ್ಯಕ್ಷೆ ಜಯಮ್ಮ ತಿಳಿಸಿದರು.

ಲಾಳಂದೇವನಹಳ್ಳಿ ಗ್ರಾಪಂ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ 131ನೇ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ತನ್ನದೇ ವಿಚಾರಧಾರೆಗಳಿಂದ 'ಆಧುನಿಕ ಮನು' ಎಂದು ಕರೆಸಿಕೊಂಡವರು. ಸಮಾಜಕ್ಕೆ ಅಂಟಿದ ಮೇಲು–ಕೀಳಿನ ತಾರತಮ್ಯವನ್ನು ಕತ್ತಿ, ಗುರಾಣಿ ಹಿಡಿದು ಯುದ್ಧ ಮಾಡುವುದರಿಂದ ಹೋಗಲಾಡಿಸಲು ಸಾಧ್ಯವಿಲ್ಲ. ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದನ್ನು ಜಗತ್ತಿಗೆ ಸಾರಿದವರು. ಸೂರ್ಯ ಚಂದ್ರ ಇರುವಷ್ಟು ದಿನ ಅಂಬೇಡ್ಕರ್ ಅಮರರಾಗಿರುತ್ತಾರೆ. ಅಂಬೇಡ್ಕರ್ ದೇಶದ ಆಸ್ತಿ. ಅವರನ್ನು ಇತ್ತೀಚಿನ ವರ್ಷಗಳಲ್ಲಿ ರಾಜಕೀಯಕ್ಕಾಗಿ ತಮಗೆ ಬೇಕಾದಂತೆ ಬಳಸಿಕೊಳ್ಳುವ ಕಾರ್ಯ ನಡೆಯುತ್ತಿವೆ. ಅದು ಒಳ್ಳೆಯ ರೀತಿಯಲ್ಲಿ ಆದರೆ ಅಡ್ಡಿಯಿಲ್ಲ. ಆದರೆ ಅವರ ಹೆಸರನ್ನು ಸ್ವಾರ್ಥ ಸಾಧನೆಗಾಗಿ ಬಳಸಿಕೊಂಡರೆ ಯಾವುದೇ ಕಾರಣಕ್ಕೂ ಉದ್ಧಾರ ಆಗಲ್ಲ ಎಂದರು.

ಇದೇ ಸಂದರ್ಭ ಪರಿಶಿಷ್ಟ ಜಾತಿ ಮತ್ತು ಪಂಗಡದ ಶೇ.25 ರಷ್ಟು ಅನುದಾನದಲ್ಲಿ 23 ಮಂದಿ ಮಹಿಳೆಯರನ್ನು ಗುರುತಿಸಿ ಹೊಲಿಗೆ ಯಂತ್ರ ವಿತರಣೆ ಮಾಡಿದರು.

ಕಾರ್ಯಕ್ರಮದಲ್ಲಿ ಪಿಡಿಓ ಉಮೇಶ್, ಜಿಪಂ ಮಾಜಿ ಸದಸ್ಯ ಸಿದ್ದಪ್ಪ, ಸದಸ್ಯರಾದ ಬಾಲಾಜಿ, ಸುಮ, ಸುನೀಲ್ ಕುಮಾರ್, ವಸಂತ, ಚೌರಪ್ಪ, ಸುಕನ್ಯಾ, ಶಿವಕುಮಾರ್, ಸಂಪತ್, ದಾಕ್ಷಾಯಿಣಿ, ಮಹೇಶ್, ಪುಷ್ಪಾ, ಸಿಬ್ಬಂದಿಗಳಾದ ಮಹದೇವನಾಯಕ, ರೂಪ, ನೀರಗಂಟಿಗಳು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.

ಭೇರ್ಯ ಗ್ರಾಪಂ: ಇಲ್ಲಿನ ಗ್ರಾಪಂಚಾಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಅಧ್ಯಕ್ಷೆ ತಾಯಮ್ಮ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಪಿಡಿಓ ಕೆ.ಎ.ಮಂಜುನಾಥ್ ಮಾಲಾರ್ಪಣೆ ಮಾಡಿದರು. ಗ್ರಾಪಂ ಸದಸ್ಯರಾದ ಬಿ.ಎಲ್.ರಾಜಶೇಖರ್, ಬಿ.ಕೆ.ಕುಮಾರ್, ಮಂಜಪ್ಪ, ಕೃಷ್ಣೇಗೌಡ, ಕಾರ್ಯದರ್ಶಿ ಸಿಬ್ಬಂದಿಗಳಾದ ಕುಮಾರ್, ಹಾಗೂ ಪೌರಕಾರ್ಮಿಕರು ಉಪಸ್ಥಿತರಿದ್ದರು.

ಹೊಸ ಅಗ್ರಹಾರ ಗ್ರಾಪಂ: ಇಲ್ಲಿನ ಗ್ರಾಪಂನಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯಲ್ಲಿ ಅಧ್ಯಕ್ಷೆ ಪುಷ್ಪಾ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಪಿಡಿಓ ವಿ.ಎ.ಅಶ್ವಿನಿ ಮಾಲಾರ್ಪಣೆ ನೆರವೇರಿಸಿದರು.

ನಿವೃತ್ತ ಮುಖ್ಯ ಶಿಕ್ಷಕ ಹೆಚ್.ಎಸ್. ಸ್ವಾಮಿ ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಮಾತನಾಡಿದರು. ಈ ವೇಳೆ ಗ್ರಾಪಂ ಸದಸ್ಯರಾದ ಸುಕನ್ಯಾ, ಶೇಖರ್, ಹೆಚ್. ರಾಮಚಂದ್ರ, ಕಾರ್ಯದರ್ಶಿ ದೇವೇಂದ್ರಯ್ಯ, ನರೇಗಾ ಇಂಜಿನಿಯರ್ ಶಿವಕುಮಾರ್, ಗ್ರಾಮಸ್ಥರಾದ ಮಹೇಶ್, ಚಂದು, ಪುಟ್ಟೇಗೌಡ, ಸಿಬ್ಬಂದಿಗಳಾದ ಕುಮಾರ್, ಚಂದ್ರನಾಯಕ, ಗಣೇಶ್ ಇತರರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ 131ನೇ ಜಯಂತಿ ಹಿನ್ನೆಲೆ ತಿ.ನರಸೀಪುರದ ತಾಲೂಕು ಕಚೇರಿ ಎದುರಿನ ಉದ್ಯಾನವನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ನೆರಳು ಸೇವಾ ಟ್ರಸ್ಟ್ ಸಂಸ್ಥಾಪಕ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ನಿರ್ದೇಶಕ ಎಂ.ನರಸಿಂಹಮೂರ್ತಿ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿದರು. ಮುಖಂಡರಾದ ಮಹದೇವು, ಮಹೇಶ್, ಅಂದಾನಪ್ಪ, ನಿಲಸೋಗೆ ಮೂರ್ತಿ, ಚೌಹಳ್ಳಿ ಸಿದ್ದರಾಜು, ಶಾಂತರಾಜು, ಅನಿಲ್, ಪ್ರಸಾದ್ ಇನ್ನಿತರರಿದ್ದರು.



ಕಂಪಲಾಪುರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ವೇಳೆ ಅಂಬೇಡ್ಕರ್ ವಸತಿ ಶಾಲೆ ಶಿಕ್ಷಕ ಪುಟ್ಟಮಾದಯ್ಯ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ಮಮತ, ಪಿಡಿಓ ಪರಮೇಶ್, ಸದಸ್ಯರಾದ ಶ್ರೀಪತಿ, ಜಾನಕಿ, ರಾಣಿ, ಕವಿತ, ರಾಜಣ್ಣ, ಬಸಪರಾಜ್, ರೀತು, ಶೇಖರ್, ಯ.ತಮ್ಮಯ್ಯ ಇತರರಿದ್ದರು.



ಬೆಟ್ಟದಪುರ ಗ್ರಾಪಂನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಸೌಮ್ಯ, ಸದಸ್ಯರಾದ ಶಂಕ್, ಗಿರಿಗೌಡ, ಮಂಜುಳಾ, ಮಲ್ಲೇಶ್, ಇಮ್ರಾನ್ ಪಾಷಾ, ಸಿಬಂದಿ ಗಣೇಶ್, ಅಣ್ಣೇಗೌಡ, ದೀಪು ಇತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಮಲಗನಕೆರೆಯಲ್ಲಿ ಶ್ರೀಬಸವೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ನಿಂಗಶೆಟ್ಟಿ ನಿಧನ



ಹೆಚ್.ಡಿ.ಕೋಟೆ, ಏ.14– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ನಿಂಗಶೆಟ್ಟಿ(82) ಗುರುವಾರ ಬೆಳಗಿನ ಜಾವ ನಿಧನರಾದರು. ಮೃತರು ಪತ್ನಿ, ಪುತ್ರ ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಹೆಚ್.ಡಿ.ಕೋಟೆ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ನಾಳೆ ಕೋಟೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಭೇಟಿ

'ಜನತಾ ಜಲಧಾರೆ ರಥಯಾತ್ರೆ'ಗೆ ಚಾಲನೆ



ಹೆಚ್.ಡಿ.ಕೋಟೆ, ಏ.14 (ಮಂಜು)– ನಾಳೆ(ಏ.16) ತಾಲೂಕಿನ ಕಬಿನಿ ಜಲಾಶಯಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಭೇಟಿ ನೀಡಲಿದ್ದು, 'ಜನತಾ ಜಲಧಾರೆ ರಥಯಾತ್ರೆ'ಗೆ ಚಾಲನೆ ನೀಡಲಿದ್ದಾರೆ ಎಂದು ಮಾಜಿ ಶಾಸಕ ಚಿಕ್ಕಣ್ಣ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಕಬಿನಿ ಜಲಾಶಯಕ್ಕೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಆಗಮಿಸುವರು. ಈ ವೇಳೆ ಮಹಿಳೆಯರು ಕಬಿನಿ ಹಿನ್ನೀರಿನಿಂದ ಕಳಸ ಹೊತ್ತು ತಂದು ರಥದ ಕಳಸಕ್ಕೆ ನೀರು ತುಂಬಿಸುವರು. ಬಳಿಕ ಜನತಾ ಜಲಧಾರೆ ರಥಯಾತ್ರೆಗೆ ದೇವೇಗೌಡರು ಚಾಲನೆ ನೀಡಲಿದ್ದಾರೆ. ನಂತರ ಬೀಚನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ಆಯೋಜಿಸಿರುವ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡುವರು.

ಕಾರ್ಯಕ್ರಮದಲ್ಲಿ ಶಾಸಕರಾದ ಸಾ.ರಾ.ಮಹೇಶ್, ಮಹದೇವು, ಅಶ್ವಿನ್ ಕುಮಾರ್, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ಟಿ.ಶ್ರೀಕಂಠೇಗೌಡ, ಮರಿತಿಬ್ಬೇಗೌಡ, ಜಿಲ್ಲಾ ಗ್ರಾಮಾಂತರ ಜೆಡಿಎಸ್ ಅಧ್ಯಕ್ಷ ಎನ್.ನರಸಿಂಹಸ್ವಾಮಿ, ಚಾಮರಾಜನಗರ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಎಂ.ಆರ್.ಮಂಜುನಾಥ್, ಮೈಸೂರು ನಗರ ಜೆಡಿಎಸ್ ಅಧ್ಯಕ್ಷ ಕೆ.ಟಿ.ಚಲುವೇಗೌಡ ಸೇರಿದಂತೆ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ. ಹೀಗಾಗಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಆಗಮಿಸಬೇಕೆಂದು ತಿಳಿಸಿದರು.

ನೀರಾವರಿ ತಜ್ಞರಾಗಿರುವ ದೇವೇಗೌಡರು ಅನೇಕ ನೀರಾವರಿ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅದರಲ್ಲೂ ತಾರಕ ಏತ ನೀರಾವರಿ ಯೋಜನೆ ಅವರ ಅಧಿಕಾರವಧಿಯಲ್ಲೇ ಜಾರಿಗೆ ಬಂತು ಎಂದ ಅವರು ಮುಂಬರುವ 2023ಕ್ಕೆ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿದ್ದು, ಈ ವೇಳೆ ಅನೇಕ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಎಂ.ರಾಜೇಂದ್ರ, ಸರಗೂರು ತಾಲೂಕು ಅಧ್ಯಕ್ಷ ಗೋಪಾಲ ಸ್ವಾಮಿ, ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ಗಾಯಿತ್ರಿ, ಸರಗೂರು ಘಟಕದ ಅಧ್ಯಕ್ಷೆ ಡಿ.ಎಂ. ಸವಿತಾ, ಮುಖಂಡ ರಾದ ನರಸಿಂಹೇಗೌಡ, ಮಳಲಿ ಶಾಂತಕುಮಾರ್, ಷಫೀಉಲ್ಲಾ, ನಾಗನಾಯಕ, ಎಲ್‌ಐಸಿ ರಾಜು, ಶಿವಕುಮಾರ್ ಇದ್ದರು.

ರಾಜಸ್ಥಾನ್ ಮಣಿಸಿ ಅಗ್ರಸ್ಥಾನಕ್ಕೇರಿದ ಗುಜರಾತ್



ಮುಂಬೈ, ಏ.14– ನಾಯಕ ಹಾರ್ದಿಕ್ ಪಾಂಡ್ಯ ಅವರ ಆಲ್‌ರೌಂಡ್ ಆಟದ ನೆರವಿನಿಂದ ಗುಜರಾತ್ ಟೈಟನ್ಸ್ ರಾಜಸ್ಥಾನ್ ರಾಯಲ್ಸ್ ವಿರುದ್ಧ 37 ರನ್ ಅಂತರದ ಗೆಲುವು ದಾಖಲಿಸಿದೆ.

ಈ ಮೂಲಕ ಐಪಿಎಲ್‌ಗೆ ಇದೇ ಮೊದಲ ಬಾರಿಗೆ ಪದಾರ್ಪಣೆ ಮಾಡಿರುವ ಗುಜರಾತ್ ಟೈಟನ್ಸ್, ಆಡಿರುವ ಐದು ಪಂದ್ಯಗಳಲ್ಲಿ ನಾಲ್ಕನೇ ಗೆಲುವಿನೊಂದಿಗೆ ಒಟ್ಟು 8 ಅಂಕಗಳನ್ನು ಸಂಪಾದಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಅತ್ತ ಸಂಜು ಸ್ಯಾಮ್ಸನ್ ಪಡೆ ಟೂರ್ನಿಯಲ್ಲಿ 2ನೇ ಸೋಲಿಗೆ ಒಳಗಾಗಿದೆ.

ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 192 ರನ್ ಗಳಿಸಿತು. ಗುಜರಾತ್ ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 53 ರನ್ ಆಗುವಷ್ಟರಲ್ಲಿ ಮ್ಯಾಥ್ಯೂ ವೇಡ್ 12, ಶುಭಮನ್ ಗಿಲ್ 13 ಹಾಗೂ ವಿಜಯ್ ಶಂಕರ್ 2 ವಿಕೆಟ್ ಕಳೆದುಕೊಂಡಿತು. ಈ ವೇಳೆ ಒಂದಾದ ನಾಯಕ ಹಾರ್ದಿಕ್ ಪಾಂಡ್ಯ, ಅಭಿನವ್ ಮನೋಹರ್ 4ನೇ ವಿಕೆಟ್‌ಗೆ 86 ರನ್ ಜೊತೆಯಾಟವಾಡಿದರು. ಈ ವೇಳೆ ಪಾಂಡ್ಯ ಟೂರ್ನಿಯಲ್ಲಿ ಸತತ 2ನೇ ಅರ್ಧಶತಕ ದಾಖಲಿದರು. ಆದರೆ 43 ರನ್ ಗಳಿಸಿದ್ದ ಅಭಿನವ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಡೇವಿಡ್ ಮಿಲ್ಲರ್ ಬಿರುಸಿನ 31 ರನ್ ಗಳಿಸಿದರು. ಉಳಿದಂತೆ ಹಾರ್ದಿಕ್ ಪಾಂಡ್ಯ 52 ಎಸೆತಗಳಲ್ಲಿ 8 ಬೌಂಡರಿ, 4 ಸಿಕ್ಸರ್ ಒಳಗೊಂಡ 87ರನ್ ಗಳಿಸಿ ಅಜೇಯರಾಗಿ ಉಳಿದರು. ರಾಜಸ್ಥಾನ್ ಪರ ರಿಯಾನ್ ಪರಾಗ್, ಯಜುವೇಂದ್ರ ಚಹಲ್ ಹಾಗೂ ಕುಲದೀಪ್ ಸೇನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಬಳಿಕ ಗುರಿ ಬೆನ್ನತ್ತಿದ ರಾಜಸ್ಥಾನ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಜೋಸ್ ಬಟ್ಲರ್ 24 ಎಸೆತಗಳಲ್ಲಿ 3 ಸಿಕ್ಸರ್, 8 ಬೌಂಡರಿ ಒಳಗೊಂಡ 54 ರನ್ ಗಳಿಸಿದರು. ಉಳಿದಂತೆ ಸಂಜು ಸ್ಯಾಮ್ಸನ್ 11, ಶಿಮ್ರಾನ್ ಹೆಟ್ಮೆಯರ್ 29, ರಿಯಾನ್ ಪರಾಗ್ 18, ಜೇಮ್ಸ್ ನಿಶಾಮ್ 17 ರನ್ ಗಳಿಸಿದರು. ಗುಜರಾತ್ ಪರ ಯಶ್ ದಯಾಳ್, ಲ್ಯೂಕಿ ಫರ್ಗೂಸನ್ ತಲಾ 3, ಹಾರ್ದಿಕ್ ಪಾಂಡ್ಯ, ಮೊಹಮ್ಮದ್ ಶಮಿ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಹಾರ್ದಿಕ್ ಪಾಂಡ್ಯ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.




ಗುಂಗ್ರಾಲ್‌ಛತ್ರ ಗ್ರಾಮ ಪಂಚಾಯಿತಿ ಸದಸ್ಯರು
ಮತ್ತು ಮಾಜಿ ಉಪಾಧ್ಯಕ್ಷರಾದ
ಇ.ಪಿ. ರವಿ
ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಶುಭಕೋರುವವರು : ಕೆ.ಚಂದ್ರಶೇಖರ್ ಮತ್ತು ಸ್ನೇಹಿತರು